ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಸಿಂದಗಿ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಪ್ರಕಾಶ ಗ. ಖಾಡೆ**

ಲೇಖಕರು
**ಡಾ. ರಮೇಶ ಎಸ್. ಕತ್ತಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**SINDAGI:** An Introduction Book on Places in Karnataka that Played a Major Role in the Freedom Struggle, Written by Dr. Ramesh Katti, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸಿಂದಗಿ ಬಂಡಾಯ ಮತ್ತು ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಕಿರು ಹೊತ್ತಿಗೆಯನ್ನು ಬರೆದು ಕೊಡುವಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ತಿಳಿಸಿದಾಗ ಬಹಳ ಅಭಿಮಾನದಿಂದ ಒಪ್ಪಿಕೊಂಡೆನು. ಈ ಬರೆಹ ಬರೆದು ಮುಗಿಸಿದಾಗ ಬಹಳ ತೃಪ್ತಿ ನನಗೆ ನೀಡಿತು. ೭೫ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ೭೫ ಕೃತಿಗಳ ಜೊತೆಗೆ ಈ ಪುಸ್ತಿಕೆ ಪ್ರಕಟಿಸುತ್ತಿರುವುದು ನನಗೆ ಒದಗಿದ ಬಹುದೊಡ್ಡ ಅವಕಾಶವೆಂದೇ ಭಾವಿಸಿದ್ದೇನೆ. ಇದು ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ ಗೌರವವೂ ಆಗಿದೆ.

ಹತ್ತು ದಿನಗಳ ಕಡಿಮೆ ಅವಧಿಯನ್ನು ನೀಡಿದಾಗ ಆರಂಭದಲ್ಲಿ ಹಿಂಜರಿಕೆಯೂ ಇತ್ತು. ಇದನ್ನು ಹೋಗಲಾಡಿಸಿದವರು ಈ ಯೋಜನೆ ಸಂಪಾದಕರಲ್ಲಿ ಒಬ್ಬರಾದ ಡಾ. ಪ್ರಕಾಶ ಖಾಡೆ ಅವರು. ಅವರ ನನ್ನ ಪರಿಚಯ ಬಹಳ ವರ್ಷಗಳದ್ದು, ಬಹಳ ಪ್ರೀತಿಯಿಂದಲೇ ಈ ಕಾರ್ಯವನ್ನು ನನಗೊಪ್ಪಿಸಿ ಪೂರಕ ಕೃತಿಗಳನ್ನು ಅಧ್ಯಯನಕ್ಕೆ ನೀಡಿದರು. ಅವರನ್ನು ಹೃದಯತುಂಬಿ ನೆನೆಯುತ್ತೇನೆ. ವಿಜಾಪುರದ ಸಾಹಿತಿ ಶ್ರೀ ಶಂಕರ ಬೈಚಬಾಳ, ಪ್ರೊ. ಎ.ಆರ್.ಹೆಗ್ಗನದೊಡ್ಡಿ, ಶ್ರೀ ಶಿವರಶರಣ ಗುಗ್ಗರಿ ಅವರು ಈ ಕೃತಿ ಸಿದ್ಧಪಡಿಸುವಲ್ಲಿ ಸಲಹೆ ಸಹಕಾರ ನೀಡಿ ನೆರವಿಗೆ ನಿಂತರು. ಅವರಿಗೆಲ್ಲರಿಗೂ ಅನಂತ ಕೃತಜ್ಞತೆಗಳನ್ನು ಸಲ್ಲಿಸುವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ.ಬಿ.ವಿ.ವಸಂತಕುಮಾರ್, ರಿಜಿಸ್ಟ್ರಾರ್ ಎನ್. ಕರಿಯಪ್ಪ ಹಾಗೂ ಅಕಾಡೆಮಿಯ ಎಲ್ಲ ಸದಸ್ಯರಿಗೂ ಈ ಕಿರುಹೊತ್ತಿಗೆ ಬರೆಯುವ ಅವಕಾಶ ನನಗೆ ಕಲ್ಪಿಸಿದ್ದಕ್ಕೆ ಧನ್ಯವಾದಗಳು. ಪತ್ನಿ ವಿಜಯಲಕ್ಷ್ಮಿ, ಮಕ್ಕಳಾದ ನಿಸರ್ಗ, ನವ್ಯ, ನಮ್ರತ, ರುಷಿಕಾ ಇವರೆಲ್ಲರ ಪ್ರೀತಿಗೆ ಕೃತಜ್ಞತೆಗಳು. ಈ ಕಾರಣಕ್ಕೆ ಸಹಾಯ ಸಹಕಾರ ನೀಡಿದ ಎಲ್ಲರನ್ನೂ ಹೃದಯತುಂಬಿ ಮತ್ತೊಮ್ಮೆ ನೆನೆಯುತ್ತೇನೆ.

**• ಡಾ. ರಮೇಶ ಎಸ್.ಕತ್ತಿ**
ಕಡಣಿ

ಆಲಮೇಲ-೫೮೬ ೨೦೨

# ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೦
ಪ್ರಸ್ತಾವನೆ ೧೩
೧ ಸಿಂದಗಿ ಬಂಡಾಯ ೧೫
೨ ಸಿಂದಗಿ– ದೇವರಹಿಪ್ಪರಗಿ ಭಾಗದ ಸ್ವಾತಂತ್ರ್ಯ ಹೋರಾಟಗಾರರು ೨೧
೩ ಚಿಕ್ಕರೂಗಿ ಚಳುವಳಿಗಾರರು ೨೯
೪ ಆಲಮೇಲ ಪರಿಸರದ ಸ್ವಾತಂತ್ರ್ಯ ಹೋರಾಟಗಾರರು ೪೬
ಸಮಾರೋಪ ೪೯
೫. ಅನುಬಂಧ : ಪೂರಕ ಲೇಖನ–೧: ಸ್ವಾತಂತ್ರ್ಯ ಸೇನಾನಿಗೆ ಕೈ ಬೀಸಿ ಕರೆದ ದೇವರ ನಾವದಗಿಯ ದೇವಾಲಯ ೫೧
ಅನುಬಂಧ: ಪೂರಕ ಲೇಖನ–೨: ಕೆಚ್ಚೆದೆಯ ಕ್ರಾಂತಿಯ ಹಾಡುಗಳ ಕಟ್ಟಿದ ಕಡಣಿ ಕಲ್ಲಪ್ಪ ೬೩

ಗ್ರಂಥಋಣ ೬೭

ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೮

---

## ಪ್ರಸ್ತಾವನೆ

೧೯೪೭ರ ಆಗಸ್ಟ್ ೧೪ರ ಮಧ್ಯರಾತ್ರಿ ಈ ದೇಶವನ್ನು ತೊರೆದ ಬ್ರಿಟಿಷರು ಭಾರತಮಾತೆಗೆ ಬಂಧ ವಿಮೋಚನೆ ಮಾಡಿದರು. ದೇಶದ ತುಂಬೆಲ್ಲ ಹರ್ಷೋದ್ಗಾರ, ಜಯಕಾರಗಳು ಮೊಳಗಿದವು. ಭಾರತಕ್ಕೆ ಅಂಟಿದ ಶಾಪ ಹೋಯಿತು. ಆದರೆ ಇದರ ಹಿಂದಿನ ಭಾರತದ ಕೋಟಿಕೋಟಿ ಪ್ರಜೆಗಳ ಶ್ರಮ, ಅಸಂಖ್ಯ ಸಾವು–ನೋವುಗಳು, ತ್ಯಾಗ ಬಲಿದಾನಗಳ ಒಟ್ಟು ಮೊತ್ತವನ್ನು ನಾವು ತಿಳಿದುಕೊಳ್ಳಬೇಕಿದೆ. ಅನಾಮತ್ತಾಗಿ ಈ ದೇಶಕ್ಕೆ ಸ್ವಾತಂತ್ರ್ಯ ಸಿಗಲಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಆ ಸಂಗತಿಯನ್ನು ಅರಿತುಕೊಳ್ಳುವುದು ಮುಖ್ಯವೇ ಆಗಿದೆ.

ದೇಶ ತುಂಬೆಲ್ಲ ಹರತಾಳಗಳು, ಉಪವಾಸ ನಿರಂತರವಾಗಿ ನಡದೇ ಇದ್ದವು. ಕರ್ನಾಟಕದಲ್ಲೂ ಗಾಂಧೀಜಿಯವರ ಪ್ರಭಾವದಿಂದ ಕರುನಾಡಿನ ತುಂಬೆಲ್ಲ ಹೋರಾಟಗಳು ನಡೆದವು. ೧೮೫೭ರ ಸಿಪಾಯಿ ದಂಗೆಯ ಮೊದಲೂ ಚಳುವಳಿಗಳು ನಡೆದವು. ಗಾಂಧೀಜಿ ಅವರ ಹೋರಾಟಕ್ಕೂ ಮೊದಲು ನಾಡಿನ ಬಹುತೇಕ ಸಂಸ್ಥಾನಗಳು ಬ್ರಿಟಿಷರ ಕಪಿಮುಷ್ಠಿಯಿಂದ ಪಾರಾಗಲು ಸದಾ ಹೋರಾಟ ಮಾಡುತ್ತಿದ್ದವು. ಕಿತ್ತೂರು ಸಂಸ್ಥಾನ, ಬೆಳವಡಿ ಸಂಸ್ಥಾನಗಳು, ಝಾನ್ಸಿ ಹೀಗೆ ಹತ್ತಾರು ಮೂಲೆಗಳಿಂದ ಹೋರಾಟಗಳು ಜರುಗಿದವು. ವಿಜಯಪುರ ಜಿಲ್ಲೆಯಲ್ಲೂ ದೇಶವನ್ನು ಸ್ವತಂತ್ರಗೊಳಿಸಲು ಬಹಳಷ್ಟು ಪ್ರಮುಖರು ಹೋರಾಟ ಮಾಡಿದ್ದನ್ನು ಇಲ್ಲಿ ಸ್ಮರಿಸಬಹದು.

ದೇಶ ವಿಮೋಚನೆ ಆಗುವಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕೊಡುಗೆ ಅಪಾರ. ೧೮೫೭ರ ಸಿಪಾಯಿ ದಂಗೆಯ ಮುಂಚೆಯೂ ಈ ನೆಲದಲ್ಲಿ ಪ್ರತಿಭಟನೆ ನಡೆಯಿತು. ೧೮೨೪ರಲ್ಲಿ ತೆರಿಗೆಯನ್ನು ನೀಡುವದಿಲ್ಲ ಎಂದು ಸಿಂದಗಿ ಸಂಸ್ಥಾನದ ಕೆಲವು ನಾಗರಿಕರು ಹಟ ಹಿಡಿದರು. ಬ್ರಿಟಿಷರ

ತೆರಿಗೆನೀತಿಯು ಇಲ್ಲಿನ ಜನರನ್ನು ರೊಚ್ಚಿಗೇಳುವಂತೆ ಮಾಡಿತು. ಆ ಕಾರಣಕ್ಕಾಗಿ ನಡೆದುದು ಸಿಂದಗಿ ಬಂಡಾಯ. ಸಿಂದಗಿ ಬಂಡಾಯ ಬ್ರಿಟಿಷರ ಪಾಲಿಗೆ ಮೊದಲ ಸೋಲಾಯಿತು.

ಆ ನಂತರದ ದಿನಗಳಲ್ಲೂ ಸ್ವತಂತ್ರ ರಾಷ್ಟ್ರಕ್ಕಾಗಿ ಹೋರಾಟಗಳು ನಡೆದವು. ವಿಜಾಪುರ ಜಿಲ್ಲೆಯಲ್ಲೂ ಇದಕ್ಕೆ ಪೂರಕವೆಂಬಂತೆ ಹೋರಾಟದ ಹಾದಿಯಲ್ಲಿ ಕೆಲಸಗಳು ನಡೆದವು. ಸಿಂದಗಿ ತಾಲ್ಲೂಕಿನಲ್ಲೂ ವಿವಿಧ ಹಳ್ಳಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಾಗುತ್ತಾ ಹೋಯಿತು. ದೇವರಹಿಪ್ಪರಗಿ ಸಮೀಪದ ಚಿಕ್ಕರೂಗಿ, ತಾಂಬಾ, ಅಥರ್ಗಾ, ಆಲಮೇಲ ಮೊದಲಾದ ಗ್ರಾಮಗಳಲ್ಲಿ ಚಳುವಳಿಗಾರರು ಸತ್ಯಾಗ್ರಹ, ಸರಕಾರಿ ಆಸ್ತಿಗಳನ್ನು ನಾಶಮಾಡುವುದರ ಮೂಲಕ ದೇಶದಾದ್ಯಂತ ನಡೆದ ಹೋರಾಟಕ್ಕೆ ಬೆಂಬಲಿಸಿದರು. ಕೆಲವು ಹೋರಾಟಗಾರರು ನಿತ್ಯ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗುತ್ತಾ ಆಕ್ರೋಶ ವ್ಯಕ್ತಪಡಿಸಿದರು. ಕೆಲವು ಗ್ರಾಮಗಳಲ್ಲಿ ಕುಲಕರ್ಣಿಕಿ, ಗೌಡಕಿ ಮನೆತನದವರು ಹೋರಾಟಗಾರರ ಪರ ನಿಂತು ಸಹಾಯ ಮಾಡಿದರು. ಇದನ್ನು ಖಂಡಿಸಿ ಅವರ ಹುದ್ದೆಗಳನ್ನು ಕಿತ್ತಿಕೊಂಡ ಉದಾಹರಣೆಗಳು ಸಾಕಷ್ಟಿವೆ. ದೇಶದ ಈ ಚಳುವಳಿಯಲ್ಲಿ ಸಿಂದಗಿ ತಾಲ್ಲೂಕಿನ ಬಹಳಷ್ಟು ಜನರು ಭಾಗವಹಿಸಿ ದೇಶಪ್ರೇಮ ಮೆರೆದಿರುವದನ್ನು ಕಾಣಬಹುದಾಗಿದೆ. ಅಂತಹ ಸಾಧಕರ ಕುರಿತಾಗಿ ಸಿಂದಗಿ ಬಂಡಾಯ ಕಿರು ಹೊತ್ತಿಗೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ೭೫ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ೭೫ ಕೃತಿಗಳ ಜೊತೆಗೆ ಈ ಕಿರು ಪುಸ್ತಕವು ಪ್ರಕಟಿಸುತ್ತಿರುವುದು ಸ್ವಾತಂತ್ರ್ಯದ ಹೋರಾಟಗಾರರಿಗೆ ನೀಡಿದ ಗೌರವವಾಗಿದೆ.

❑

## ೧. ಸಿಂದಗಿ ಬಂಡಾಯ (೧೮೨೪)

ದೇಶ ವಿಮೋಚನೆ ಆಗುವಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕೊಡುಗೆ ಅಪಾರ. ೧೮೫೭ರ ಸಿಪಾಯಿ ದಂಗೆಯ ಮುಂಚೆಯೂ ಈ ನೆಲದಲ್ಲಿ ಪ್ರತಿಭಟನೆ ನಡೆದಿತ್ತು. ೧೮೨೪ರಲ್ಲಿ ತೆರಿಗೆಯನ್ನು ನೀಡುವದಿಲ್ಲ ಎಂದು ಸಿಂದಗಿ ಸಂಸ್ಥಾನದ ಕೆಲವು ನಾಗರಿಕರು ಹಟ ಹಿಡಿದರು. ಬ್ರಿಟಿಷರಿಗೆ ತೆರಿಗೆನೀತಿ ಇಲ್ಲಿನ ಜನರನ್ನು ರೊಚ್ಚಿಗೇಳುವಂತೆ ಮಾಡಿತು. ಆ ಕಾರಣಕ್ಕಾಗಿ ನಡೆದುದು ಸಿಂದಗಿ ಬಂಡಾಯ. ೧೮೨೦ರಲ್ಲಿ ಹೊಸ ತೆರಿಗೆ ನೀತಿ ಜಾರಿಗೆ ತಂದ ಬ್ರಿಟಿಷರ ಕ್ರಮದ ವಿರುದ್ಧ ಇಲ್ಲಿನ ಪ್ರಜೆಗಳು ಬಂಡೇಳುವಂತೆ ಮಾಡಿತು. ಇದು ವಿಜಾಪುರ ಜಿಲ್ಲೆಯಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಹೋರಾಟ ಎಂದು ಚರಿತ್ರೆಯಲ್ಲಿ ದಾಖಲಾಗಿದೆ.

೧೮೨೪ರ ಡಿಸೆಂಬರ ತಿಂಗಳಲ್ಲಿ ಚಿದಂಬರ ದೀಕ್ಷಿತ ಅವರು ಬ್ರಿಟಿಷ್ ತೆರಿಗೆ ನೀತಿಯನ್ನು ಖಂಡಿಸಿ ನಾವು ತೆರಿಗೆಯನ್ನು ಕಟ್ಟುವದಿಲ್ಲ ಎಂದು ಘೋಷಣೆ ಮೊಳಗಿಸಿದರು. ಗುಂಪೊಂದನ್ನು ಕಟ್ಟಿಕೊಂಡು ಬಂಡಾಯದ ಬಾವುಟ ಹಾರಿಸಿದರು. ಇನ್ನು ಮುಂದೆ ಈಸ್ಟ್ ಇಂಡಿಯಾ ಕಂಪನಿ ಇರುವದಿಲ್ಲ. ನಾವುಗಳ ಆ ಕಂಪನಿಯ ಆದೇಶಕ್ಕೆ ಬೆಲೆ ಕೊಡುವದಿಲ್ಲ, ಯಾರೂ ತೆರಿಗೆಯೂ ಕಟ್ಟಬಾರದು, ನಾವೆಲ್ಲ ಸ್ವತಂತ್ರರು ಎಂದು ಭಾಷಣ ಮಾಡಿದರು. ಚಿದಂಬರ ದೀಕ್ಷಿತ ಅವರ ಮಗ ದಿವಾಕರ ದೀಕ್ಷಿತ, ರಾವಜಿ ರಾಸ್ತಿಯಾ, ಬಾಳಪ್ಪ ದೇಶಪಾಂಡೆ, ಅಲೂಪ ಪಿಂಡಾರಿ, ಶೆಟ್ಟೆಯಪ್ಪ ಮತ್ತು ಶೀನಪ್ಪ ಮೊದಲಾದವರು ಈ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರು. ಕಂಪನಿಯ ವಿರುದ್ಧ ಬಂಡಾಯವೆದ್ದುದರ ಭಾಗವಾಗಿ ಕಂಪನಿಯ ಸ್ವತ್ತನ್ನು ವಶಪಡಿಸಿಕೊಂಡು ಅಲ್ಲಿ ಬಂಡಾಯದ ಬಾವುಟ ಹಾರಿಸಿದರು. ಇದು ಐತಿಹಾಸಿಕ ಕ್ಷಣವಾಯಿತು.

ಸಿಂದಗಿ ಹಾಗೂ ಸುತ್ತಲಿನ ಹಳ್ಳಿಗಳ ಕರವನ್ನು ತಾವೇ ಸಂಗ್ರಹಿಸತೊಡಗಿದರು. ಇಲ್ಲಿನ ಮಾಹಿತಿಯು ಧಾರವಾಡಕ್ಕೆ ತಲುಪಿತು. ಸಿಂದಗಿ ಬಂಡಾಯ ಬ್ರಿಟಿಷರ ಮೊದಲ ಸೋಲು ಆಯಿತು. ಆದರೆ ಇಲ್ಲಿನ ವಿದ್ರೋಹಿಗಳಿಂದ ಬಂಡಾಯದ ಹೋರಾಟದ ಫಲ ಬಹಳ ದಿನ ಉಳಿಯಲಿಲ್ಲ. ಕೆಲವರು ಸರಕಾರಕ್ಕೆ ಇವರ ವಿರುದ್ಧ ಮಾಹಿತಿ ನೀಡಿದರು.

ಅಣ್ಣಪ್ಪ ಫಡಕೆ ಎಂಬುವವನು ಧಾರವಾಡದ ಕಂಪನಿ ಮೇಲಾಧಿಕಾರಿಗಳಿಗೆ ಸಿಂದಗಿ ಸಂಚಿನ ಎಲ್ಲ ಮಾಹಿತಿಯನ್ನು ನೀಡಿದನು. ಸಿಂದಗಿ ಬಂಡಾಯದ ಘಟನೆಯು ಬ್ರಿಟಿಷರಿಗೆ ಆಕ್ರೋಶ ತರಿಸಿತು. ಧಾರವಾಡದ ಕಲೆಕ್ಟರ್ ಸ್ಟಿವನ್‌ಸನ್ ಆದೇಶವೊಂದನ್ನು ಹೊರಡಿಸಿ ಬಂಡಾಯಗಾರರ ಸುಳಿವು ನೀಡಿದವರಿಗೆ ೧೦೦ ರೂ. ಬಹುಮಾನ ಘೋಷಣೆ ಮಾಡಿದನು. ಬಹುಮಾನದ ಆಸೆಗಾಗಿ ಅಣ್ಣಪ್ಪ ಫಡಕೆ ಎಂಬಾತನು ಬಂಡಾಯಗಾರರ ಸುಳಿವು ನೀಡಿದನು. ಬ್ರಿಟಿಷ ಸೇನೆಯು ಸಿಂದಗಿಗೆ ಬಂದು ದೊಡ್ಡಮಟ್ಟದಲ್ಲಿ ದಾಳಿ ಮಾಡಿತು. ಈ ಸಂದರ್ಭದಲ್ಲಿ ಬಂಡಾಯಗಾರರಿಗೆ ಸೈನ್ಯವನ್ನು ಎದುರಿಸಲು ಆಧುನಿಕ ಶಸ್ತ್ರಾಸ್ತ್ರಗಳಿರಲಿಲ್ಲ. ಸ್ಥಳೀಯರ ಬೆಂಬಲವೂ ಸಿಗದ ಕಾರಣ ಕಡಿಮೆ ಸಂಖ್ಯೆಯಲ್ಲಿದ್ದ ಬಂಡಾಯಗಾರರು ಸೋಲನ್ನೊಪ್ಪಿಕೊಳ್ಳಬೇಕಾಯಿತು. ಸಿಂದಗಿ ಆಡಳಿತ ಮತ್ತೇ ಬ್ರಿಟಿಷರ ಕೈವಶವಾಯಿತು. ಸಿಂದಗಿ ಕೋಟೆಯನ್ನು ತನ್ನ ಹಿಡಿತಕ್ಕೆ ಕಂಪನಿ ಸರಕಾರ ಪಡೆದುಕೊಂಡು ಸಿಂದಗಿ ಬಂಡಾಯದ ಪ್ರಮುಖರಾದ ಚಿದಂಬರ ದೀಕ್ಷಿತ, ದಿವಾಕರ ದೀಕ್ಷಿತ, ರಾವಜಿ ರಾಸ್ತಿಯಾ, ಬಾಳಪ್ಪ ದೇಶಪಾಂಡೆ, ಅಲೂಪ ಪಿಂಡಾರಿ, ಶೆಟ್ಟಿಯಪ್ಪ ಮತ್ತು ಶೀನಪ್ಪ ಮೊದಲಾದ ಎಲ್ಲ ಸಂಚುಗಾರರನ್ನು ಬಂಧಿಸಿ ಶಿಕ್ಷೆಗೊಳಪಡಿಸಿತು.

ಸಂಚು ರೂಪಿಸಿ ಬ್ರಿಟಿಷರಿಗೆ ಸುಳಿವು ನೀಡಿದ ಅಣ್ಣಪ್ಪ ಫಡಕೆಯನ್ನು ಬಂಡಾಯಗಾರರು ಕೊಂದುಹಾಕಿದರು. ಬಂಡಾಯಗಾರರ ಆಕ್ರೋಶಕ್ಕೆ ಬಲಿಯಾದ ಅಣ್ಣಪ್ಪನ ಕುಟುಂಬಕ್ಕೆ ಸಿಂದಗಿಯಲ್ಲಿ ಉಂಬಳಿಯಾಗಿ ಕಂಪನಿ ಸರಕಾರವು ಜಮೀನು ನೀಡಿತು. ಈ ಬಂಡಾಯ ವಿಫಲವಾದರೂ ಜಿಲ್ಲೆಯಲ್ಲಿ ಸಣ್ಣದಾಗಿ ಬ್ರಿಟಿಷರ ವಿರುದ್ಧ ಅಸಮಾಧಾನದ ಹೊಗೆ ಎಬ್ಬಿಸಿದ್ದಂತೂ ಸತ್ಯ.

## ಚಾಂದಕವಟೆ ಬಂಡಾಯ

ಸಿಂದಗಿ ತಾಲ್ಲೂಕಿನ ಚಾಂದಕವಟೆ ಗ್ರಾಮವನ್ನು ಬಸಲಿಂಗಪ್ಪ



ದೇಶಮುಖರು ಊರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ನೋಡಿಕೊಳ್ಳುತ್ತಿದ್ದರು. ಚಾಂದಕವಟೆ ದೇಶಮುಖರೆಂದರೆ ಅದೊಂದು ದೌಲತ್ತಿನ ಮನೆತನದ ಆಡಳಿತ. ಸಿಂದಗಿ ಬಂಡಾಯದಿಂದಾಗಿ ಸ್ವಾತಂತ್ರ್ಯ ಹೋರಾಟದ ಗಂಡುಮೆಟ್ಟಿನ ನೆಲ ಎಂದೇ ಈ ಭಾಗ ಪ್ರಸಿದ್ಧಿಯಾಗಿತ್ತು. ಚಾಂದಕವಟೆಯ ಬಂಡಾಯವು ಒಂದು ಕ್ರಾಂತಿಕಾರಿ ಹೆಜ್ಜೆಯೇ ಆಯಿತೆನ್ನಬಹುದು.

ಚೆಂದದ ಊರು ಚಾಂದಕವಟೆ ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಚಾರಿತ್ರಿಕ ಘಟನೆಗೆ ಸಾಕ್ಷಿಯಾದ ಊರು. ಇಲ್ಲಿನ ದೇಶಮುಖರಾದ ಬಸಲಿಂಗಪ್ಪನವರು ಬ್ರಿಟಿಷರ ವಿರುದ್ಧ ಬಂಡಾಯದ ಕಹಳೆ ಊದಲು ಸ್ವತಂತ್ರ ಸೈನ್ಯವನ್ನು ಕಟ್ಟುತ್ತಾರೆ. ಈ ಕೆಲಸಕ್ಕೆ ಸುರಪುರದ ವೆಂಕಟಪ್ಪನಾಯಕ, ಸೊಲ್ಲಾಪುರದ ನಾನಾಸಾಹೇಬ ಪೇಶ್ವೆಯವರು ಸಹಕಾರವನ್ನು ನೀಡುತ್ತಾರೆ. ಬಂಡಾಯದ ಸಂಚನ್ನು ತಿಳಿದುಕೊಂಡ ಬ್ರಿಟಿಷರು ಬಸಲಿಂಗಪ್ಪ ದೇಶಮುಖರನ್ನು ಬಂಧಿಸಿ, ಅವನ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಬಂಡಾಯವನ್ನು ಹತ್ತಿಕ್ಕುತ್ತಾರೆ.

## ಮಹಾ ದೇಶಭಕ್ತ ವಾಸುದೇವ ಫಡತಾರೆಗೆ ಆಶ್ರಯ ನೀಡಿದ ನೆಲ

ತಾಲ್ಲೂಕಿನ ದೇವರನಾವದಗಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯವು ರಾಷ್ಟ್ರಮಟ್ಟದ ಸ್ವಾತಂತ್ರ್ಯಸೇನಾನಿ ಮಹಾದೇಶಭಕ್ತ ವಾಸುದೇವ ಫಡತಾರೆಗೆ ಆಶ್ರಯ ನೀಡಿದ್ದು ಚರಿತ್ರೆಯ ಪುಟಗಳಲ್ಲಿ ಅವಿಸ್ಮರಣೀಯವಾಗಿ ಉಳಿದಿದೆ. ೧೮೭೯ರ ಜುಲೈ ೨೦ ಭೀಮಾ ನದಿಯನ್ನು ದಾಟಿದ ಫಡಕೆ, ತನ್ನ ಸಂಗಾತಿ ಗೋಪಾಲ್ ಮೋರೇಶ್ವರನೊಡನೆ ಸೂರ್ಯಾಸ್ತದ ವೇಳೆಗೆ ದೇವರನಾವದಗಿ ಎಂಬ ಚಿಕ್ಕ ಹಳ್ಳಿಯನ್ನು ತಲುಪಿದನು. ಇಲ್ಲಿಂದಲೇ ಹೋರಾಟವನ್ನು ತೀವ್ರಗೊಳಿಸಿದನು. ದೇವರನಾವದಗಿಗೆ ೧೮೮೬ರ ಅಕ್ಟೋಬರ್ ೧೨ರಂದು ಡೇನಿಯಲ್ ಎಂಬ ಅಧಿಕಾರಿ ದೇವಾಲಯಕ್ಕೆ ಮುತ್ತಿಗೆ ಹಾಕಿ ಬಂಧಿಸಿ ಜೈಲಿಗಟ್ಟುತ್ತಾನೆ. ಇಂತಹ ಅಪ್ರತಿಮ ದೇಶಭಕ್ತನು ದೇವರನಾವದಗಿಗೆ ಬಂದಿದ್ದು, ಆಶ್ರಯ ಪಡೆದಿದ್ದು ಎಲ್ಲವೂ ಅವಿಸ್ಮರಣೀಯವೇ. ಈ ಕುರಿತು ಸುದೀರ್ಘ ಲೇಖನವೊಂದು ಸಂಶೋಧಕ ಶ್ರೀ ಶಿವಶರಣ ಗುಗ್ಗರಿ ಅವರು ಬರೆದಿದ್ದಾರೆ. ಅದನ್ನು ಈ ಕೃತಿಗೆ ಪೂರಕವಾಗಿ ಕೊನೆಯಲ್ಲಿ ಬಳಸಲಾಗಿದೆ.

## ಆಲಮೇಲದ ಸತ್ಯಾಗ್ರಹ

ಆಲಮೇಲ ಪರಿಸರದಲ್ಲಿ ಬರುವ ದೇವರನಾವದಗಿ ಸೇರಿದಂತೆ ದೇವಣಗಾಂವ, ಕಡಣಿ, ಚಿಕ್ಕರೂಗಿ ಮೊದಲಾದ ಹಳ್ಳಿಗಳಿಗೆ ವ್ಯಾಪಾರ ಕೇಂದ್ರವಾಗಿಯೂ ಆಲಮೇಲ ಪ್ರಸಿದ್ಧಿಯಲ್ಲಿತ್ತು. ಈ ನೆಲದಲ್ಲಿ ಸಾಕಷ್ಟು ವೀರಯೋಧರು ದೇಶಸೇವೆ ಮಾಡಿದ್ದಾರೆ. ಈ ಭಾಗದಲ್ಲಿನ ಹಳ್ಳಿಗಳ ಜನರು ಆಲಮೇಲ ಗ್ರಾಮದಲ್ಲಿ ಬಂದು ವೈಯಕ್ತಿಕ ಸತ್ಯಾಗ್ರಹ ನಡೆಸಿದ್ದು ಇದೆ. ಚಿಕ್ಕರೂಗಿ ಚಳುವಳಿಗಾರರು ದುಂಡಪ್ಪ ಉಪ್ಪಾರ ಸೇರಿದಂತೆ ಮೊದಲಾದವರು ಇಲ್ಲಿಗೆ ಸತ್ಯಾಗ್ರಹ ಚಳುವಳಿ ನಡೆಸಿದ್ದರು. ಆಲಮೇಲ ದೇಶಮುಖರು ದೇಶಭಕ್ತರಿಗೆ ಸಹಾಯಹಸ್ತ ನೀಡಿರುವುದು, ಹಣಮಂತ ಪಾಟೀಲ, ರಂಗೋರಾವ್ ಕುಲಕರ್ಣಿ, ಸಂಗಪ್ಪ ಸಲಾದಳ್ಳಿ ಅವರು ಆಲಮೇಲದವರೇ ಆಗಿದ್ದು ನಾಡಿನ ತುಂಬೆಲ್ಲ ಚಳುವಳಿ ಮಾಡಿ, ಆಲಮೇಲ ಸತ್ಯಾಗ್ರಹದ ತವರು ಎನ್ನುವಂತೆ ಕಾರ್ಯ ಮಾಡಿದ್ದಾರೆ.

## ಉಗ್ರಕೃತ್ಯಗಳ ಮೂಲಕ ಚಳುವಳಿ

ದೇಶಕ್ಕಾಗಿ ಹೋರಾಟ ಮಾಡಿದ ಸನ್ನಿವೇಶಗಳು ಹಲವು ಬಗೆಯವು. ಈ ಭಾಗದ ಹೋರಾಟಗಾರರು ಸರಕಾರಿ ಆಸ್ತಿಗಳನ್ನು ನಾಶ ಮಾಡುವುದನ್ನು ಮುಖ್ಯ ಕಾರ್ಯವನ್ನಾಗಿಸಿಕೊಂಡಿದ್ದರು. ಚಿಕ್ಕರೂಗಿಯ ದುಂಡಪ್ಪ ಉಪ್ಪಾರ, ಯಶವಂತರಾಯ ಪಾಟೀಲ, ಮಲಕಪ್ಪ ಪ್ಯಾಟಿ, ಭೀಮರಾಯ ನಾಟೀಕಾರ, ಗುರುಬಸಪ್ಪ ಹಡಪದ, ಸಿದ್ದಲಿಂಗಪ್ಪ ಕೊಳ್ಳೂರ ಮೊದಲಾದವರು ಮಿಂಚಿನಾಳ ರೈಲ್ವೇಸ್ಟೇಶನ್ ಧ್ವಂಸ ಮಾಡಿದರು, ಟೆಲಿಫೋನ್ ತಂತಿಗಳನ್ನು ಕಡಿದು ಹಾಕಿದರು. ತಾಂಬಾ ಬಂಗ್ಲೆಗೆ ಬೆಂಕಿ ಹಚ್ಚಿದ್ದು, ನಿಂಬಾಳದಲ್ಲಿ ರೈಲು ಹಳಿ ಕೀಳಿದ್ದು ಮೊದಲಾದ ಈ ತರಹದ ಕಾರ್ಯಗಳಲ್ಲಿ ತೊಡಗಿ ಬ್ರಿಟಿಷರ ಆಡಳಿತ ವೈಫಲ್ಯವಾಗುವಂತೆ ಮಾಡಿದರು. ಸಿಂದಗಿ ಭಾಗದಲ್ಲಿ ನಡೆದ ಕಾಯ್ದೆಭಂಗ ಚಳುವಳಿಯ ನೇತೃತ್ವ ವಹಿಸಿದ್ದ ರಾಚಪ್ಪನವರು ತಮ್ಮೂರಿನಿಂದ ಪುರದಾಳವರೆಗಿನ ಈಚಲ, ಸಿಂಧಿ ಗಿಡಗಳನ್ನು ಕಡಿದು ಹಾಕಿ ಬ್ರಿಟಿಷರ ವಿರುದ್ಧ ಸೆಡ್ಡು ಹೊಡೆದರು. ಆಲಮೇಲದ ಹಣಮಂತ ಪಾಟೀಲ ಗಂಧದಮರಗಳನ್ನು ಕಡಿಯುವ ಕಾರ್ಯವನ್ನು ಅಂಕೋಲೆ ತಾಲ್ಲೂಕಿನ ಕಾಡಿನಲ್ಲಿ ಮಾಡುತ್ತಾರೆ. ಹೀಗೆ ಈ ಭಾಗದ ಚಳುವಳಿಗಾರರು ತಮ್ಮ ಆಕ್ರೋಶವನ್ನು ಹೊರಹಾಕುತ್ತಾರೆ.



## ಹೋರಾಟಗಾರರಿಗೆ ಸಹಾಯ ಸಿಂಚನ

ಉಗ್ರಕಾರ್ಯಗಳನ್ನು ಮಾಡುವ ಅನೇಕರು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುತ್ತಿದ್ದರು. ತಮ್ಮ ಮನೆಮಠ ಎಲ್ಲವನ್ನೂ ತೊರೆದು ನಿತ್ಯವೂ ಸ್ವಾತಂತ್ರ್ಯದ ಜಪ ಮಾಡುತ್ತಾ, ತಾರುತಂತಿ ಕತ್ತರಿಸುವುದು, ರೈಲು ಹಳಿ ಕಿತ್ತುವುದು, ಸರಕಾರಿ ದಾಖಲೆಗಳನ್ನು ಸುಡುವುದು, ಬಂಗ್ಲೆ ಮತ್ತು ಸ್ಟೇಶನ್‌ಗಳನ್ನು ಸುಡುವುದು ಹೀಗೆ ನಿರಂತರವಾಗಿ ಮಾಡುತ್ತಾ ಬ್ರಿಟಿಷರ ಕಣ್ಣುತಪ್ಪಿಸಿ ಅಲೆಯುತ್ತಿರುವ ಅದೆಷ್ಟೋ ಚಳುವಳಿಗಾರರಿಗೆ ಊರಲ್ಲಿದ್ದುಕೊಂಡು ಸಹಾಯ ನೀಡುವಂಥ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುವ ಜನರಿದ್ದರು. ಕೇವಲ ಗುಪ್ತಪತ್ರಗಳನ್ನು ಬರೆದು ಕಳಿಸುವುದು, ಪತ್ರಿಕೆಗಳಿಗೆ ಅನಾಮಿಕ ಹೆಸರಿನಲ್ಲಿ ಉಗ್ರಲೇಖನ ಬರೆಯುವ ಮೂಲಕ ಈ ವರ್ಗದ ಹೋರಾಟಗಾರರು ಹೋರಾಟಕ್ಕೆ ಮತ್ತು ಹೋರಾಟಗಾರರಿಗೆ ಬೆಂಬಲಿಸುತ್ತಿದ್ದರು.

## ಮಾಧ್ಯಮದ ಮೂಲಕ ದೇಶಪ್ರೇಮ

ಆಗಿನ ಸಂದರ್ಭದಲ್ಲಿ ಮಾಧ್ಯಮಗಳು ಕೂಡಾ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿ ಲೇಖನಗಳನ್ನು ಪ್ರಕಟಿಸುತ್ತಿದ್ದವು. ಸಂಯುಕ್ತ ಕರ್ನಾಟಕ, ಪ್ರಬುದ್ಧ ಭಾರತ ಮೊದಲಾದವುಗಳು ಉಗ್ರಲೇಖನಗಳನ್ನು ಬರೆದು ಹೋರಾಟ ಬೆಂಬಲಿಸಿದವು. ದೇವರ ಹಿಪ್ಪರಗಿಯ ಹಣಮಂತರಾವ್ ಮೊಹರೆ ಅವರು ೧೯೨೨ರಲ್ಲಿ ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾಗಿ ಈ ಪತ್ರಿಕೆಯಲ್ಲಿ ಉಗ್ರವಾದ ಲೇಖನಗಳನ್ನು ಸ್ವತಂತ್ರವಾಗಿ ಬರೆಯಹತ್ತಿದರು. ಕರ್ನಾಟಕದ ವೀರರೇ ಎಂಬ ಉಗ್ರಲೇಖನ ಪ್ರಕಟವಾದ ಮೇಲೆ ೧೯೨೩ರಲ್ಲಿ ನ್ಯಾಯಾಲಯವು ಜೈಲುಶಿಕ್ಷೆ ಮತ್ತು ನೂರು ರೂಪಾಯಿ ದಂಡ ವಿಧಿಸಿತು. ಇವರು ಮುಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಆಲಮೇಲದ ಹಣಮಂತರಾವ ಪಾಟೀಲ ಅವರು ಪತ್ರಿಕೆಗೆ ಲೇಖನಗಳನ್ನು ಕಳಿಸುತ್ತಿದ್ದರು. ಅಲ್ಲದೆ ಬುಲೆಟಿನ್‌ಗಳನ್ನು ಬರೆದು ಹಳ್ಳಿಗಳಿಗೆ ತಲುಪಿಸುತ್ತಿದ್ದರು. ದೇಶದಲ್ಲಿ ನಡೆದಿರುವ ಹೋರಾಟದ ಸಂಗತಿಗಳನ್ನು ತಿಳಿದುಕೊಳ್ಳಲು ಜನರು ಪತ್ರಿಕೆಗಳನ್ನೇ ಅವಲಂಬಿಸಿದ್ದರು.

❑

# ೨. ಸಿಂದಗಿ– ದೇವರ ಹಿಪ್ಪರಗಿ ಭಾಗದ ಸ್ವಾತಂತ್ರ್ಯ ಹೋರಾಟಗಾರರು

ದೇಶ ಕಂಡ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಂದಗಿ ಜನ್ಮ ನೀಡುವ ಮೂಲಕ ಪುಣ್ಯಭೂಮಿ ಎನಿಸಿಕೊಂಡಿದೆ. ಅಪ್ರತಿಮ ದೇಶಭಕ್ತನಾಗಿ ದೇಶಭಕ್ತರನ್ನು ತಯಾರು ಮಾಡಿದ ಮಹಾನ್ ಸೇನಾನಿ ಸ್ವಾಮಿ ರಾಮಾನಂದ ತೀರ್ಥರು ಸಿಂದಗಿ ಪಟ್ಟಣದಲ್ಲಿ ಜನ್ಮತಳೆದವರು. ಉಗ್ರ ಲೇಖನಗಳನ್ನು ಬರೆದು ನಾಡಿಗೆ ಹೆಸರಾದ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಮೊಹರೆ ಹಣಮಂತ್ರಾಯ ದೇವರ ಹಿಪ್ಪರಗಿಯ ನೆಲದವರು. ದೇಶಭಕ್ತ ವಾಸುದೇವ ಫಡಕೆಗೆ ಆಶ್ರಯ ನೀಡಿದ್ದು ಸಿಂದಗಿ ತಾಲ್ಲೂಕಿನ ದೇವರನಾವದಗಿ. ದೇಶಮುಕ್ತವಾಗುವಲ್ಲಿ ಈ ತಾಲ್ಲೂಕಿನ ಬಹಳ ಜನ ಯೋಧರು ದುಡಿದಿದ್ದಾರೆ. ಅವರು ಮಾಡಿದ ತ್ಯಾಗದ ಫಲವೇ ಇಂದಿನ ಪರಕೀಯ ಮುಕ್ತ ಭಾರತ. ಸಿಂದಗಿ ಬಂಡಾಯದ ನಂತರ ಹೋರಾದ ಕಾವು ಮತ್ತಷ್ಟು ಹೆಚ್ಚಾಗಿತ್ತು. ಗಾಂಧೀಜಿ ಅವರ ಭಾಷಣಕ್ಕೆ ಪ್ರಭಾವಿತರಾದವರು ತಮ್ಮತಮ್ಮ ಊರುಗಳಲ್ಲಿ ಕಾಂಗ್ರೆಸ್ ಕಟ್ಟಿ ದೇಶ ಚಳುವಳಿಗೆ ಧುಮಿಕಿದರು. ಅಂತಹ ಕೆಲ ಪ್ರಮುಖರ ಕುರಿತು ಈ ಅಧ್ಯಾಯದೊಳಗಡೆ ನೋಡೋಣ.

## ಸ್ವಾತಂತ್ರ್ಯ ಸೇನಾನಿ ಸ್ವಾಮಿ ರಾಮಾನಂದ ತೀರ್ಥರು

ಸ್ವಾಮಿ ರಾಮಾನಂದ ತೀರ್ಥರು ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಭವಾನರಾಯ ಖೇಡಗಿ ಮತ್ತು ಕಮಲಾದೇವಿ ಅವರ ಉದರದಲ್ಲಿ ೨೬–೭– ೧೯೦೩ರಲ್ಲಿ ಜನ್ಮತಳೆದರು. ಮೂಲ ಹೆಸರು ವೆಂಕಟೇಶ ಎಂದಾಗಿತ್ತು. ಭವಾನರಾಯರಿಗೆ ಮೂರು ಹೆಣ್ಣುಮಕ್ಕಳಾದ ನಂತರ ಹುಟ್ಟಿದವರೇ ವೆಂಕಟೇಶ. ಬಾಲ್ಯದಲ್ಲಿಯೇ ಬಹಳ ಬುದ್ಧಿವಂತನಾಗಿದ್ದ ವೆಂಕಟೇಶನ ಆರಂಭಿಕ ಶಿಕ್ಷಣ



ಅಕ್ಕ ಗಂಗಾಬಾಯಿಯ ಊರು ಗಾಣಗಾಪೂರದಲ್ಲಿ ನಡೆಯಿತು. ಪ್ರೌಢಶಿಕ್ಷಣಕ್ಕಾಗಿ ಸೊಲ್ಲಾಪುರಕ್ಕಾಗಿ ಹೋದರು. ಅಲ್ಲಿ ಗಾಂಧೀಜಿ, ಲೋಕಮಾನ್ಯರಂತಹ ರಾಷ್ಟ್ರನಾಯಕರ ಭಾಷಣಗಳನ್ನು ಕೇಳುವ ಅವಕಾಶ ಸಿಕ್ಕಮೇಲಂತೂ ದೇಶಪ್ರೇಮ ಅವರನ್ನಾವರಿಸಿತೊಡಗಿತು. ಮುಂದಿನ ವ್ಯಾಂಸಗಕ್ಕಾಗಿ ಪುಣೆಗೆ ಹೋದರು. ಅಲ್ಲಿ ಎಂ.ಎ. ಪದವಿಯನ್ನು ಮುಗಿಸಿಕೊಂಡು ಕಾರ್ಮಿಕ ನಾಯಕರಾಗಿದ್ದ ಎಂ.ಎನ್.ಜೋಶಿ ಅವರಲ್ಲಿ ಕಾರ್ಯನಿರ್ವಹಿಸಿದರು. ಜೋಶಿ ಅವರ ಜೊತೆ ಸಂಸತ್ತಿಗೆ ದೆಹಲಿಗೆ ಹೋಗಬೇಕಾಯಿತು. ಅಲ್ಲಿ ಅತಿ ಶೀತ ಹವಾಮಾನ ಒಗ್ಗದ್ದರಿಂದ ಹಾಸಿಗೆ ಹಿಡಿಯುವಂತಾಯಿತು. ಅವರ ಶರೀರರದ ಮೇಲೆ ಕೆಟ್ಟ ಪರಿಣಾಮ ದೆಹಲಿ ವಾತಾವರಣ ಮಾಡಿತೆನ್ನಬಹುದು. ಅದಾದ ನಂತರ ಮಹಾರಾಷ್ಟ್ರದ ಉಸ್ಮನಾಬಾದ ಜಿಲ್ಲೆಯ ಹಿಪ್ಪರಗಾ ಎಂಬ ಊರಿಗೆ ೧೯೩೦ರಲ್ಲಿ ಬಂದು ನೆಲೆಸುತ್ತಾರೆ. ಅಲ್ಲಿನ ದೇಶಪ್ರೇಮಿಯೊಬ್ಬರ ಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕೆಲವರ್ಷ ಕಾರ್ಯ ನಿರ್ವಹಿಸುತ್ತಾರೆ. ಆ ಶಾಲೆ ದೇಶಭಕ್ತರನ್ನು ತಯಾರಿಸುವ ಕಾರ್ಖಾನೆಯಾಗಿ ಬದಲಾಗುವಲ್ಲಿ ವೆಂಕಟೇಶ ಅವರ ಪಾತ್ರ ಅನನ್ಯವಾದುದು.

ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದ ದೇಶಭಕ್ತ ವಿದ್ಯಾರ್ಥಿಗಳ ಮನದಲ್ಲಿ ಸ್ಥಾಯಿಯಾಗಿ ಉಳಿದರು. ತಮ್ಮ ಶಿಷ್ಯ ಶ್ರೀ ನಾರಾಯಣಸ್ವಾಮಿ ಅವರನ್ನು ಹಿಪ್ಪರಗಿಗೆ ಬರಮಾಡಿಕೊಂಡರು. ವೆಂಕಟೇಶ ಅವರ ಹೋರಾಟಮಯ ಬದುಕನ್ನು ನೋಡಿ ಆನಂದಿತರಾದರು. ಊರಮುಂದಿನ ನದಿಯ ಮಧ್ಯಭಾಗಕ್ಕೆ ಕರೆದುಕೊಂಡು ಹೋಗಿ ಮೂರುಸಲ ಮುಳುಗಿಸಿ ನೀವು ಇಡೀ ಲೋಕಕ್ಕೆ ಬೇಕಾದವರು. ಮಾನವ ಕುಲವೇ ನಿನ್ನ ಕುಲ ಎಂದು ಬೋಧಿಸಿ, ಇನ್ನು ಮುಂದೆ ನೀನು ಸ್ವಾಮಿ ರಾಮಾನಂದ ತೀರ್ಥ ಎಂಬ ಹೆಸರಿನಿಂದ ಪ್ರಸಿದ್ಧಿಯಾಗು ಎಂದು ಹಾರೈಸಿದರು. ಅಂದಿನಿಂದ ಅವರು ಸ್ವಾಮಿ ರಾಮಾನಂದ ತೀರ್ಥರಾದರು. ಮುಂದೆ ಅವರು ನಾಡಿನ ತುಂಬೆಲ್ಲ ಇದೇ ಹೆಸರಿನಿಂದ ಕರೆಸಿಕೊಂಡರು. ಮೋಮಿನಾಬಾದಕ್ಕೆ ಬಂದು ಅಲ್ಲಿ ಹೈಸ್ಕೂಲ್ ಸ್ಥಾಪಿಸಿ ಸ್ವಾತಂತ್ರ್ಯ ಹೋರಾಟದ ಕ್ರಾಂತಿಯನ್ನು ಹಂಚಿದರು. ಹೈದ್ರಾಬಾದ ನಿಜಾಂನ ಆಳ್ವಿಕೆಗೆ ಒಳಪಟ್ಟ ಈ ನಾಡಿನಲ್ಲಿ ವಂದೇ ಮಾತರಂ ರಿಂಗಣಿಸತೊಡಗಿತು. ಪ್ರಜೆಗಳ ಮೇಲೆ ನಿಜಾಮ ಆಡಳಿತ ದೌರ್ಜನ್ಯ ನಡೆಸುತ್ತಿದ್ದುದನ್ನು ಕಣ್ಣಾರೆ ಕಂಡು ಮರುಗಿದರು. ಹಿಂದೂಗಳ ಮೇಲೆ ರಜಾಕಾರರು ನಿರಂತರ ಅತ್ಯಾಚಾರ ಮಾಡತೊಡಗಿದರು. ಸಂಪತ್ತು ಲೂಟಿ ಮಾಡತೊಡಗಿದರು. ಇದರ ವಿರುದ್ಧ

ಅಲ್ಲಿನ ಜನಗಳನ್ನು ಸ್ವಾತಂತ್ರ್ಯ ಹೋರಾಟಕ್ಕೆ ಅಣಿಮಾಡಿದರು. ಹೈದ್ರಾಬಾದ ಕೋಟೆಯ ಮೇಲೆ ಭಾರತಧ್ವಜ ಹಾರಿಸಿದರು. ಇದನ್ನು ಸಹಿಸದ ನಿಜಾಂ ಸರಕಾರ ಸ್ವಾಮಿ ರಾಮಾನಂದರನ್ನು ಬಂಧಿಸಿ ಚಂಚಲಗುಡ್ಡ ಜೈಲಿಗೆ ಕಳಿಸಿತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ಇಲ್ಲಿ ಮುಕ್ತಿ ಸಿಗಲಿಲ್ಲ. ೧೯೪೮ ಸಪ್ಟಂಬರ್ ೧೧ರಿಂದ ೧೭ರ ವರೆಗೆ ಹೈದ್ರಾಬಾದ ವಿಮೋಚನಾ ಕಾರ್ಯಾಚರಣೆಯ ನಾಯಕತ್ವವನ್ನು ವಹಿಸಿಕೊಂಡು ನಿಜಾಮನ ಕಪಿಮುಷ್ಟಿಯಿಂದ ಮುಕ್ತಿಗೊಳಿಸಿದರು. ಈ ಕಾರಣಕ್ಕೆ ಅವರು ಹೈದ್ರಾಬಾದ ಸ್ವಾತಂತ್ರ್ಯ ಸೂರ್ಯ ಸ್ವಾಮಿರಾಮಾನಂದ ತೀರ್ಥರಾದರು.

ಸ್ವಾಮಿ ರಾಮಾನಂದ ತೀರ್ಥರನ್ನು ಹೈದ್ರಾಬಾದ ಕರ್ನಾಟಕ ಪ್ರದೇಶವಲ್ಲದೇ ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲೂ ಲಕ್ಷಾಂತರ ಜನರು ಆರಾಧಿಸುತ್ತಾರೆ. ೧೯೫೧ರಲ್ಲಿ ಗುಲಬರ್ಗಾ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಗೆಲವು ಸಾಧಿಸುತ್ತಾರೆ. ೧೯೭೨ ಜನವರಿ ೨೨ ರಂದು ಹೈದರಾಬಾದಿನಲ್ಲಿ ನಿಧನಹೊಂದಿದರು. ಮಹಾರಾಷ್ಟ್ರ ಸರಕಾರವು ಇವರ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಿ ಗೌರವ ಸಲ್ಲಿಸಿದೆ.

## ಪತ್ರಿಕಾರಂಗದ ಭೀಷ್ಮ ಮೊಹರೆ ಹಣಮಂತರಾಯರು

ಭೀಮಪ್ಪನಾಯಕ ಮನೆತನಕ್ಕೆ ಮರಾಠ ಪೇಶ್ವೆಯವರ ಆಡಳಿತದ ಮುದ್ರೆ ದೊರೆತ ಕಾರಣಕ್ಕೆ ಇವರ ಮನೆತನಕ್ಕೆ ಮೊಹರೆ ಎಂದು ಹೆಸರು ಬಂದಿತು. ಭೀಮಪ್ಪನಾಯಕನ ಮಗ ರಾಘಪ್ಪನಾಯಕ, ರಾಘಪ್ಪನಾಯಕನ ೨ನೇ ಹೆಂಡತಿಯ ಮಗನೇ ಹಣಮಂತರಾಯ. ಮೊಹರೆ ಹಣಮಂತರಾಯರು ೧೮೯೨ರ ನವೆಂಬರ ೧೨ ರಂದು ದೇವರ ಹಿಪ್ಪರಗಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ದೇವರ ಹಿಪ್ಪರಗಿಯಲ್ಲಿ ಮುಗಿಸಿ ಪ್ರೌಢಶಿಕ್ಷಣವನ್ನು ವಿಜಾಪುರದ ಸರಕಾರಿ ಶಾಲೆಯಲ್ಲಿ ಮುಗಿಸಿದರು. ೧೯೩೫ರಲ್ಲಿ ಮ್ಯಾಟ್ರಿಕ್, ೧೯೩೮ರಲ್ಲಿ ಮುಂಬಯಿಯಲ್ಲಿ ಉನ್ನತ ಶಿಕ್ಷಣವನ್ನು ಅಧ್ಯಯನ ಮಾಡುತ್ತಾರೆ. ಅಸಹಕಾರ ಚಳುವಳಿ ಸಂದರ್ಭದಲ್ಲಿ ನೌಕರಿ ಬಿಟ್ಟು ಊರಿಗೆ ಬರುತ್ತಾರೆ. ೧೯೨೨ರಲ್ಲಿ ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಬೇಕಾದ ಪ್ರಸಂಗ ಬರುತ್ತದೆ. ಈ ಪತ್ರಿಕೆಯಲ್ಲಿ ಉಗ್ರವಾದ ಲೇಖನಗಳನ್ನು ಸ್ವತಂತ್ರವಾಗಿ ಬರೆಯಹತ್ತಿದರು. ಕರ್ನಾಟಕದ ವೀರರೇ ಎಂಬ ಉಗ್ರಲೇಖನ ಪ್ರಕಟವಾದ ಮೇಲೆ ಕಮಿಷನರ್‌ಗೆ  ಭಯಂಕರ ಕೋಪ ಬಂತು. ಹಣಮಂತರಾಯರ ಕೈಗೆ ಕೋಳ ತೋಡಿಸಿ ಟೊಂಕಕ್ಕೆ ಹಗ್ಗ ಕಟ್ಟಿ ಬರಿಗಾಲಿನಿಂದ ವಿಜಾಪುರ ನ್ಯಾಯಾಲಯಕ್ಕೆ ತಂದರು. ೧೯೨೩ರಲ್ಲಿ ನ್ಯಾಯಾಲಯವು ಜೈಲುಶಿಕ್ಷೆ ಮತ್ತು ನೂರು ರೂಪಾಯಿ ದಂಡ ವಿಧಿಸಿತು. ಈ ಸುದ್ದಿ ದೇಶದ ತುಂಬೆಲ್ಲ ಹರಡಿತು.

ಈ ಲೇಖನವನ್ನು ಉಡುಪಿಯ ಸತ್ಯಾಗ್ರಹ ಪತ್ರಿಕೆ ಮತ್ತೊಮ್ಮೆ ಪ್ರಕಟಿಸಿತು. ೧೯೩೨ರಲ್ಲಿ ಮತ್ತೊಮ್ಮೆ ಒಂದು ವರ್ಷದ ಶಿಕ್ಷೆಗೆ ಗುರಿಯಾದರು. ೧೯೩೪ರಲ್ಲಿ ಸಂಯುಕ್ತ ಕರ್ನಟಕ ಪತ್ರಿಕೆಯ ಸಂಪಾದಕರಾಗಿ ಪತ್ರಿಕೆಯನ್ನು ರಾಷ್ಟ್ರಮಟ್ಟದಲ್ಲಿ ಬೆಳೆಸಿದರು. ೧೯೪೬ರಲ್ಲಿ ಬ್ಯಾಂಕ್ ಆಫ್ ಕರ್ನಾಟಕ ಸ್ಥಾಪನೆ ಮಾಡುವಲ್ಲಿ ಇವರೂ ಪ್ರಮುಖರಾಗಿದ್ದಾರೆ. ಸ್ವತಃ ಸ್ವಾತಂತ್ರ್ಯಯೋಧರಾದ ಇವರು ಸ್ವಾತಂತ್ರ್ಯ ಹೋರಾಟಗಾರರಿಗೆ ಸದಾ ಸಹಾಯಹಸ್ತ ನೀಡಿದರು.

## ರಾಚಪ್ಪ ಗುರುಲಿಂಗಪ್ಪ ಹೋಳಗಿ

ಶ್ರೀಯುತ ರಾಚಪ್ಪ ಹೋಳಗಿ ಅವರು ಸಿಂದಗಿ ತಾಲ್ಲೂಕಿನ ಹಂದಿಗನೂರ ಗ್ರಾಮದವರು. ಸನ್ ೧೯೦೭ರಲ್ಲಿ ಜನಿಸಿದ ರಾಚಪ್ಪ ಕಲಾವಿದರಾಗಿ ನಾಟ್ಯಸಂಘವನ್ನು ಸ್ಥಾಪಿಸುವ ಮೂಲಕ ಕಲಾಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ೧೯೩೦ರಲ್ಲಿ ದೇಶದ ತುಂಬೆಲ್ಲ ಗಾಂಧೀಜಿಯವರ ಆದೇಶದಂತೆ ಕಾಯ್ದೆಭಂಗ ಚಳುವಳಿಯು ಆರಂಭವಾಯಿತು. ಸಿಂದಗಿ ಭಾಗದಲ್ಲಿ ನಡೆದ ಕಾಯ್ದೆಭಂಗ ಚಳುವಳಿಯ ನೇತೃತ್ವ ವಹಿಸಿದ್ದ ರಾಚಪ್ಪನವರು ತಮ್ಮೂರಿನಿಂದ ಪುರದಾಳವರೆಗಿನ ಈಚಲ, ಸಿಂಧಿ ಗಿಡಗಳನ್ನು ಕಡಿದುಹಾಕಿ ಬ್ರಿಟಿಷರ ವಿರುದ್ಧ ಸೆಡ್ಡು ಹೊಡೆದರು. ಸಿಂಧಿ ಗಿಡ ಕಡಿದದ್ದು ತಪ್ಪಾಗಿದೆ ಎಂದು ಮುಚ್ಚಳಿಕೆ ಬರೆದುಕೊಡಲು ಕೇಳಿದಾಗ ಸತ್ಯವನ್ನೇ ಮಾತಾಡುವೆ, ಅಪಚಾರ ಮಾಡಲಾರೆ ಎನ್ನುತ್ತ ಪೋಲೀಸರ ವಿರುದ್ಧವೇ ಘೋಷಣೆ ಕೂಗಿದರು. ಈ ಕಾರಣಕ್ಕೆ ಕೋರವಾರ ಠಾಣೆಯಲ್ಲಿ ಬಂಧಿಸಿಡಲಾಗಿತ್ತು. ನಂತರ ಕಾಲ್ನಡಿಗೆಯ ಮೂಲಕವೇ ಸಿಂದಗಿಗೆ ಕರೆದುಕೊಂಡು ಬಂದು ವಿಜಾಪುರ ಜೈಲಿಗೆ ಸೇರಿಸಿದರು. ಸಿಂಧಿ ಗಿಡ ಕಡಿದಿದ್ದಕ್ಕೆ ೬ತಿಂಗಳು ಮತ್ತು ಘೋಷಣೆ ಕೂಗಿದ್ದಕ್ಕೆ ೬ ತಿಂಗಳು ಜೈಲುವಾಸ ಅನುಭವಿಸಬೇಕಾಯಿತು. ಜೈಲಿನಲ್ಲಿದ್ದಾಗ ಇವರ ನಾಟಕ ಸಂಘದ ಪರಿಕರಗಳನ್ನು ಹಾಳುಮಾಡಲಾಯಿತು. ಇವನ ತಮ್ಮ ಸಣ್ಣರಾಚಪ್ಪನನ್ನು ಜೈಲಿಗೆ

ಹಾಕಿ ಇಡೀ ಮನೆತನವನ್ನೇ ನಾಶ ಮಾಡುವ ಮೂಲಕ ಬ್ರಿಟಿಷ್ ಪೊಲೀಸರು ಕ್ರೌರ್ಯ ಮೆರೆದಿದ್ದರು.

## ನಾರಾಯಣ ರಾಘವೇಂದ್ರ ದೇಸಾಯಿ

ನಾರಾಯಣ ರಾಘವೇಂದ್ರ ದೇಸಾಯಿ ಅವರು ಸಿಂದಗಿಯಲ್ಲಿ ಸನ್ ೧೯೦೬ರಲ್ಲಿ ಜನಿಸಿದರು. ತಂದೆ ರಾಘವೇಂದ್ರ ದೇಸಾಯಿಯವರು ಧಾರವಾಡದಲ್ಲಿ ವಕೀಲರಾಗಿದ್ದರು. ಧಾರವಾಡದಲ್ಲಿ ಗಾಂಧೀಜಿಯವರನ್ನು ಪ್ರತ್ಯಕ್ಷ ಕಂಡು ಅವರ ಕಟ್ಟಾ ಅನುಯಾಯಿಯಾಗಿದ್ದರು. ತಮ್ಮ ನಾಲ್ಕು ಮಕ್ಕಳಿಗೆ ಈ ಸಂಸ್ಕಾರವನ್ನು ನೀಡಿದ್ದರು. ಅದರ ಫಲವಾಗಿ ಎಲ್ಲರೂ ದೇಶ ಚಳುವಳಿಯಲ್ಲಿ ಭಾಗವಹಿಸಿದರು. ಹಿರಿಯವರಾದ ನಾರಾಯಣರಾಯರು ಕಾಲೇಜು ಶಿಕ್ಷಣ ಪಡೆಯುವ ಹಂತದಲ್ಲಿ ಗಾಂಧೀಜಿಯವರನ್ನು ಕಂಡಿದ್ದರಲ್ಲದೆ ಅವರ ತತ್ವ ಚಿಂತನೆಗಳಿಗೆ ಮಾರುಹೋಗಿದ್ದರು. ೧೯೨೧ರಲ್ಲಿ ಧಾರವಾಡದಲ್ಲಿ ನಡೆದ ಗೋಲಿಬಾರ್ ಸಂದರ್ಭದಲ್ಲಿ ರಾಷ್ಟ್ರೀಯ ಶಾಲೆಯಲ್ಲಿ ಓದುತ್ತಿದ್ದರು. ದೇಶದ ಪ್ರಜೆಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನೋಡಿದ ನಾರಾಯಣ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಇವರ ತಂದೆಗೆ ೨ ವರ್ಷ ಕಠಿಣ ಜೈಲು ಶಿಕ್ಷೆ ಆಯಿತು. ಜೈಲಿನಿಂದ ಬಂದ ಮೇಲೆ ಗಾಂಧಿಯವರ ವಿಚಾರಗಳನ್ನು ಹಳ್ಳಿಗಳಿಗೆ ಹೋಗಿ ಪ್ರಚುರಪಡಿಸತೊಡಗಿದರು. ತಮ್ಮ ಜೊತೆಗೆ ನಾರಾಯಣನನ್ನು ಕರೆದುಕೊಂಡು ಹೋಗುತ್ತಿದ್ದರು. ಇದೆಲ್ಲದರ ಪರಿಣಾಮ ನಾರಾಯಣರ ಮೇಲಾಯಿತು.

೧೯೩೧ರಲ್ಲಿ ಸಾಬರಮತಿ ಆಶ್ರಮಕ್ಕೆ ಹೋಗಿ ಅಲ್ಲಿ ತರಬೇತಿ ಪಡೆದುಕೊಂಡು ಬಂದರು. ಕರಪತ್ರ ಹಂಚುವುದು, ಊರಲ್ಲಿ ಪ್ರಭಾತ ಫೇರಿ ನಡೆಸುವುದು ಮೊದಲಾದ ಪ್ರತಿಭಟನಾತ್ಮಕ ಕೆಲಸದಲ್ಲಿ ತೊಡಗಿಸಿಕೊಂಡರು. ೨ ವರ್ಷ ವಿಜಾಪುರ ಮತ್ತು ವಿಸಾಪುರ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಹರಿಜನರಿಗಾಗಿ ಸಹಾಯ ಮಾಡುತ್ತ ಅವರ ಪ್ರಗತಿಯನ್ನು ಬಯಸಿ ಎಲ್ಲೆಡೆ ವಿಧಾಯಕ ಕಾರ್ಯಗಳನ್ನು ಮಾಡಿದರು, ಅಮರಗಾಂಧಿ ಎಂಬ ನಾಟಕವನ್ನು ಇವರು ರಚಿಸಿದ್ದಾರೆ.



## ರತನಚಂದ್ ಪಾಯಪ್ಪ ಜಗಶೆಟ್ಟಿ

ಸಿಂದಗಿ ತಾಲ್ಲೂಕಿನ ಕಲಕೇರಿ ಗ್ರಾಮದವರಾದ ರತನಚಂದ್ ಜಗಶೆಟ್ಟಿ ಅವರು ಪ್ರಾಥಮಿಕ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಬಡಿಗೇರ ಗುರುಗಳ ಪ್ರಚೋದನಾತ್ಮಕ ಬೋಧನೆಯಿಂದ ದೇಶದ ಹೋರಾಟದಲ್ಲಿ ಭಾಗವಹಿಸುವಂತಾಯಿತು. ಪ್ರೌಢಶಿಕ್ಷಣವನ್ನು ಪಡೆಯಲು ವಿಜಾಪುರ ಎಸ್.ಎಸ್. ಶಾಲೆಗೆ ಸೇರಿದರು. ಅಷ್ಟೊತ್ತಿಗೆ ಹೋರಾಟದ ಕಾವು ಹೆಚ್ಚಾಗತೊಡಗಿತ್ತು. ೧೯೪೨ ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ ದೊಡ್ಡ ಸಂಖ್ಯೆಯಲ್ಲಿ ಪ್ರಭಾತಫೇರಿ ಜರುಗಿತ್ತು. ಇದರ ನಾಯಕತ್ವವನ್ನು ರತನಚಂದ್ ವಹಿಸಿದ್ದು ಸ್ಮರಣೀಯವಾದುದು. ಸಾವಿರಾರು ವಿದ್ಯಾರ್ಥಿಗಳು ಅಲ್ಲಿ ಸೇರಿದ್ದರು. ಭಾಷಣವನ್ನು ಮಾಡಿ ಹೋರಾಟದಲ್ಲಿ ಭಾಗುವಹಿಸುವಂತೆ ಪ್ರಚೋದಿಸಿದನು. ಪೊಲೀಸರು ಮುತ್ತಿಗೆಹಾಕಿ ವಿದ್ಯಾರ್ಥಿಗಳನ್ನು ಎಳೆದೊಯ್ದರು. ಅಂದು ರಾತ್ರಿವರೆಗೂ ಹೋರಾಟ ನಡೆಸಿದರು.

ತಹಶೀಲ್ದಾರ ಸಾಹೇಬರು ಬಂದು ಅಭ್ಯಾಸ ಮುಂದುವರೆಸಬೇಕಾದರೆ ಇನ್ನುಮುಂದೆ ಯಾವುದೇ ಹರತಾಳದಲ್ಲಿ ಭಾಗವಹಿಸುವದಿಲ್ಲವೆಂದು ಬರೆದುಕೊಡಿ ಎಂದಾಗ, ಮೊದಲು ನೀವು ಭಾರತೀಯರು ಎಂಬುದು ಅರಿಯಿರಿ ನೀವು ರಾಜೀನಾಮೆ ಕೊಟ್ಟು ನಮ್ಮೊಂದಿಗೆ ಬನ್ನಿ ಎಂದು ಹೇಳಿದರಂತೆ. ಆಗ ಕಲೆಕ್ಟರ್ ಸಾಹೇಬರು ೬ ತಿಂಗಳು ಜೈಲು ಶಿಕ್ಷ ನೂರು ರೂಪಾಯಿ ದಂಡ ವಿಧಿಸಿದರು. ಶಿಕ್ಷೆಯ ನಂತರ ಶಾಲೆಗೆ ಮರಳಿದಾಗ ಶಾಲೆಯ ಮುಖ್ಯಗುರುಗಳು ಬಂದು ಪ್ರಭಾತಪೇರಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದೀರಿ ಮುಂದೆಯಾದರೂ ಸರಿಯಾಗಿರಿ ಮತ್ತು ಕ್ಷಮಾಪಣೆಪತ್ರ ನೀಡಬೇಕೆಂದು ಹೇಳಿದರು. ಇದಕ್ಕೊಪ್ಪದ ರತನಚಂದ್ ಮೊದಲಾದವರ ಗುಂಪಿನ ಮೇಲೆ ಶಿಸ್ತುಕ್ರಮ ಜರುಗಿಸುವುದಾಗಿ ಬೆದರಿಕೆ ಹಾಕಿದಾಗಲೂ ಜಪ್ಪೆನ್ನಲಿಲ್ಲ. ನಂತರ ಊರಿಗೆ ಬಂದು ಕಿರಾಣಿ ವ್ಯಾಪಾರ ಮಾಡುತ್ತಾ ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತಾ ದೇಶಸೇವೆ ಮಾಡಿದರು.

## ಶಂಕರಗೌಡ ಪಾಟೀಲ

ಶಂಕರಗೌಡ ಯಶವಂತಪ್ಪಗೌಡ ಪಾಟೀಲ ಅವರು ೧೯೧೧ರಲ್ಲಿ ಇಂಡಿ ತಾಲ್ಲೂಕಿನ ಲಚ್ಯಾಣದಲ್ಲಿ ಜನಿಸಿದರು. ಇವರು ಮೂಲತಃ ಸಿಂದಗಿ ತಾಲ್ಲೂಕಿನ

ಸುರಗಿಹಳ್ಳಿ ಗ್ರಾಮದವರು. ತಂದೆ ಅಣ್ಣಪ್ಪಗೌಡರು, ತಾಯಿ ಈರಮ್ಮಗೌಡತಿ. ಯಶವಂತಗೌಡರ ದತ್ತುಪುತ್ರನೇ ಶಂಕರಗೌಡರು. ೧೯೪೪ರಲ್ಲಿ ಜಾಳಪೋಳ್ ಚಳುವಳಿಯಲ್ಲಿ ಚಿಕ್ಕರೂಗಿ ಚಳುವಳಿಗಾರರೊಂದಿಗೆ ಸೇರಿಕೊಂಡು ತಂತಿತಾರುಗಳನ್ನು ಕಡಿದು ಹಾಕಿದರು. ಇದಕ್ಕಾಗಿ ಮಹಾರಾಷ್ಟ್ರದ ವಿಸಾಪುರ ಜೈಲಿನಲ್ಲಿ ೬ ತಿಂಗಳು ಮತ್ತು ವಿಜಾಪುರದ ದರ್ಗಾಜೈಲಿನಲ್ಲಿ ೬ ತಿಂಗಳು ಕಠಿಣ ಶಿಕ್ಷೆ ಅನುಭವಿಸಿದರು. ೧೯೫೨ರಲ್ಲಿ ಮುಂಬೈ ವಿಧಾನಸಭೆಗೆ, ೧೯೫೬ ಮತ್ತು ೧೯೭೨ರಲ್ಲಿ ಕರ್ನಾಟಕ ವಿಧಾನಸಭೆಗೆ ಚುನಾಯಿತರಾಗಿ ಮೂರು ಅವಧಿಗಳ ಕಾಲ ಶಾಸಕರಾಗಿಯೂ ಜನಸೇವೆ ಮಾಡಿದರು. ಸನ್ ೨೬.೬.೧೯೮೦ ರಂದು ಶಿವಣಗಿಯಿಂದ ಪಡಗಾನೂರಿಗೆ ಸೈಕಲ್ ಮೇಲೆ ಬರುವಾಗ ಬಸ್ ಅಪಘಾತದಲ್ಲಿ ಸಾವನ್ನಪ್ಪಿದ ಶಂಕರಗೌಡರು ಜೀವನದುದ್ದಕ್ಕೂ ದೇಶ ಸೇವೆ ಮತ್ತು ಸಮಾಜಸೇವೆ ಮಾಡಿದರು.

## ಭಗವಾನ್‌ಸಿಂಗ್ ಅಂಗಡಿ

ಭಗವಾನ್‌ಸಿಂಗ್ ಅವರು ತಂದೆ ದಾದೂಸಿಂಗ್, ತಾಯಿ ಝುವಲಾಬಾಯಿ ಅವರ ಮಗನಾಗಿ ೧೩–೩–೧೯೧೫ರಂದು ಸಿಂದಗಿ ತಾಲ್ಲೂಕಿನ ಹಿಟ್ಟನಳ್ಳಿ ತಾಂಡಾದಲ್ಲಿ ಜನಿಸಿದರು. ಅಕ್ಕನ ಊರಾದ ಅಂಕಲಗಿಯಲ್ಲಿ ಆರಂಭದ ಶಿಕ್ಷಣ ಪಡೆದುಕೊಂಡು ಚಿಕ್ಕರೂಗಿಗೆ ಬಂದು ಗೌಂಟಿ ಶಾಲೆಯಲ್ಲಿ ೫ನೇ ತರಗತಿವರೆಗೆ ಓದಿದರು. ೧೯೩೦ರ ವರೆಗೆ ಚಿಕ್ಕರೂಗಿಯಲ್ಲಿ ಟೇಲರ್ ವೃತ್ತಿಯನ್ನು ಮಾಡಿದ ಭಗವಾನ್ ಸಿಂಗ್ ತಾಂಡಾದ ಮತ್ತು ಸುತ್ತಲಿನ ತಾಂಡಾಗಳ ಮಕ್ಕಳಿಗೆ ಶಿಕ್ಷಣ ಪಡೆಯಲು ಶ್ರಮಿಸಿದರು. ಮನೆಯವರನ್ನು ಒಲಿಸಿ ಶಿಕ್ಷಣ ಪಡೆಯುವಂತೆ ಮಾಡಿದ್ದು ಅವರ ಶಿಕ್ಷಣ ಕಾಳಜಿಯನ್ನು ತೋರಿಸುತ್ತದೆ. ಊರೂರು ಸುತ್ತುತ್ತಾ ಗಾಂಧೀಜಿಯವರ ತತ್ವಗಳು ಜಾರಿಯಾಗಲು ಟೊಂಕಕಟ್ಟಿ ನಿಂತರು. ಮದ್ಯಪಾನ ಮತ್ತು ಧೂಮಪಾನದ ಅನಾಹುತಗಳನ್ನು ಜನರಿಗೆ ಉಪದೇಶ ನೀಡುತ್ತಿದ್ದರು. ಅವರಿಗೆ ಊರಿನ ಕಾಂಗ್ರೆಸ್ ಗ್ರೂಪಿಗೆ ಸೇರುವ ಬಯಕೆಯಾದುದರ ಪರಿಣಾಮ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು ಎನ್ನಲಾಗಿದೆ.

ಆಲಮೇಲ, ಪಡಗಾನೂರ ಮತ್ತು ಸಿಂದಗಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆದ ಸಂದರ್ಭದಲ್ಲಿ ಹೋರಾಟದ ತೀವ್ರತೆಯ ಕುರಿತು ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ೨೩.೩.೧೯೪೧ರಂದು ಹಿಟ್ಟಿನಹಳ್ಳಿ ತಾಂಡಾದಲ್ಲಿಯೇ ವೈಯಕ್ತಿಕ



ಸತ್ಯಾಗ್ರಹ ಮಾಡುತ್ತಿದ್ದಾಗ ಪೊಲೀಸರು ಬಂಧಿಸಿ ವಿಜಾಪುರ ಜೈಲಿಗೆ ಸೇರಿಸಿದರು. ಅಲ್ಲಿ ಒಂದು ತಿಂಗಳು ಶಿಕ್ಷೆ ಅನುಭವಿಸಿದ ಬಳಿಕ ಮತ್ತೇ ಮೂರು ತಿಂಗಳು ವಿಸಾಪುರ ಜೈಲಿನಲ್ಲಿ ಇರಿಸಲಾಯಿತು. ಇದೇ ಹೊತ್ತಲ್ಲಿ ಆಲಮೇಲದ ನಾರಾಯಣ ದೇಶಪಾಂಡೆ ಅಥರ್ಗಾದ ಶಿವಲಿಂಗಪ್ಪ ಗುಣಕಿ ಮೊದಲಾದವರು ಜೈಲಿನಲ್ಲಿದ್ದರು. ಜೈಲಿನಿಂದ ಬಿಡುಗಡೆ ಹೊಂದಿ ಊರಿಗೆ ಮರಳಿದ ಬಳಿಕ ತಂದೆತಾಯಿಗಳು ಮದುವೆ ಮಾಡಲು ಸಿದ್ಧತೆ ನಡೆಸಿದರು. ಇದಕ್ಕೊಪ್ಪದ ಭಗವಾನ್‌ಸಿಂಗ್ ೧೯೪೨ರ ಜಾಳಪೋಳ್ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟಿಷರ ಬಂಗ್ಲೆಗಳಿಗೆ ಬೆಂಕಿ ಹಚ್ಚಿದರು. ನಿಂಬಾಳ ಸ್ಟೇಶನ್ ಸುಟ್ಟಿದ್ದರಿಂದ ಪೊಲೀಸರು ಇವರ ಬೆನ್ನಿಗೆಬಿದ್ದರು. ಮತ್ತೇ ಐದು ವರ್ಷ ಜೈಲಿನಲ್ಲಿ ಕಳೆಯಬೇಕಾದ ಪ್ರಸಂಗ ಎದುರಾಯಿತು. ಜೈಲಿನಿಂದ ಪರಾರಿಯಾಗಿ ಮತ್ತೇ ದೇಶಸೇವೆಗೆ ಮುಂದಾದರು ಹೀಗೆ ಇಡಿ ತಮ್ಮ ಬದುಕನ್ನು ಭಾರತಾಂಬೆಗೆ ಸಮರ್ಪಿಸಿದರು. ಇಂತಹ ಮಹಾನ್ ಸೇನಾನಿ ೨೬.೧.೧೯೯೮ ರಂದು ನಿಧನರಾದರು.

❑

## ೩. ಚಿಕ್ಕರೂಗಿ ಚಳುವಳಿಗಾರರು

ಸಿಂದಗಿ ತಾಲ್ಲೂಕಿನ ಚಿಕ್ಕಹಳ್ಳಿ ಚಿಕ್ಕರೂಗಿ ಇಂದು ದೇವರಹಿಪ್ಪರಗಿ ತಾಲ್ಲೂಕಿನಲ್ಲಿ ಬರುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ಈ ಹಳ್ಳಿಯ ಪಾತ್ರ ಬಹಳ ದೊಡ್ಡದು, ದೇಶಕ್ರಾಂತಿಗೆ ಇಂಬುಕೊಟ್ಟ ಇಲ್ಲಿನ ತರುಣರು ತಮ್ಮ ಜೀವನವನ್ನು ದೇಶಕ್ಕಾಗಿಯೇ ಮುಡಿಪಿಟ್ಟರು. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭಿಸಿದ ಗಾಂಧೀಜಿ ಅನುಕರಣೆ ದೇಶದ ತುಂಬೆಲ್ಲ ನಡೆಸಿದ ದೇಶಭಕ್ತರು ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ ಮೊದಲಾದವುಗಳನ್ನು ಶಾಂತಿಯುತವಾಗಿ ಮಾಡಲು ಆರಂಭಿಸಿದರು. ಇದೇ ಸಂದರ್ಭದಲ್ಲಿ ಚಿಕ್ಕರೂಗಿಯ ಹಲವರು ಈ ಚಳುವಳಿಯಲ್ಲಿ ಧುಮಕಿದರು. ಟೆಲಿಪೋನು ತಂತಿಗಳನ್ನು ಕತ್ತರಿಸುವುದು, ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸುವುದು, ರೈಲು ಹಳಿಗಳನ್ನು ಕಿತ್ತುವುದು ಮೊದಲಾದ ಕ್ರಾಂತಿಕಾರಿ ಕೆಲಸಗಳನ್ನು ಇಲ್ಲಿನ ಹೋರಾಟಗಾರರು ಮಾಡಿದರು. ಆಲಮೇಲದಲ್ಲಿ, ಮುಳಸಾವಳಗಿ, ತಾಂಬಾ, ಚಿಕ್ಕರೂಗಿಯಲ್ಲಿ ಸತ್ಯಾಗ್ರಹ ಮಾಡುವುದರ ಮೂಲಕ ತಮ್ಮ ದೇಶಾಭಿಮಾನವನ್ನು ಇಲ್ಲಿನ ಚಳುವಳಿಗಾರರು ತೋರಿದರು.

೧೯೩೬ರ ಸುಮಾರಿಗೆ ಊರಲ್ಲಿ ಬಂಥನಾಳ ಸಂಗನಬಸವ ಶರಣರ ಆಧ್ಯಾತ್ಮಿಕ ಪ್ರವಚನ ನಡೆದ ಸಮಯದಲ್ಲಿ ದೇಶದೆಲ್ಲೆಡೆ ನಡೆಯುವ ಬೆಳವಣಿಗೆಗಳ ಕುರಿತಾಗಿಯೂ ಅಲ್ಲಿ ಚರ್ಚೆಯೂ ನಡೆಯುತ್ತಿತ್ತು. ಇದೇ ಸಂದರ್ಭದಲ್ಲಿ ವಿಜಾಪುರದಲ್ಲಿ ಗಾಂಧೀಜಿಯವರ ಭಾಷಣವಿತ್ತು. ಅಂದು ಚಿಕ್ಕರೂಗಿಯ ಬಹಳ ಜನರು ಭಾಷಣ ಕೇಳಲು ಬಂದಿದ್ದರು. ಸೂಜಿಗಲ್ಲಿನಂತಹ ಭಾಷಣದ ಪ್ರಭಾವದಿಂದಾಗಿ ದೇಶಸೇವೆಗೆ ಮುಂದಾದುದು ಒಂದು ಚಾರಿತ್ರಿಕ ಸಂಗತಿ. ಮುಂದೆ ೧೯೪೨ರ ಆಗಸ್ಟ್ ೮ ರಂದು ಕ್ವಿಟ್ ಇಂಡಿಯಾ ಚಳುವಳಿ ಕುರಿತಾಗಿ



ಗಾಂಧೀಜಿ ಅವರು ಮುಂಬೈಯಲ್ಲಿ ಘೋಷಣೆ ಮಾಡಿದರು. ಇದು ಬ್ರಿಟಿಷರಿಗೆ ನುಂಗಲಾರದ ತುತ್ತಾಯಿತು. ಬಂಧಿಸಿ ಶಿಕ್ಷಿಸುವ ಕಾರ್ಯದಲ್ಲಿ ತೊಡಗಿದರು. ಧಾರವಾಡದ ಅಂಬಲಗಿ ಚನ್ನಬಸಪ್ಪನವರು ತಪ್ಪಿಸಿಕೊಂಡು ಚಿಕ್ಕರೂಗಿಗೆ ಬಂದಿದ್ದರು. ಈ ಮೊದಲೇ ಗಾಂಧೀಜಿಯ ಭಾಷಣದಿಂದ ಪ್ರಭಾವಿತರಾಗಿದ್ದ ಚಿಕ್ಕರೂಗಿಯ ತರುಣರು ಅಂಬಲಗಿಯವರ ಆಗಮನದಿಂದ ದೇಶಸೇವೆ ಮಾಡಲು ಬಲ ಬಂದು ಆನಂದದಿಂದ ಮುಂದಾದರು. ಮುಂದೆ ಈ ಊರು ಕಾಂಗ್ರೆಸ್‌ಮಯವಾಗಿ ಸ್ವಾತಂತ್ರ್ಯದ ಕಡೆ ಮುಖಮಾಡುವಂತಾಯಿತು. ದೇಶ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ದುಂಡಪ್ಪ ಉಪ್ಪಾರ, ಯಶವಂತರಾಯ ಪಾಟೀಲ, ಮಲಕಪ್ಪ ಪ್ಯಾಟಿ, ಭೀಮರಾಯ ನಾಟೀಕಾರ, ಗುರುಬಸಪ್ಪ ಹಡಪದ, ಸಿದ್ಧಲಿಂಗಪ್ಪ ಕೊಳ್ಳೂರ ಹೀಗೆ ಹಲವರು ಈ ಸಣ್ಣ ಊರಿನ ಹೆಸರನ್ನು ಸ್ವಾತಂತ್ರ್ಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿಸಿದ್ದಾರೆ.

### ದುಂಡಪ್ಪ ಉಪ್ಪಾರ

ಹದಿಮೂರು ವರ್ಷ ಭೂಗತನಾಗಿಯೇ ದೇಶಸೇವೆ ಮಾಡಿದ ದುಂಡಪ್ಪ ಉಪ್ಪಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಎದ್ದು ತೋರುವ ಹೆಸರು. ತಂದೆ ಮರೆಪ್ಪ, ತಾಯಿ ಭೀಮವ್ವ ಅವರ ಉದರಲ್ಲಿ ೧೯೦೬ರಲ್ಲಿ ಚಿಕ್ಕರೂಗಿಯಲ್ಲಿ ಜನಿಸಿದರು. ೨೦೦೭ ರ ಮಾರ್ಚ ತಿಂಗಳಲ್ಲಿ ತಮ್ಮ ಜೀವನಯಾತ್ರೆ ಮುಗಿಸಿದರು.

ಮಹಾನ್ ಸಾಹಸಿಯಾಗದ್ದ ದುಂಡಪ್ಪನಿಗೆ ಜೀವನ ನಿರ್ವಹಿಸುವುದೇ ಕಷ್ಟದಾಯಕವಾಗಿತ್ತು, ಹತ್ತು ವರ್ಷದವನಿದ್ದಾಗಲೇ ತಂದೆಯನ್ನು ಕಳೆದುಕೊಂಡು, ಇಡೀ ಸಂಸಾರದ ನೊಗ ಹೊತ್ತಿದ್ದ, ಕೃಷಿಕಾರ್ಯ ಮಾಡುವಾಗ ಹಾಡು ಹಾಡುವದು ಅವನ ಮುಖ್ಯ ಕಲೆಯಾಗಿತ್ತು. ಹಾಡುತ್ತಲೇ ಜನರನ್ನು ರಂಜಿಸುತ್ತಿದ್ದ, ಅವರ ನೋವನ್ನು ಮರೆಸುತ್ತಿದ್ದ, ಅಪ್ಪಟ ಹಾಡುಗಾರ ಮತ್ತು ಸ್ವತಃ ಪದಗಳನ್ನು ಕಟ್ಟಿ ಎಲ್ಲರಿಗೂ ಹಾಡಿನ ಗಂಧ ಹಚ್ಚಿದ್ದ. ೧೯೩೦ರಲ್ಲಿ ಊರುಮುಂದಿನ ಹಳ್ಳ ತುಂಬಿ ಹರಿಯುತ್ತಿದ್ದಾಗ ಅಲೆಮಾರಿ ಹುಡುಗರನ್ನು ಬದುಕಿಸಿದ್ದ ದುಂಡಪ್ಪ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಮೂರು ಕ್ವಿಂಟಲ್ ಗೋಧಿಚೀಲಗಳನ್ನು ಅನಾಯಾಸವಾಗಿ ಹೊತ್ತುಕೊಂಡು ಹೋಗುತ್ತಿದ್ದನೆಂದರೆ ಅದು ಸಾಮಾನ್ಯ ಮಾತೇನಲ್ಲ!. ಇಂತಹ ಯುವಕನಿಗೆ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ್ದು ಗಾಂಧೀಜಿಯ ಭಾಷಣ ಮತ್ತು ಅಂಬಲಗಿ ಚನ್ನಬಸಪ್ಪನವರು. ಅಂಬಲಗಿಯವರ ಬಲಗೈ

ಬಂಟನಂತೆ ಅವರೊಟ್ಟಿಗೆ ಬದುಕಿದ್ದ. ಊರಿನ ಬಹಳಷ್ಟು ಯುವಕರು ಇವರ ಹಾದಿಯೇ ತುಳಿದರು. ೧೯೪೧ರಲ್ಲಿ ಗಾಂಧೀಜಿಯವರ ಸತ್ಯಾಗ್ರಹಗಳಲ್ಲಿ ಭಾಗವಹಿಸಬೇಕಾದರೇ, ಪ್ರತಿಜ್ಞಾವಿಧಿ ಪತ್ರ ಬರೆದುಕೊಟ್ಟ ಮೇಲೆ ಅವರ ಅನುಮತಿ ಸಿಕ್ಕರೆ ಮಾತ್ರ ಚಳವಳಿಯಲ್ಲಿ ಭಾಗವಹಿಸಬೇಕಾಗಿತ್ತು. ಇದಕ್ಕೆ ಸಹಿ ಹಾಕಿ ಆಲಮೇಲದಲ್ಲಿ ಸತ್ಯಾಗ್ರಹ ಆರಂಭಿಸಿದವರಲ್ಲಿ ಮೊದಲಿನವರು ದುಂಡಪ್ಪ. ಆಲಮೇಲ ಸತ್ಯಾಗ್ರಹ ಯಶಸ್ಸು ದುಂಡಪ್ಪನಿಗೆ ಮತ್ತಷ್ಟು ಹುರುಪು ತಂದುಕೊಟ್ಟಿತು. ಸಾಲೋಟಗಿಯಲ್ಲಿ ಸತ್ಯಾಗ್ರಹ ಆರಂಭಿಸಿ ಭಾಷಣ ಮಾಡುತ್ತಿದ್ದಂತೆ ಅವನನ್ನು ಪೊಲೀಸರು ಬಂಧಿಸಿ ವಿಜಯಪುರ ಜೈಲಿಗೆ ಹಾಕಿದರು. ಮೂರು ತಿಂಗಳ ನಂತರ ಮಹಾರಾಷ್ಟ್ರದ ವಿಸಾಪುರ ಸೆರೆಮನೆಯಲ್ಲಿ ಮತ್ತೇ ಮೂರು ತಿಂಗಳಿಟ್ಟು ಬಿಡುಗಡೆ ಮಾಡಿದರು.

ಮಿಂಚನಾಳ ತಾಂಡಾದ ಸೇತುವೆ ಧ್ವಂಸಮಾಡಿ ಮತ್ತೊಮ್ಮೆ ಸೆರೆಸಿಕ್ಕಾಗ ಅವನ ಮೈಮೇಲೆ ಭಯಂಕರ ಗಾಯಗಳನ್ನು ಮಾಡಿ ಬ್ರಿಟಿಷ್ ಸೇನೆ ಆಕ್ರೋಶ ತೋರಿಸಿತ್ತು. ಇಷ್ಟಾದರೂ ಸುಮ್ಮನಿರದ ದುಂಡಪ್ಪ ಮತ್ತೇ ಹೋರಾಟಕ್ಕೆ ತನ್ನನ್ನು ಸಜ್ಜುಮಾಡಿಕೊಳ್ಳುತ್ತಿದ್ದ. ಇದೇ ಸಮಯಕ್ಕೆ ಊರಲ್ಲಿ ತನ್ನ ಮಗು ಸಾವನ್ನಪ್ಪಿದ್ದು ಹಾಗೂ ತನ್ನ ಮಾವನಿಗೆ ಅಳಿಯನನ್ನು ಹಿಡಿದುಕೊಡುವಂತೆ ಒತ್ತಾಯಿಸಿ ಚಿತ್ರಹಿಂಸೆ ನೀಡಿದ್ದು ಅವನ ಮನಸ್ಸಿನ ಮೇಲೆ ಬರೆಬಿದ್ದಿತ್ತು. ಇದರಿಂದ ಆಕ್ರೋಶಗೊಂಡ ದುಂಡಪ್ಪ ಇಂಡಿಯಿಂದ ನಾದವರೆಗಿನ ಟೆಲಿಫೋನ್ ಸಂಪರ್ಕ ಕಡಿತಮಾಡಿ ತಂತಿಯನ್ನು ತಂದು ಬಾವಿಗೆ ಎಸೆದಿದ್ದ. ಈ ಕೃತ್ಯಕ್ಕೆ ಬ್ರಿಟಿಷರು ಕಂಡಲ್ಲಿ ಗುಂಡು ಹಾರಿಸುವ ಆದೇಶ ಮಾಡಿದರು. ಅಧಿಕಾರಿಗಳ ಕೈಗೆ ಸಿಗದೇ ಓಡಾಡಹತ್ತಿದ ದುಂಡಪ್ಪ ಬಾದಾಮಿ ಅಡವಿಯಲ್ಲಿ ಅಂಬಲಗಿಯವರ ಗುಂಪನ್ನು ಸೇರಿಕೊಂಡು ಆ ಗುಂಪಿನ ನೇತೃತ್ವವನ್ನು ವಹಿಸಿದ. ಕಟಗೇರಿ ರೈಲುಹಳಿಗಳನ್ನು ಕಿತ್ತುಹಾಕಿದ ಕಾರ್ಯದಲ್ಲಿ ಭಾಗಿಯಾದ ದುಂಡಪ್ಪ ಒಂದು ತಿಂಗಳು ಭೂಗತನಾಗಿಬಿಟ್ಟ. ಮುಂದೆ ತಾಂಬಾದ ಬ್ರಿಟಿಷ್ ಬಂಗ್ಲೆಯನ್ನು ಸುಟ್ಟುಹಾಕುವ ಮೂಲಕ ತನ್ನ ಕಾರ್ಯ ಮುಂದುವರೆಸಿದ. ನಿಂಬಾಳ ಮತ್ತು ಜುಮನಾಳ ಸ್ಟೇಶನ್‌ಗಳನ್ನು ಸುಟ್ಟುಹಾಕಿದ ಸಂಗತಿ ತಿಳಿದ ಅಧಿಕಾರಿಗಳು ಕಂಡಲ್ಲಿ ಗುಂಡಿಕ್ಕುವ ಆದೇಶ ಹರಡಿಸಿದರು.

ಅಂಬಲಗಿ ಚನ್ನಬಸಪ್ಪನವರು ಮುಂದೆನಿಂತು ದುಂಡಪ್ಪನನ್ನು ಜಿಲ್ಲೆಯ ಹೊರಗೆ ಉಳಿಯುವಂತೆ ಮಾಡಿದರು. ಅಲೆಯುತ್ತಾ ಪುಣೆಗೆ ಹೋಗಿ ಅಲ್ಲಿ



ಗಾಂಧೀಜಿಯವರ ಬಳಿ ಎಂಟು ದಿನ ಇದ್ದು ಅವರ ಕಾಯಕತತ್ವಗಳನ್ನು ತಮ್ಮಲ್ಲಿ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದರು. ಹದಿಮೂರು ಕೇಸುಗಳಿದ್ದರೂ ಧೈರ್ಯಗುಂದದೆ ಭೂಗತರಾಗಿದ್ದುಕೊಂಡು ದೇಶ ವಿಮೋಚನೆ ಚಳುವಳಿಯಲ್ಲಿ ಸಕ್ರಿಯರಾಗಿದ್ದದ್ದು ಅವರ ದೇಶಪ್ರೇಮ ತೋರಿಸುತ್ತದೆ. ನೆಹರೂಜಿ ಅವರು ಒಮ್ಮೆ ದುಂಡಪ್ಪನಿಗೆ ಊರಲ್ಲಿ ನಿನಗೆ ಹೊಲ ಎಷ್ಟಿದೆ ಎಂದು ಕೇಳಿದ್ದರಂತೆ. ಅದಕ್ಕೆ ದುಂಡಪ್ಪ ನನಗ ಆಸ್ತಿಯಂದ್ರ ಈ ಶರೀರ ಅಷ್ಟನೋಡ್ರೀ ಎಂದಾಗ ದುಂಡಪ್ಪನ ಬೆನ್ನು ಚಪ್ಪರಿಸಿದ್ದರಂತೆ!.

## ಯಶವಂತರಾಯ ಪಾಟೀಲ

ಚಿಕ್ಕರೂಗಿಯ ಗೌಡಮನೆತನದ ಸಿದಗೊಂಡಪ್ಪ ಮತ್ತು ಗೌರಮ್ಮ ಪುಣ್ಯದಂಪತಿಗಳ ಉದರದಲ್ಲಿ ೧೯೦೯ರಲ್ಲಿ ಜನ್ಮತಳೆದ ಯಶವಂತರಾಯ ಪಾಟೀಲರು ಮುಲ್ಕಿ ಪರೀಕ್ಷೆಯನ್ನು ಸಮೀಪದ ಬಳಗಾನೂರನಲ್ಲಿ ಪಾಸುಮಾಡಿಕೊಂಡ ಸುಶಿಕ್ಷಿತರು. ಬಾಲ್ಯದಲ್ಲಿಯೇ ಮದುವೆ ಆಗಿತ್ತು. ೧೯೨೨ರಲ್ಲಿ ಪ್ಲೇಗ್ ಕಾಯಿಲೆ ಊರಿಗೆ ಆವರಿಸಿಕೊಂಡು ದೊಡ್ಡ ಸಾವುನೋವು ತಂದೊಡ್ಡಿತು. ಪ್ಲೇಗ್ ಬಂದ ವಾರದ ಅವಧಿಯಲ್ಲಿ ತನ್ನ ತಾಯಿ ಮತ್ತು ಹೆಂಡತಿಯನ್ನು ಕಳೆದುಕೊಂಡ ಯಶವಂತರಾಯರಿಗೆ ದಿಕ್ಕೇ ತೋಚದಂತಾಯಿತು. ೨ನೇ ಮದುವೆ ಮಾಡಲು ತಂದೆಯವರು ನಿರ್ಧರಿಸಿದ್ದರೂ ಅದಕ್ಕೆ ಒಪ್ಪಿಕೊಳ್ಳದೇ ದೇಶ ಚಳುವಳಿಯಲ್ಲಿ ಧುಮುಕುವ ಅವರ ನಿಲುವು ಊರನ್ನು ಬಿಡುವಂತೆ ಮಾಡಿತೆನ್ನಬಹುದು. ಚನ್ನಬಸಪ್ಪ ಅಂಬಲಿ, ದುಬೆ ಮೊದಲಾದವರು ಚಿಕ್ಕರೂಗಿಗೆ ಬಂದು ಪ್ರಚೋದನಾತ್ಮಕ ಭಾಷಣ ಮಾಡಿ ಜನರನ್ನು ದೇಶಸೇವೆಗೆ ಒಳಗೊಳ್ಳುವಂತೆ ಮಾಡುತ್ತಿದ್ದರು. ಇದರ ಪ್ರಭಾವವು ಯಶವಂತರಾಯರ ಮೇಲಾಯಿತು. ಉಪ್ಪಾರ ದುಂಡಪ್ಪನವರೊಂದಿಗೆ ಹೋರಾಟಕ್ಕೆ ಧುಮುಕಿದರು. ನಾಸಿಕ್‌ದಲ್ಲಿ ನೆಹರೂ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೂ ಹೋಗಿ ಬಂದರು. ದೇಶಸೇವೆ ಒಂದೇ ಎಂಬ ಮಂತ್ರ ಪಠಿಸತೊಡಗಿದರು.

೧೯೪೧ರ ಜನವರಿ ೩೦ ರಂದು ಯಶವಂತರಾಯಗೌಡರು ತಮ್ಮ ಹುಟ್ಟೂರಿನಲ್ಲಿಯೇ ವೈಯಕ್ತಿಕ ಸತ್ಯಾಗ್ರಹ ಆರಂಭಿಸಿದರು. ಊರಿನ ಯೋಧರೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿ ಬ್ರಿಟಿಷರು ಈ ದೇಶವನ್ನು ಮುಕ್ತಮಾಡಬೇಕು ಎಂದು ಘೋಷಣೆಗಳನ್ನು ಕೂಗಿದರು. ಇವರನ್ನು ಬಂಧಿಸಿ

ವಿಸಾಪುರ ಜೈಲಿಗೆ ಹಾಕಲಾಯಿತು. ಇದರಿಂದ ಮತ್ತಷ್ಟು ಆಕ್ರೋಶಗೊಂಡ ಯಶವಂತರಾಯ ಅವರು ೧೯೪೪ರಲ್ಲಿ ಜಾಳಪೋಳ ಚಳುವಳಿಯಲ್ಲಿ ಭಾಗವಹಿಸಿ ಸ್ಟೇಶನ್ ಸುಡುವ ಕಾರ್ಯಕ್ಕೆ ಕೈಹಾಕಿದರು. ಜಾಳಪೋಳದ ಬಂಗ್ಲೆ ಸುಡುವ ಸಂದರ್ಭದಲ್ಲಿ ಸೆರೆಸಿಕ್ಕ ಇವರನ್ನು ೫ ವರ್ಷ ಜೈಲುವಾಸ ಮತ್ತು ರೂ. ೫೦ ದಂಡ ವಿಧಿಸಿ ಮಹಾರಾಷ್ಟ್ರದ ಯರವಾಡ ಜೈಲಿನಲ್ಲಿ ಇರಿಸಿತು. ದಂಡ ಕಟ್ಟಲಾಗದ ಪರಿಸ್ಥಿತಿ ಮನೆತನಕ್ಕೆ ಬಂದೊದಗಿದ್ದು ದುರಂತವೇ ಸರಿ. ಮತ್ತೇ ಎಂಟು ತಿಂಗಳು ಸೆರೆಮನೆವಾಸದಲ್ಲಿ ಇರಬೇಕಾಯಿತು. ನಿತ್ಯ ಜೈಲಿನಲ್ಲಿ ಪ್ರಾರ್ಥನೆ ಮತ್ತು ಓದುವುದರಲ್ಲಿಯೇ ಕಾಲ ಕಳೆಯತೊಡಗಿದರು. ಭಾರತಮಾತೆಯ ಬಂಧ ವಿಮೋಚನೆ ಮಾಡು ಎಂದು ಪ್ರಾರ್ಥಿಸುತ್ತಿದ್ದ ಗೌಡರಿಗೆ ದೇಶ ಸ್ವಾತಂತ್ರ್ಯಪಡೆದ ದಿನವೇ ಬಿಡುಗಡೆ ಮಾಡಲಾಯಿತು. ವೈಯಕ್ತಿಕ ಸುಖವನ್ನು ಲೆಕ್ಕಿಸದೇ ದೇಶದ ಸಲುವಾಗಿ ಹೋರಾಟ ಮಾಡಿದ ಮಹಾನ್ ನೇತಾರನಾಗಿ ಯಶವಂತರಾಯ ಪಾಟೀಲ ಅವರು ಕಾಣುತ್ತಾರೆ.

## ಮಲಕಪ್ಪ ಪ್ಯಾಟಿ

ಚಿಕ್ಕರೂಗಿ ಹೋರಾಟಗಾರರಲ್ಲಿ ಮಾತಿನ ಮೂಲಕವೇ ಸ್ವಾತಂತ್ರ್ಯದ ಕಿಚ್ಚನ್ನು ಹೆಚ್ಚಿಸುತ್ತಿದ್ದ ಮಲಕಪ್ಪ ಪ್ಯಾಟಿ ಹುಟ್ಟಿದ್ದು ೧೯೧೦ರ ಆಸುಪಾಸು ತೀರ ಬಡಕುಟುಂಬದ ಪ್ಯಾಟಿ ಮಲಕಪ್ಪ ಓದಿದ್ದು ೬ನೇ ಇಯತ್ತೇವರೆಗೆ. ನಂತರ ಓದು ಮುಂದುವರೆಸಲಾಗದೆ ಕೃಷಿಯನ್ನು ಆರಂಭಿಸಿದರು. ನಂತರ ಸಣ್ಣ ದಿನಸಿ ಅಂಗಡಿಯನ್ನು ತೆರೆದು ಉಪಜೀವನ ಮಾಡಿಕೊಂಡಿದ್ದ. ಇಷ್ಟೊತ್ತಿಗಾಗಲೇ ಊರಲ್ಲಿ ಚಳುವಳಿಗೆ ಕೆಲವರು ಸೇರಿದ್ದರು. ಅದೇ ಗುಂಪನ್ನು ಸೇರುವ ತವಕದಲ್ಲಿದ್ದ ಮಲಕಪ್ಪಗೆ ಚನ್ನಬಸಪ್ಪ ಅಂಬಲಿ, ದುಬೆ ಹಾಗೂ ಊರಿನ ದುಂಡಪ್ಪ ಹೂಗಾರ ಅವರೊಂದಿಗೆ ಸಂಪರ್ಕವೂ ಬೆಳೆಯಿತು. ಈ ಸಂಪರ್ಕ ಸ್ವಾತಂತ್ರ್ಯ ಸೇನಾನಿಯಾಗಲು ಪ್ರೇರೇಪಿಸಿತು.

ಮಲಕಪ್ಪ ಪ್ಯಾಟಿ ಅವರು ಚಿಕ್ಕರೂಗಿಯ ಹೋರಾಟಗಾರರನ್ನು ತಮ್ಮೊಂದಿಗೆ ಕರೆದುಕೊಂಡು ಸುತ್ತಲಿನ ಹಳ್ಳಿಗಳಿಗೆ ಹೋಗಿ ದೇಶಾಭಿಮಾನದ ಕುರಿತಾಗಿ ಪ್ರಖರ ಭಾಷಣ ಮಾಡುತ್ತಿದ್ದನಂತೆ. ಸ್ವರಾಜ್ಯ ಮತ್ತು ದಂಗೆಯ ವಿಧಾನಗಳನ್ನು ಪರಿಣಾಮಕಾರಿಯಾಗಿ ಹೇಗೆ ಮಾಡಬೇಕು ಎಂಬುದನ್ನು ಹೇಳಿ ಜನರನ್ನು ದೇಶಸೇವೆಗೆ ಅಣಿಮಾಡುತ್ತಿದ್ದನೆಂದು ತಿಳಿಯುತ್ತದೆ. ಇವರ ಭಾಷಣ ಕೇಳಿ ಜನ ರೊಚ್ಚಿಗೆದ್ದು ಚಳುವಳಿಯಲ್ಲಿ ಪಾಲ್ಗೊಳ್ಳಲು ಮುಂದಾಗುತ್ತಿದ್ದರು. ಕೇರಯ ಪರಪ್ಪ ಮತ್ತು ತಾಂಡಾದ ಭಗವಾನ್‌ಸಿಂಗ್ ಅಂಗಡಿ ಅಂತವರು ಪ್ರೇರಣೆಗೊಳ್ಳಲು ಕಾರಣರಾದರು. ಭಾಷಣ ಮಾಡುವಾಗಲೇ ಪೊಲೀಸರು ಇವನನ್ನು ಬಂಧಿಸಿದರು. ಹೊರಗಡೆ ಬಂದ ಮೇಲೆ ಮತ್ತೇ ಅದೇ ಭಾಷಣ.



೧೯೪೦–೪೧ರಲ್ಲಿ ದೇಶದ ತುಂಬೆಲ್ಲ ವೈಯಕ್ತಿಕ ಸತ್ಯಾಗ್ರಹ ಚಳುವಳಿ ಸ್ವಯಂ ಪ್ರೇರಿತವಾಗಿ ಆರಂಭವಾಯಿತು. ಆರಂಭದಲ್ಲಿ ಚಿಕ್ಕರೂಗಿಯಲ್ಲಿ ಸತ್ಯಾಗ್ರಹ ಮಾಡಿದ. ೧೯೪೨ರಲ್ಲಿ ಹೊನ್ನಳ್ಳಿಯಲ್ಲಿ ಸತ್ಯಾಗ್ರಹ ಮಾಡಿದರು. ಆಗ ಸತ್ಯಾಗ್ರಹ ಮಾಡಲು ಗಾಂಧೀಜಿಯವರ ಒಪ್ಪಿಗೆ ಬೇಕಿತ್ತಂತೆ. ಪೊಲೀಸರ ಕೈಗೆ ಸಿಗದೆ ಚಳ್ಳೆಹಣ್ಣು ತಿನ್ನಸುತ್ತಾ ದೇಶಾಭಿಮಾನದ ಭಾಷಣಗಳನ್ನು ಮಾಡುತ್ತಲೇ ಅಪಾರ ದೇಶಪ್ರೇಮಿಗಳನ್ನು ತಯಾರುಮಾಡಿದ. ಒಂದು ಸಲ ಮನೆಯಲ್ಲಿ ಊಟಕ್ಕೆ ಕುಳಿತಾಗ ಪೊಲೀಸರು ಬಂಧಿಸಲು ಬಂದರು. ಆಗ ಮನೆಯ ಮಾಳಿಗೆ ಮೇಲೆ ಏರಿ ಅಲ್ಲಿಂದ ಪರಾರಿಯಾದ. ಮೂರು ಸಲ ಹೀಗೆ ಪೊಲೀಸರಿಂದ ತಪ್ಪಿಸಿಕೊಂಡು ತಿರುಗುತ್ತಿದ್ದ ಇವರನ್ನು ೧೯೪೨ರಲ್ಲಿ ಪೊಲೀಸರು ಬಂಧಿಸಿ ವಿಜಾಪುರ ಜೈಲಿಗೆ ಅಟ್ಟಿದರು. ೧೯೫೩ರಲ್ಲಿ ತಾಲ್ಲೂಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ ಮಲಕಪ್ಪ ಚಿಕ್ಕರೂಗಿ ಹೋರಾಟಗಾರರಿಗೆ ಮಾರ್ಗದರ್ಶಕರಾಗಿದ್ದರು. ೧೯೯೦ರಲ್ಲಿ ನಿಧನರಾದರು.

## ಭೀಮರಾಯ ನಾಟೀಕಾರ

ಭೀಮರಾಯ ನಾಟೀಕಾರ ಅವರು ೧೯೧೮ರಲ್ಲಿ ಹುಟ್ಟಿದರು. ೧೮ನೇ ವಯಸ್ಸಿಗೆ ಚಳುವಳಿಗೆ ಸೇರಿದ ದಿನದಿಂದ ಭೂಗತರಾಗಿಯೇ ಇದ್ದ ಭೀಮಕಾಯದ ಭೀಮರಾಯ ಬಹಳ ಬಲಿಶಾಲಿಯೂ ಆಗಿದ್ದರು. ೪ನೇ ತರಗತಿವರೆಗೆ ಓದು ಮುಗಿಸಿದ ನಾಟೀಕಾರ ಅಂಬಲಿ ಅವರು ಹೊರಡಿಸುತ್ತಿದ್ದ ಹಸ್ತಪತ್ರಿಕೆಯನ್ನು ಹಳ್ಳಿಹಳ್ಳಿಗೆ ಮುಟ್ಟಿಸುವ ಕಾರ್ಯ ಮಾಡುತ್ತಿದ್ದರು. ದೇಶದ ಆಗುಹೋಗುಗಳನ್ನು ಆ ಪತ್ರಿಕೆಯಲ್ಲಿ ನಿರಂತರವಾಗಿ ಕೊಡುತ್ತಿದ್ದರು. ಹಳ್ಳಿಗಳಿಗೆ ಹೋದ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಬ್ರಿಟಿಷರಿಗೆ ಅಂಜಿ ಅವರಿಗೆ ಸಹಾಯ ಮಾಡಬೇಡಿ, ಎಲ್ಲರಿಗೂ ಚಳುವಳಿಯಲ್ಲಿ ಭಾಗವಹಿಸುವಂತೆ ಹೇಳಿ ಅವರನ್ನು ಚಳುವಳಿಯಲ್ಲಿ ಧುಮುಕುವಂತೆ ಮಾಡುತ್ತಿದ್ದರು.

೧೯೪೧ರಲ್ಲಿ ಮುಳಸಾವಳಗಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ಕೈಗೊಂಡರು. ಈ ಸಮಯದಲ್ಲಿ ಪೊಲೀಸರು ಇವರನ್ನು ಬಂಧಿಸಿ ವಿಜಾಪುರ ಜೈಲಿಗೆ ೬ ತಿಂಗಳ ಕಠಿಣ ಶಿಕ್ಷೆಗೆ ಹಾಕಿದರು. ಮನೆಯವರು ದಂಡದ ಹಣವನ್ನು ಕಟ್ಟಿ ಇವರನ್ನು ಸೆರೆಮನೆಯಿಂದ ಬಿಡಿಸಿಕೊಂಡು ಬಂದರು. ಇವರದು ಎಂತಹ ದೇಶಪ್ರೇಮ ಎಂದರೆ ಜೈಲಿನಿಂದ ಬಂದ ಮಾರನೇ ದಿನ ಮತ್ತದೇ ಕಾಯಕ. ಮನೆಯಲ್ಲಿ ಯಾರಿಗೂ ಹೇಳದೇ ಊರುಬಿಟ್ಟು ನಾದದಿಂದ ಇಂಡಿವರೆಗಿನ ತಂತಿಯನ್ನು ಕತ್ತರಿಸಿ ದೂರಸಂಪರ್ಕ ವ್ಯವಸ್ಥೆಯನ್ನು ಹಾಳುಮಾಡಿದರು. ಇದರಿಂದ ಮತ್ತೇ ವಾರೆಂಟ್ ಜಾರಿಯಾಯಿತು. ಪೊಲೀಸರು ಇವರನ್ನು ದಸ್ತಗಿರಿ ಮಾಡಲು ಮುಂದಾದರು, ಅಳ್ಳಗಿಯಲ್ಲಿ ಸೆರೆಸಿಕ್ಕಾಗ ಹೇಗೋ ತಪ್ಪಿಸಿಕೊಂಡು ಮತ್ತೇ ದುಂಡಪ್ಪನವರ ತಂಡ ಸೇರಿ ತಾಂಬಾ ಬಂಗ್ಲೆ ಸುಟ್ಟು ಸಾಲೋಟಗಿ ಬಂಗ್ಲೆ ಸುಡಲು ಹೋದರು. ಕರಪತ್ರಗಳನ್ನು ಜನರಿಗೆ ತಲುಪಿಸುವುದು ಇವರ ಮುಖ್ಯವಾದ ಕಾಯಕವಾಗಿತ್ತು. ಪೊಲೀಸರ ಕಣ್ಣುತಪ್ಪಿಸಿ ಜನರಿಗೆ ಸ್ವದೇಶಿ ಚಳುವಳಿಯ ಕಾಗದಗಳನ್ನು ತಲುಪಿಸುತ್ತಿದ್ದರಂತೆ. ಬುಲೆಟನ್ ಪತ್ರಗಳನ್ನು ಪೊಲೀಸ್ ಸ್ಟೇಶನ್ ಗೋಡೆಗೆ ಅಂಟಿಸಿಯೇ ಎಲ್ಲರೆದುರಿಗೆ ಧೈರ್ಯ ತೋರಿದ ಪರಾಕ್ರಮಿ ಈ ಭೀಮಸೇನ. ೧೯೪೧ ರ ವೈಯಕ್ತಿಕ ಚಳುವಳಿಯಲ್ಲಿ ಮತ್ತು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ೫ ವರ್ಷಗಳ ಕಾಲ ಜೈಲು ವಾಸ ಅನುಭವಿಸಿದರು. ವಿಸಾಪುರ ಜೈಲಿನಲ್ಲಿದ್ದಾಗ ಈತನು ಓಡಿಹೋಗದಂತೆ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಜೈಲಿನಿಂದ ಮುಕ್ತಿಯಾದ ಭೀಮರಾಯರ ದೇಶಸೇವೆ ಅನನ್ಯವಾದುದು. ಈ ಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ ಎನಿಸಿಕೊಂಡರು. ಸ್ವಾತಂತ್ರ್ಯಾನಂತರವೂ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಚಿರಸ್ಥಾಯಿಯಾಗಿ ಉಳಿದರು. ೧೭ ಪೆಬ್ರುವರಿ ೧೯೯೩ ರಂದು ನಿಧನರಾದರು.

## ಗುರುಬಸಪ್ಪ ಹಡಪದ

ಗುರುಬಸಪ್ಪ ಹಡಪದ ಅವರು ಸಂಗಪ್ಪ ಮತ್ತು ಕಾಶೀಬಾಯಿ ಅವರ ಮಗನಾಗಿ ೧೮೯೬ರಲ್ಲಿ ಚಿಕ್ಕರೂಗಿಯಲ್ಲಿ ಜನ್ಮತಳೆದರು. ೬ನೇ ಇಯತ್ತೆವರೆಗೆ ಓದು. ಮೂಲ ಕುಲಕಸುಬು ಕ್ಷೌರಿಕ ವೃತ್ತಿಯನ್ನು ಮುಂದುವರೆಸಿದರು.



ಇವರಿಗೆ ಚಳುವಳಿಯಲ್ಲಿ ಧುಮುಕುವಂತೆ ಮಾಡಿದ್ದು ವೃತ್ತಪತ್ರಿಕೆಗಳ ಓದು ಮತ್ತು ತಮ್ಮೂರಿನಲ್ಲಿರುವ ಕೆಲವರು ಆಗಲೇ ಹೋರಾಟದಲ್ಲಿ ಭಾಗಿಯಾಗಿದ್ದು. ಎಲ್ಲವನ್ನೂ ತಿಳಿದುಕೊಂಡ ಗುರುಬಸಪ್ಪ ತಾನೂ ಅತ್ತ ಕಡೆ ಮುಖಮಾಡಲು ಅವರ ಸಂಗ ಮಾಡಿದನು. ಮುಂದೆ ಗುರುಬಸಪ್ಪನವರು ದೇಶಸೇವೆಯ ಭಾಗವಾಗಿ ೧೯೪೧ರಲ್ಲಿ ಶಿರಕನಹಳ್ಳಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ಕೈಗೊಂಡರು. ಬ್ರಿಟಿಷರು ದೇಶ ಬಿಟ್ಟು ಹೋಗುವವರೆಗೂ ತಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಘೋಷಿಸಿದರು. ಇದೇ ಸಮಯದಲ್ಲಿ ಅವರನ್ನು ಪೊಲೀಸರು ಬಂಧಿಸಿ ವಿಜಾಪುರ ಜೈಲಿಗೆ ಹಾಕಿದರು. ನಾಲ್ಕು ತಿಂಗಳು ಸೆರೆವಾಸ ಅನುಭವಿಸಿ ಬಂದರು. ಜೈಲಿನಲ್ಲಿದ್ದಾಗ ತಾಯಿ ಕಾಶೀಬಾಯಿ, ಪತ್ನಿ ನೀಲಮ್ಮಗೆ ಪ್ರಾಣಬೆದರಿಕೆ ಹಾಕಿದ್ದ ಊರ ಗೌಡನ ಮೇಲೆ ಸೇಡು ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದರು.

ನಿಂಬಾಳ ಸ್ಟೇಶನ್ ಸುಡುವಲ್ಲಿ ಪ್ರಮುಖ ಪಾತ್ರವಹಿಸಿದ ಗುರುಬಸಪ್ಪನ ಮೇಲೆ ಮತ್ತೇ ಕೇಸು ದಾಖಲಾಯಿತು. ಯಾರ ಕೈಗೂ ಸಿಗದೇ ಕೆಲ ವರ್ಷ ಭೂಗತರಾಗಿದ್ದರು. ಆರೋಗ್ಯದಲ್ಲಿ ಏರುಪೇರು ಆಗಿದ್ದರಿಂದ ಸ್ವತಃ ವಿಜಾಪುರ ಕೋರ್ಟಿನಲ್ಲಿ ಹೇಳಿಕೆ ನೀಡಿ ಹೋರಾಟದಿಂದ ದೂರ ಉಳಿದರು. ಬದುಕಿನ ದಿನಗಳನ್ನು ಹೋರಾಟದಲ್ಲಿಯೇ ಹೆಚ್ಚಿನ ಕಳೆದು ಸನ್ ೧೯೫೯ರಂದು ನಿಧನರಾದರು.

## ಸಿದ್ಧಲಿಂಗಪ್ಪ ಕೋಳ್ಕೂರ

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಹತ್ತರ ಪಾತ್ರವಹಿಸಿದವರು ಚಿಕ್ಕರೂಗಿ ಚಳುವಳಿಗಾರರು. ಊರಲ್ಲಿನ ಈ ಪಡೆಗೆ ಸಿದ್ದಲಿಂಗಪ್ಪ ಕೋಳ್ಕೂರ ಅವರ ಸೇರ್ಪಡೆಯೂ ಮಹತ್ತರವಾದುದು. ಸ್ವಂತ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದ ಸಿದ್ದಲಿಂಗಪ್ಪ ನಂತರದ ದಿನಗಳಲ್ಲಿ ಕಿರಾಣಿ ಅಂಗಡಿಯನ್ನು ನಡೆಸುವ ವರ್ತಕನಾಗಿಬಿಟ್ಟ. ಇಲ್ಲಿಗೆ ಬರುವವರು ದೇಶ ಸಮಾಚಾರದ ಸುದ್ದಿಯನ್ನು ತರುತ್ತಿದ್ದರು. ಸಂಜೆಗೆ ದಿನಪತ್ರಿಕೆಗಳು ಬಂದ ಮೇಲೆ ಅಂಗಡಿ ಮುಂದೆ ಚರ್ಚೆ ನಡೆಯುತ್ತಿತ್ತು. ಹೀಗಾಗಿ ಚಳುವಳಿಯ ಪರಿಚಯ ಸಣ್ಣದಾಗಿ ಸಿದ್ದಲಿಂಗಪ್ಪನಲ್ಲಿ ಬೆಳೆಹತ್ತಿತು. ಈ ಹೊತ್ತಿಗೆ ಮದುವೆಯೂ ಆಗಿದ್ದ ಸಿದ್ದಲಿಂಗಪ್ಪನ ಮೇಲೆ ಅವನ ಮಾವನ ಹಿಡಿತವಿತ್ತು. ಅವನಿಗೆ ಎಲ್ಲಿಯೂ

ಬಿಡುತ್ತಿರಲಿಲ್ಲ. ಆದರೆ ಅವನ ಮೇಲೆ ಆಗಲೇ ದೇಶಭಕ್ತಿ ಆವರಿಸಿಕೊಂಡಿತ್ತು. ಚಳುವಳಿಗೆ ಮುಂದಾಗಿಯೇ ಬಿಟ್ಟ.

ಆಲಮೇಲದಲ್ಲಿ ಸತ್ಯಾಗ್ರಹ ಚಳುವಳಿ ಮಾಡಲು ಮುಂದಾದ ಸಿದ್ದಲಿಂಗಪ್ಪನನ್ನು ತಡೆದ ಅವರ ಮಾವ ತೆಗ್ಗಿ ಶಿವಪ್ಪ ಇದಕ್ಕೆ ನಾನು ಬಿಡುವದಿಲ್ಲ, ಇರುವ ಒಬ್ಬ ಮಗಳ ಜೀವನ ಕತ್ತಲು ಮಾಡಲು ನಾನು ಬಿಡುವದಿಲ್ಲ ಎಂದು ಅಡ್ಡಗಟ್ಟಿದನು. ಇದರಿಂದ ಸತ್ಯಾಗ್ರಹಿಗಳಿಗೆ ಅವಮಾನವಾದಂತಾದರೆ, ಇತ್ತ ಶಿವಪ್ಪನಿಗೆ ತನ್ನ ಅಳಿಯನನ್ನು ಕಳೆದುಕೊಳ್ಳುವ ಭಯ. ಹೀಗೆ ಗೊಂದಲ ಸುರುವಾಯಿತು. ದುಂಡಪ್ಪ ಉಪ್ಪಾರ ಶಿವಪ್ಪನಿಗೆ ತಿಳಿಹೇಳಿದ, ದೇಶಸೇವೆ ನಮ್ಮೆಲ್ಲರ ಕರ್ತವ್ಯ ಎಂದ, ಕೊನೆಗೂ ಒಪ್ಪದಿದ್ದಾಗ ದೊಡ್ಡ ಕಲ್ಲನ್ನು ಎತ್ತಿ ಶಿವಪ್ಪನ ಮೇಲೆ ಪ್ರಹಾರ ಮಾಡಲು ಮುಂದಾದ. ಇದರಿಂದ ಎಚ್ಚೆತ್ತುಕೊಂಡ ಶಿವಪ್ಪ ಅವರ ಕೆಚ್ಚೆದೆಯನ್ನು ಮೆಚ್ಚಿ ಭಾರತ ಮಾತಾ ಕೀ ಜೈ ಎಂದ. ಆಲಮೇಲ ಸತ್ಯಾಗ್ರಹ ಆರಂಭಿಸಿದ ಸಿದ್ದಲಿಂಗಪ್ಪನನ್ನು ಪೋಲಿಸರು ಬಂಧಿಸಿದರು. ೬ ತಿಂಗಳು ಜೈಲುವಾಸ ಅನುಭವಿಸಬೇಕಾಯಿತು.

**ಅಯ್ಯಪ್ಪ ಕೊಂಡಗೂಳಿ**

ಒಕ್ಕಲುತನ ಮನೆತನದಲ್ಲಿ ಜನಿಸಿದ ಅಯ್ಯಪ್ಪ ಕೊಂಡಗೂಳಿ ಚಿಕ್ಕರೂಗಿ ಸ್ವಾತಂತ್ರ್ಯಸೇನಾನಿಗಳಿಗೆ ಸದಾ ಸಹಾಯಹಸ್ತ ನೀಡುತ್ತಿದ್ದನು. ಮಧ್ಯರಾತ್ರಿಯಲ್ಲೂ ತಮ್ಮ ಎತ್ತಿನ ಗಾಡಿಯನ್ನು ಅವರ ಸೇವೆಗೆ ನೀಡುತ್ತಿದ್ದನು ಅಲ್ಲದೇ ತಾನೂ ಚಕ್ಕಡಿಯನ್ನು ಹೊಡೆದುಕೊಂಡು ಅವರಿಗೆ ಬಿಟ್ಟುಬರುತ್ತಿದ್ದನು. ಅವರ ಹೋರಾಟದ ಕಾರ್ಯಗಳಿಗೆ ಈ ರೀತಿ ಸೇವೆ ಮಾಡುವುದು ತನ್ನ ಭಾಗ್ಯವೆಂದೇ ತಿಳಿದುಕೊಂಡಿದ್ದ ಅಯ್ಯಪ್ಪ ಚಳುವಳಿಗಾರರಿಗೆ ಚಕ್ಕಡಿಯಲ್ಲಿ ಕೂಡರಿಸಿ ಅವರಿಗೆ ಸಂಚಾರದ ಸುಗಮ ವ್ಯವಸ್ಥೆ ಮಾಡುತ್ತಿದ್ದನು. ಇದನ್ನರಿತ ಪೋಲೀಸಗೌಡನು ಇವನನ್ನು ಬಂಧಿಸಲು ಹೊಂಚುಹಾಕುತ್ತಿದ್ದನು. ಒಂದು ರಾತ್ರಿ ಚಳುವಳಿಗಾರರನ್ನು ಚಕ್ಕಡಿಯಲ್ಲಿ ಕೂಡ್ರಿಸಿಕೊಂಡು ಹೋಗುತ್ತಿರುವಾಗ ಪೊಲೀಸರು ಎದುರಾದರು. ಹೋರಾಟಗಾರರು ತಪ್ಪಿಸಿಕೊಂಡು ಹೋದರು, ಆದರೆ ಎತ್ತುಗಳನ್ನು ಬಿಟ್ಟುಹೋಗದ ಅವನು ಪೊಲೀಸರ ಸೆರೆಯಾಳಾದನು.

೫೦ ರೂ. ದಂಡ ಮತ್ತು ಐದು ವರ್ಷ ಜೈಲು ಶಿಕ್ಷೆ ಆಯಿತು. ವಿಸಾಪುರ ಜೈಲಿನಲ್ಲಿ ಐದು ವರ್ಷ ಕಳೆದರು. ಶಿಕ್ಷೆ ಇನ್ನೂ ಇರುವಾಗಲೇ



ದೇಶ ಸ್ವತಂತ್ರವಾಯಿತು. ಆಗ ಇವರು ಬಿಡುಗಡೆ ಹೊಂದಿದರು. ಚಿಕ್ಕರೂಗಿ ಹೋರಾಟಗಾರರಿಗೆ ಚಕ್ಕಡಿಯನ್ನು ನೀಡುತ್ತ ತಾನೂ ದೇಶಸೇವೆಯಲ್ಲಿ ತೊಡಗಿದ್ದನ್ನು ಇಂದಿನ ಚರಿತ್ರೆಯಲ್ಲಿ ಓದುತ್ತೇವೆ.

**ಮಲಕಪ್ಪ ಬಾಗಲಕೋಟ**

೧೯೪೨ರ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಸತ್ಯಾಗ್ರಹ ನಡೆಸುವಾಗಲೇ ಪೊಲೀಸರ ಕೈಗೆ ಸಿಕ್ಕು ಜೈಲು ಅನುಭವಿಸಿದ ಕ್ರಾಂತಿಕಾರಿ ಮಲಕಪ್ಪ ಬಾಗಲಕೋಟ ಚಿಕ್ಕರೂಗಿ ಚಳುವಳಿಗಾರರಲ್ಲಿ ಹಿರಿಯವ. ಚಿಕ್ಕರೂಗಿಯಲ್ಲಿ ಹೋರಾಟಗಾರರು ಶಿರನಹಳ್ಳಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿದ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದವ ಮಲಕಪ್ಪ. ಎಲ್ಲ ಕ್ರಾಂತಿಕಾರಿ ಕೆಲಸಗಳಲ್ಲಿ ಸದಾ ನಿರತನಾಗಿದ್ದ, ವಿಸಾಪುರ ಜೈಲಿನಲ್ಲಿದ್ದಾಗಲೇ ತಪ್ಪಿಸಿಕೊಂಡು ಬಂದಿದ್ದನು. ೧೯೪೪ರಲ್ಲಿ ಮತ್ತೇ ಜೈಲುವಾಸ ಅನುಭವಿಸಬೇಕಾಯಿತು. ಪರಾರಿಕೈದಿ ಎಂಬ ಹಣೆಪಟ್ಟಿ ಇದ್ದುದರಿಂದ ಪೊಲೀಸರ ಬಿಗಿ ಬಂದೊಬಸ್ತ್ ಮಾಡಲಾಗಿತ್ತು. ದೇಶ ಸ್ವಾತಂತ್ರ್ಯಪಡೆದ ಮೇಲೆ ಬಂಧನದಿಂದ ಮುಕ್ತರಾದರು.

**ದುಂಡಪ್ಪ ಹೂಗಾರ**

ದುಬೆ ಮತ್ತು ಅಂಬಲಿಯವರ ಸಂಪರ್ಕದಿಂದಾಗಿ ಚಳುವಳಿಯ ಮುನ್ನೆಲೆಗೆ ಬಂದವನೇ ದುಂಡಪ್ಪ ತಾಂಬಾ. ಮುಳವಾಡ ಬಂಗ್ಲೆಗಳನ್ನು ನೆಲಸಮ ಮಾಡುವ ತಂಡದಲ್ಲಿ ಇವನೂ ಸಕ್ರಿಯನಾಗಿದ್ದ. ಬಾಗಲಕೋಟದಿಂದ ಸೊಲ್ಲಾಪುರವರೆಗಿನ ಸಿಗ್ನಲ್ ಲೈಟ್ ಕಂಬಗಳನ್ನು ಒಡೆದು ಹಾಕುವಲ್ಲಿ ಇವನದು ಪ್ರಮುಖ ಪಾತ್ರ. ೧೯೪೧ರಲ್ಲಿ ಗೋಲಗೇರಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿದರು. ಬ್ರಿಟಿಷರನ್ನು ಬೈದು ಮಾತನಾಡುವದನ್ನು ಕೇಳಿಸಿಕೊಂಡ ಪೊಲೀಸರು ಬಂಧಿಸಿ ವಿಜಾಪುರ ಜೈಲಿಗೆ ಹಾಕಿದರು. ೧೯೪೪ರಲ್ಲಿ ಜಾಳಪೋಳ್ ಚಳುವಳಿಯಲ್ಲಿ ಭಾಗವಹಿಸಿ ರೈಲು ನಿಲ್ದಾಣಗಳ ಸುಡುವಲ್ಲಿ ಯಶಸ್ವಿಯಾದರು. ಒಟ್ಟು ೮ ವರ್ಷಗಳ ಜೈಲು ಶಿಕ್ಷೆಯನ್ನು ವಿಜಾಪುರ ಮತ್ತು ವಿಸಾಪುರ ಜೈಲಿನಲ್ಲಿ ಅನುಭವಿಸಿದರು. ೧೩.೧.೧೯೮೩ ರಂದು ನಿಧನ ಹೊಂದಿದರು.

**ಶಿವರಾಯಪ್ಪ ಏಳಕೋಟಿ**

ಸಿಂದಗಿ ತಹಶೀಲ್ದಾರ ಕಚೇರಿಯ ಮೇಲೆ ದಾಳಿಮಾಡಿ ಅಲ್ಲಿನ ಮಹತ್ವದ ಕಾಗದಪತ್ರಗಳನ್ನು ಸುಡುವ ಮೂಲಕ ಕ್ರಾಂತಿಕಾರಿ ಹೆಜ್ಜೆಗಳನ್ನು ಹಾಕಿದವರು

ಶಿವರಾಯಪ್ಪ ಏಳಕೋಟಿ ಅವರು. ತಮ್ಮೂರಿನ ದುಂಡಪ್ಪನವರ ಬಲಗೈಬಂಟನಾಗಿ ಅವರ ಎಲ್ಲ ಕಾರ್ಯಚಟುವಟಿಕೆಗಳಲ್ಲೂ ಪಾಲ್ಗೊಂಡು ಧೀಮಂತಿಕೆ ಮೆರೆದವರೇ ಶಿವರಾಯಪ್ಪ. ೧೯೪೧ರಲ್ಲಿ ಸಿಂದಗಿ ತಾಲೂಕಿನ ಪಡಗಾನೂರಿನಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಕೈಗೊಂಡಾಗ ಪೊಲೀಸರ ಬಂಧನಕ್ಕೆ ಒಳಗಾದರು. ವಿಜಾಪುರ ಜೈಲಿನಲ್ಲಿ ಆರು ತಿಂಗಳು ಶಿಕ್ಷೆ ಪಡೆದು ಊರಿಗೆ ಮರಳುತ್ತಾರೆ. ನಂತರ ಜಾಳಪೋಳ್ ಚಳುವಳಿಯಲ್ಲಿ ಭಾಗವಹಿಸಿ ಪೊಲೀಸರ ಕಣ್ಣುತಪ್ಪಿಸಿ ತಂತಿತಾರುಗಳನ್ನು, ರೈಲ್ವೆ ಹಳಿಗಳನ್ನು ಕಿತ್ತುಹಾಕುತ್ತಾರೆ. ಮಿಂಚಿನಾಳ ಸ್ಟೇಶನ್ ಸುಡುವ ಸಂದರ್ಭದಲ್ಲಿ ಪೊಲೀಸರ ಕೈಗೆ ಸಿಕ್ಕುಬಿದ್ದು ಜೈಲು ಸೇರುತ್ತಾರೆ. ಸ್ಟೇಶನ್‌ಗೆ ಬೆಂಕಿ ಹಚ್ಚುವದೆಂದರೆ ಅವರ ಪ್ರಿಯವಾದ ಕೆಲಸವಾಗಿತ್ತು. ಅಪ್ರತಿಮ ಗಾಂಧಿ ಅನುಯಾಯಿಯಾಗಿದ್ದ ಇವರು ದೇಶಸ್ವಾತಂತ್ರ್ಯ ಪಡೆಯುವ ದಿನಗಳಲ್ಲೂ ಜೈಲಿನಲ್ಲಿದ್ದೇ ಹೋರಾಟ ಮುಂದುವರೆಸುತ್ತಾರೆ.

### ಮುದಿಗೌಡಪ್ಪ ಪಾಟೀಲ

ಗಾಂಧೀಜಿಯವರ ಹೋರಾಟವನ್ನು ಬಲಪಡಿಸುವ ಸಲುವಾಗಿ ದೇಶದ ತುಂಬೆಲ್ಲ ಸತ್ಯಾಗ್ರಹಗಳು ನಡೆದವು. ಕರ್ನಾಟಕದ ಈ ತುದಿಯಲ್ಲೂ ಪರಿಣಾಮಕಾರಿಯಾಗಿ ಸತ್ಯಾಗ್ರಹಗಳು ನಡೆದವು. ಚಿಕ್ಕರೂಗಿ ಚಳುವಳಿಗಾರರಂತೂ ಪ್ರತಿಯೊಬ್ಬರೂ ವೈಯಕ್ತಿಕ ಸತ್ಯಾಗ್ರಹ ನಡೆಸಿದವರೇ ಆಗಿದ್ದಾರೆ. ಇದೇ ಪರಂಪರೆಯನ್ನು ಮುನ್ನಡೆಸಿದವರು ಮುದಿಗೌಡಪ್ಪ ಪಾಟೀಲ ಅವರು. ಗೌಡಮನೆತನದಲ್ಲಿದ್ದೂ ಬ್ರಿಟಿಷರಿಗೆ ಸಹಾಯ ಮಾಡದ ಇವರ ಸಾಹಸ ಮೆಚ್ಚುವಂತಹುದೇ. ೧೯೪೧ರಲ್ಲಿ ಸುರಗಿಹಳ್ಳಿಯಲ್ಲಿ ಇವರು ಮೊದಲ ಸತ್ಯಾಗ್ರಹ ಚಳುವಳಿ ಆರಂಭಿಸಿದರು. ಇದೇ ಸಮಯದಲ್ಲಿ ಪೊಲೀಸರು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿಗೆ ಹಾಕುತ್ತಾರೆ. ಅಲ್ಲಿ ಆರು ತಿಂಗಳು ಜೈಲು ಅನುಭವಿಸಿ ಊರಿಗೆ ಮರಳುತ್ತಾರೆ. ಊರಿಗೆ ಬಂದ ಮೇಲೆ ೧೯೪೨ರಲ್ಲಿ ಜಾಳಪೋಳ್ ಚಳುವಳಿ ಹೋರಾಟಗಾರರೊಂದಿಗೆ ಜುಮನಾಳ ಮತ್ತು ಮುಳವಾಡ ಸ್ಟೇಶನ್‌ಗಳಿಗೆ ಬೆಂಕಿ ಹಚ್ಚುತ್ತಾರೆ. ಎರಡು ವರ್ಷ ವಿಸಾಪುರ ಜೈಲು ನಂತರ ಯರವಾಡ ಜೈಲಿನಲ್ಲಿ ಕಾಲಕಳೆಯುತ್ತಾರೆ. ೫.೮.೧೯೯೦ರಂದು ತಮ್ಮ ೮೪ನೇ ವಯಸ್ಸಿನಲ್ಲಿ ಬದುಕಿಗೆ ವಿದಾಯ ಹೇಳುತ್ತಾರೆ.



### ಗುರುಪ್ಪ ಬಿರಾದಾರ

ಗುರಪ್ಪ ಬಿರದಾರ ಅವರ ತಂದೆ ಭೀಮರಾಯ, ತಾಯಿ ಕಲ್ಲವ್ವ. ಅನುಕೂಲಸ್ಥ ಕುಟುಂಬದಲ್ಲಿ ಜನಿಸಿದ ಇವರು ತನಗರಿವಿಲ್ಲದಂತೆಯೇ ದೇಶಚಳುವಳಿಗೆ ಆಸಕ್ತಿ ತೋರಿದರು. ಕರಪತ್ರ ಹಂಚುವುದು ಮತ್ತು ಹೋರಾಟಗಾರರಿಗೆ ಸಹಾಯ ಮಾಡುವುದು ನಿರಂತರವಾಗಿ ನಡೆದೇ ಇತ್ತು. ೧೯೪೨ರಲ್ಲಿ ಸುರಗಿಹಳ್ಳಿಯಲ್ಲಿ ಇವರದು ಮೊದಲ ಸತ್ಯಾಗ್ರಹ ಚಳುವಳಿ. ೧೯೪೩ರಲ್ಲಿ ಜಾಳಪೋಳ್ ಜೋರಾದ ಸಮಯದಲ್ಲಿ ಇವರೂ ಧುಮುಕಿದಂತೆ ಕಾಣುತ್ತದೆ. ೧೯೪೪ರಲ್ಲಿ ತಾಂಬಾದ ಬ್ರಿಟಿಷ್ ಬಂಗ್ಲೆಗೆ ಬೆಂಕಿ ಹಚ್ಚುವಾಗ ಪೊಲೀಸರ ಕೈಗೆ ಸಿಕ್ಕು ೧೯೪೭ರವರೆಗೂ ಜೈಲಿನಲ್ಲಿಯೇ ಶಿಕ್ಷೆ ಅನುಭವಿಸುತ್ತಾರೆ. ೫.೮.೧೯೯೦ರಂದು ನಿಧನ ಹೊಂದಿದರು.

### ಭರಮಣ್ಣ ಉಪ್ಪಾರ

ದುಂಡಪ್ಪನ ಸಹೋದರ ಸಂಬಂಧಿಯಾದ ಭರಮಣ್ಣನ ತಂದೆ ಸಿದ್ದಪ್ಪ, ತಾಯಿ ಜಕ್ಕವ್ವ ಅನಕ್ಷರಸ್ಥ ಕೂಲಿಕೆಲಸದವರು. ಅಣ್ಣನ ಹವ್ಯಾಸವೇ ಇವರಿಗೆ ಪ್ರಿಯವಾಗಿರಬೇಕು. ತಾನೂ ಚಳುವಳಿಯಲ್ಲಿ ಭಾಗವಹಿಸುವವರ ಜೊತೆ ಕೂಡಿಕೊಳ್ಳುವ ಆತುರದಲ್ಲಿದ್ದಾಗ ಅಂತಹ ಅವಕಾಶವೊಂದು ದೊರೆಯಿತೆನ್ನಬಹುದು. ಭರಮಣ್ಣ ಬುತ್ತಿ ತಗೊಂಡು ಹೊಲಕ್ಕೆ ಹೋಗುತ್ತಿರುವಾಗ ಚಳುವಳಿಗಾರರು ಅಡ್ಡಗಟ್ಟಿ ನಮಗೆ ಭಯಂಕರ ಹಸಿವಾಗಿದೆ ಊಟ ಬೇಕು ಎನ್ನುತ್ತಾರೆ. ಅವರ ಮಾತಿಗೆ ತಕ್ಷಣ ಒಪ್ಪಿ ಬುತ್ತಿ ಕೊಡುತ್ತಾನೆ, ಅವರಿಗೆ ನಾನು ಹೋರಾಟಕ್ಕೆ ಬರುವೆ ಸೇರಿಸಿಕೊಳ್ಳಿ ಎಂದಾಗ ಅವರು ಭಾರತಮಾತೆಯ ಕಷ್ಟಕ್ಕೆ ನೀನೂ ಬರುವಿಯಾದರೆ ಬರಬಹುದು ಎಂದು ತಮ್ಮ ಗುಂಪಿಗೆ ಸೇರಿಸಿಕೊಳ್ಳುತ್ತಾರೆ. ೧೯೪೪ರಲ್ಲಿ ಜಾಳಪೋಳ್ ಚಳುವಳಿಯಲ್ಲಿ ನಿಂಬಾಳದ ರೈಲ್ವೇ ಸ್ಟೇಶನ್ ಸುಡುವಾಗ ಪೊಲೀಸರಿಗೆ ಸೆರೆಸಿಕ್ಕು ಜೈಲಿಗೆ ಹಾಕುತ್ತಾರೆ. ವಿಸಾಪುರ ಮತ್ತು ವಿಜಾಪುರನಲ್ಲಿ ಜೈಲುವಾಸ ಅನುಭವಿಸುವರು. ೩೦.೧೦.೧೯೮೫ರಂದು ನಿಧನರಾದರು.

### ಗವ್ವಪ್ಪ ನಾಟೀಕಾರ

ಚಿಕ್ಕರೂಗಿಯಲ್ಲಿ ತಂದೆ ಸಾಯಬಣ್ಣ, ತಾಯಿ ಗಂಗವ್ವ ಅವರ ಮಗನಾಗಿ ಜನಿಸಿದರು. ಗವ್ವಪ್ಪನಿಗೆ ಕೃಷಿ ಮನೆತನದ ಜೊತೆಗೆ ತಳವಾರಕಿಯೂ ಇತ್ತು.

ಬ್ರಿಟಿಷರಿಗೆ ಸಹಾಯ ಮಾಡಬೇಕಾದ ತಳವಾರಕಿ ಕುಟುಂಬದವನಾದರೂ ಬ್ರಿಟಿಷರ ಅನೈತಿಕತೆ ವಿರುದ್ಧ ಸೆಟೆದು ನಿಂತರು. ತನ್ನೂರಿನ ಹೋರಾಟಗಾರರ ಜೊತೆ ಸೇರಿಕೊಂಡು ದೇಶಸೇವೆಯಲ್ಲಿ ತೊಡಗಿದರು. ಇದನ್ನು ಸಹಿಸದ ಬ್ರಿಟಿಷರು ತಳವಾರಕಿ ಕಿತ್ತುಕೊಂಡರು. ಇದಕ್ಕೆ ಬಗ್ಗದ ಗವ್ವಪ್ಪ ಸ್ವಾರ್ಥಕ್ಕೆ ತನ್ನವರನ್ನು ಬಲಿಕೊಡುವುದು ಎಂತಹ ನೀಚತನದ ಕಾರ್ಯ ಎಂದು ಬಗೆದು ತಳವಾರಕಿಯನ್ನೇ ಬಿಟ್ಟುಕೊಟ್ಟರು. ಜಾಳಪೋಳ ಚಳುವಳಿಯ ದಿನಗಳಲ್ಲಿ ದುಷ್ಕೃತ್ಯಗಳನ್ನು ಮಾಡುವುದು ಎಂದರೆ ದೇಶಕ್ಕೆ ಒಳ್ಳೆಯದು ಮಾಡಿದಂತೆ ಎಂಬ ನಂಬುಗೆಯ ಕಾಲದಲ್ಲಿ ಎಲ್ಲರಂತೆಯೇ ಧ್ವಂಸ ಕಾರ್ಯಗಳಲ್ಲಿ ತೊಡಗುತ್ತಾರೆ. ವಿಸಾಪುರ ಜೈಲಿನಲ್ಲಿ ಶಿಕ್ಷೆಯ ದಿನಗಳನ್ನು ಕಳೆಯುತ್ತಾರೆ. ೨೫.೪.೧೯೪೯ರಂದು ಬದುಕಿಗೆ ವಿದಾಯ ಹೇಳುತ್ತಾರೆ.

## ಗುರಣ್ಣ ಬಿರಾದಾರ

ಗೌಡಕಿ ಮನೆತನದ ಗುರಣ್ಣನವರು ಹುಟ್ಟಿದ್ದು ಚಿಕ್ಕರೂಗಿಯಲ್ಲಿ. ತಂದೆ ಬಸವಂತಪ್ಪಗೌಡ, ತಾಯಿ ಬಂಗಾರೆಮ್ಮನವರು. ಊರಲ್ಲಿ ಗೌಡರೆಂದರೆ ಇವರು ಬ್ರಿಟಿಷರಿಗೆ ಸಹಾಯ ಮಾಡುವವರು ಎಂಬುದನ್ನು ಸುಳ್ಳುಮಾಡಿದವರು ಗುರಣ್ಣ ಅವರ ಮನೆಯವರು. ಚಳುವಳಿಗಾರರಿಗೆ ಸಹಾಯಹಸ್ತ ನೀಡುತ್ತ ಮುಂದೊಂದು ದಿನ ಸ್ವಾತಂತ್ರ್ಯ ಹೋರಾಟಗಾರರೆನಿಸಿದರು. ಟೆಲಿಪೋನು ತಂತಿಗಳನ್ನು ಕತ್ತರಿಸುವುದು, ಕಂಬಗಳನ್ನು ಕೆಡುವುವುದು, ಮಿಂಚನಾಳ ಸೇತುವೆ ನಾಶಮಾಡಿ ಪೊಲೀಸರಿಂದ ತಪ್ಪಿಸಿಕೊಂಡು ತಾಂಬಾದಲ್ಲಿದ್ದರು. ಮಿಂಚನಾಳ ಸ್ಟೇಶನ್ ಸುಡುವಾಗ ಪೊಲೀಸರ ಕೈಗೆ ಸಿಕ್ಕು ಜೈಲುವಾಸ ಅನುಭವಿಸಿದರು. ೩೦.೩.೧೯೮೧ರಂದು ನಿಧನರಾದರು.

## ಬಾಲಾಜಿ ದೇಶಪಾಂಡೆ

ತಂದೆ ಭೀಮಾಜಿ. ತಾಯಿ ಭೀಮಾಬಾಯಿ ಅವರ ಉದರದಲ್ಲಿ ಚಿಕ್ಕರೂಗಿಯಲ್ಲಿ ಹುಟ್ಟಿದ ಬಾಲಾಜಿ ದೇಶಪಾಂಡೆ ಅವರು ಕುಲಕರ್ಣಿಕಿ ಮನೆತನದವರಾಗಿದ್ದು ಬ್ರಿಟಿಷರ ಪರವಾಗಿ ಕೆಲಸ ಮಾಡಬೇಕಾಗಿತ್ತು. ಆದರೆ ಈ ಬಾಲಾಜಿ ದೇಶಪಾಂಡೆ ಅವರು ಚಳುವಳಿಗಾರರ ಪರವಾಗಿ ಸಹಾಯ ಮಾಡುತ್ತ ದೇಶಾಭಿಮಾನ ಪ್ರಕಟಿಸಿದರು ಎಂದು ಹೇಳಬಹುದು. ಚಳುವಳಿಗಾರರನ್ನು ರಕ್ಷಿಸುವಲ್ಲಿ ಇವರ ಪಾತ್ರ ಹಿರಿದು. ಚಿಕ್ಕರೂಗಿ



ಹೋರಾಟಗಾರರು ದುಷ್ಕೃತ್ಯಗಳನ್ನು ಮಾಡಿ ಬಂದಾಗ ಅವರಿಗೆ ತಮ್ಮ ಮನೆಯಲ್ಲಿ ರಕ್ಷಣೆ ಮಾಡುತ್ತಿದ್ದರಂತೆ. ಈ ಸುದ್ದಿ ಗೊತ್ತಾಗಿ ಪೊಲೀಸರು ಒಮ್ಮೆ ದಾಳಿ ಮಾಡಿದಾಗ ಮನೆಯಲ್ಲಿ ತಾವು ಮಲಗುವ ಮಂಚದ ಕೆಳಗಡೆ ಅವರನ್ನು ಮಲಗಿಸಿ ಸುತ್ತ ಚೀಲಗಳನ್ನು ಹರಡಿಕೊಂಡು ಎಲ್ಲ ಚಳುವಳಿಗಾರರನ್ನು ಬಚ್ಚಿಟ್ಟು ಕಾಪಾಡಿದರು. ದೇಶದ ರಕ್ಷಣೆಗಾಗಿ ತಮ್ಮ ದೌಲತ್ತನ್ನು ಕಳೆದುಕೊಂಡ ಬಾಲಾಜಿ ಅವರ ಸಾಹಸ ಮೆಚ್ಚುವಂತಹದು. ದಿನಾಂಕ ೧೫.೭.೧೯೮೦ ರಂದು ನಿಧನರಾದರು.

## ಗೌಡಪ್ಪಗೌಡ ಪಾಟೀಲ

ಗೌಡಪ್ಪಗೌಡ ಪಾಟೀಲ ಅವರು ತಂದೆ ಗುಂಡಪ್ಪ, ತಾಯಿ ತಾಯವ್ವಗೌಡತಿ. ಚಿಕ್ಕರೂಗಿಯಲ್ಲಿ ಜನಿಸಿದರು. ಇವರ ಅಣ್ಣ ಮುದಿಗೌಡ ಪಾಟೀಲರಂತೆ ತಾವೂ ಚಳುವಳಿಯಲ್ಲಿ ಭಾಗವಹಿಸಿದರು. ಅಂಬಲಿ ಮತ್ತು ದುಬೆ ಅವರ ಪರಿಚಯವಿದ್ದದರಿಂದ ಆಗಾಗ ತಪ್ಪಿಸಿಕೊಂಡು ಇವರ ಮನೆಯಲ್ಲಿ ರಕ್ಷಣೆ ಪಡೆಯಲು ಬರುತ್ತಿದ್ದರು. ಚಳುವಳಿಗಾರರನ್ನು ರಕ್ಷಣೆ ಮಾಡುವುದು ದೊಡ್ಡ ಅಪರಾಧವೇ ಇದ್ದ ಕಾಲವದು. ಗುಂಡಪ್ಪಗೌಡನ ಇಬ್ಬರು ಮಕ್ಕಳು ದೇಶರಕ್ಷಣೆಯ ಜವಾಬ್ದಾರಿಯ ಹೊತ್ತು ಊರೂರು ಅಲೆದಾಡುತ್ತಿದ್ದುದರಿಂದ ತಂದೆಯವರಾದ ಗುಂಡಪ್ಪಗೌಡರಿಗೆ ತೀವ್ರ ನೋವಾದರೂ ಹೇಳಿಕೊಳ್ಳದೇ ಅವರಿಗೆ ಅವರಿಷ್ಟದಂತೆ ಬದುಕಲು ಬಿಟ್ಟರು. ಇಬ್ಬರೂ ಮಕ್ಕಳನ್ನು ಎದುರಿಗೆ ಕೂಡಿಸಿಕೊಂಡು ಹೋರಾಟ ಮೊದಲು, ಉಳಿದುದೆಲ್ಲ ಆಮೇಲೆ ಎಂದು ಹೇಳಿದ ಅವರ ದೇಶಾಭಿಮಾನವೂ ಅಪ್ರತಿಮವೇ ಸರಿ!.

❑

# ೪. ಆಲಮೇಲ ಪರಿಸರದ ಸ್ವಾತಂತ್ರ್ಯ ಹೋರಾಟಗಾರರು

ವಿಜಯಪುರ ಜಿಲ್ಲೆಯ ಆಲಮೇಲ ಪಟ್ಟಣವು ವ್ಯಾಪಾರಿ ಕೇಂದ್ರವಾಗಿ ಮೊದಲಿನಿಂದಲೂ ಹೆಸರುವಾಸಿಯಾಗಿದೆ. ಕಲಚೂರಿ ರಾಜಮನೆತನದಲ್ಲಿ ಆಳಿದ ಕಲಚೂರಿ ಬಿಜ್ಜಳನು (೧೧೩೦–೧೧೬೭) ಯಳಮೇಲಿ ಪಟ್ಟಣವನ್ನು ಸ್ಥಾಪಿಸಿದನು ಎಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಅದು ಈಗ ಆಲಮೇಲ ಎಂದಾಗಿದೆ. ಆಲಮೇಲದ ಉತ್ತರೇಶ್ವರ (ಈಗಿನ ವಿಶ್ವೇಶ್ವರ) ಮಠದಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದ ಸಂಗತಿಯನ್ನು ಮಾರ್ಸನಳ್ಳಿಯ ಕ್ರಿ.ಶ. ೧೦೬೭ರ ಶಾಸನ ತಿಳಿಸುತ್ತದೆ. ದೇಶಮುಖರ ವಂಶಕ್ಕೆ ಸೇರಿದ ಸರದಾರ್ ದಿವಾನ್ ಬಹದ್ದೂರ್ ಶಿವಲಿಂಗರಾವ್ ಜಗದೇವರಾವ್ ದೇಶಮುಖ ಅವರು ಸಹಕಾರ ಚಳವಳಿ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೆಂದು ತಿಳಿದು ಬರುತ್ತದೆ. ಇಂದು ಈ ಪಟ್ಟಣ ತಾಲ್ಲೂಕು ಕೇಂದ್ರವಾಗಿ ಸುತ್ತಲಿನ ೪೩ ಹಳ್ಳಿಗಳ ಭಾವಸೇತುವೆಯಾಗಿದೆ. ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಆಲಮೇಲ ತಾಲ್ಲೂಕಿನ ಹೋರಾಟಗಾರರ ಪಾತ್ರ ಅನುಪಮವಾದುದು.

ದೇವರನಾವದಗಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿ ಆಶ್ರಯ ಪಡೆದಿದ್ದ ಮಹಾನ್ ಸ್ವಾತಂತ್ರ್ಯ ಸೇನಾನಿ ವಾಸುದೇವ ಪಥಕೆ ಈ ನೆಲವನ್ನು ಹೋರಾಟದ ಮುಖ್ಯ ಭೂಮಿಕೆಯನ್ನಾಗಿ ಮಾಡಿಕೊಂಡಿದ್ದ. ಸಮೀಪದ ದೇವಣಗಾಂವ, ಕಡ್ಲೇವಾಡ, ಮಲಘಾಣ ಮೊದಲಾದ ಊರುಗಳಲ್ಲಿ ಈ ದೇಶಭಕ್ತನಿಂದಾಗಿ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು. ತೆರಿಗೆ ನೀತಿಯ ವಿರುದ್ಧವಾಗಿ ಸೆಟೆದು ನಿಂತರು. ಸ್ವಾತಂತ್ರ್ಯ ದೊರೆತ ನಂತರವೂ ನಡೆದ ಅನೇಕ ಚಳುವಳಿಗಳಿಗೆ ಈ ನೆಲ ಸಮರ್ಪಿಸಿಕೊಂಡಿದೆ ಎಂಬುದನ್ನು ಗೋಕಾಕ ಚಳುವಳಿಯ ಗಂಗಾಧರ ಕೋರಳ್ಳಿ ಅವರ ಹೋರಾಟದ ಸಂದರ್ಭ ಸ್ಮರಿಸುತ್ತದೆ. ಆಲಮೇಲ ಪಟ್ಟಣವನ್ನು ಕೇಂದ್ರವನ್ನಾಗಿ ಮಾಡಿಕೊಂಡ ಅನೇಕ ಸ್ವಾತಂತ್ರ್ಯಯೋಧರು ಇಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿದ್ದಾರೆ.

## ಹಣಮಂತ ಪಾಟೀಲ

ಹಣಮಂತ ಪಾಂಡುರಂಗ ಪಾಟೀಲ ಅವರು ಸಿಂದಗಿ ತಾಲ್ಲೂಕು (ಈಗ ಆಲಮೇಲ) ಆಲಮೇಲ ಪಟ್ಟಣದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಆಲಮೇಲದಲ್ಲಿ ಮುಗಿಸಿ ಮುಲ್ಕಿ ಪರೀಕ್ಷೆ ಬರೆಯಲೆಂದು ವಿಜಯಪುರಕ್ಕೆ ಹೋಗಬೇಕಾಗಿಬಂತು. ಅಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಬಹಳಷ್ಟಿತ್ತು. ಅಲ್ಲಿ ನಿತ್ಯ ಬೆಳಗ್ಗೆ ಪ್ರಭಾತಫೇರಿಗಳು ನಡೆಯುತ್ತಿದ್ದವು. ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ–ಕಾಲೇಜು ಹುಡುಗರು, ಹೆಣ್ಣುಮಕ್ಕಳು ಕೈಯಲ್ಲಿ ಧ್ವಜ ಹಿಡಿದುಕೊಂಡು ಪ್ರಭಾತಪೇರಿ ಹೊರಡುತ್ತಿದ್ದರು. ಇದನ್ನು ಕಂಡು ನಾನೂ ಉತ್ಸಾಹದಿಂದ ಭಾಗವಹಿಸಿದೆ. ಅಲ್ಲಿ ಪ್ರಮುಖರಾದ ಕಾರಖಾನೀಸ್ ಮತ್ತು ವಿಠೋಬಾ ನಿಕ್ಕಂ ಅವರ ಪ್ರಚೋದನಕಾರಿ ಸಾರ್ವಜನಿಕ ಭಾಷಣಗಳು ಕೇಳಿದೆ. ಪರದೇಶೀಯ ಬಟ್ಟೆಗಳನ್ನು ವಿರೋಧಿಸಿ ಸುಡುವುದನ್ನು ಈ ಎಲ್ಲ ಕಾರ್ಯಗಳನ್ನು ನೋಡಿ ನಾನು ಪ್ರಭಾವಿತನಾದೆ ಎಂದು ಅವರೇ ಬರೆದುಕೊಳ್ಳುತ್ತಾರೆ. ಇಲ್ಲಿಂದ ಅವರ ಹೋರಾಟ ಆರಂಭವಾಯಿತು. ಹುಬ್ಬಳ್ಳಿಗೆ ಹೋಗಿ ಆಲಮೇಲದ ಕೆ.ವಿ.ಕುಲಕರ್ಣಿ ಅವರನ್ನು ಭೇಟಿಯಾಗಿ ಕಾಂಗ್ರೆಸ್ ಸದಸ್ಯತ್ವ ಪಡೆದುಕೊಂಡರು. ಅಮಾಯಕರ ಮೇಲೆ ದೌರ್ಜನ್ಯವನ್ನು ಎಸಗುತ್ತಿರುವ ಬ್ರಿಟಿಷರನ್ನು ಬೇಗ ದೇಶದಿಂದ ಕಳಿಸಬೇಕು ಎಂಬ ಭಾವ ಮನದಲ್ಲಿ ಬರತೊಡಗಿತು. ಮುಂದೆ ಅಂಕೋಲೆಯಲ್ಲಿ ಕರನಿರಾಕರಣೆ ಚಳುವಳಿಯಲ್ಲಿ ಭಾಗವಹಿಸಿದರು. ಒಂದೆರಡು ಬಾರಿ ಪೋಲೀಸರ ಕೈಗೆ ಸಿಕ್ಕಾಗ ಸುಳ್ಳು ಹೇಳಿ ತಪ್ಪಿಸಿಕೊಂಡರು.

ಅಂಕೋಲ ತಾಲ್ಲೂಕು ಹಿಚಕಡ ಗ್ರಾಮವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸುತ್ತಲಿನ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಜಾಗೃತಿ ಮೂಡಿಸತೊಡಗಿದರು. ಕರನಿರಾಕರಣೆ ಮಾಡುವ ವಿಚಾರವನ್ನು ಜನರಿಗೆ ಹೇಳುತ್ತಾ ಕರಪತ್ರಗಳನ್ನು ಹಂಚುವ ಕೆಲಸದಲ್ಲಿ ನಿರತರಾದರು. ಕರ್ನಾಟಕ ವೈಭವ, ಕರ್ಮವೀರ ಮೊದಲಾದ ಪತ್ರಿಕೆಗಳಲ್ಲಿ ಬರುತ್ತಿದ್ದ ಹೋರಾಟದ ವಿಷಯಗಳನ್ನು ಜನರಿಗೆ ತಲುಪಿಸುತ್ತಿದ್ದರು. ಅಲ್ಲದೇ ತಾವು ಈ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ನಿತ್ಯವೂ ಸುತ್ತಲಿನ ಹಳ್ಳಿಗಳಿಗೆ ಹೋಗುವುದು. ರಾಷ್ಟ್ರಗೀತೆ ಹಾಡುವುದು,

ಧ್ವಜವಂದನೆ ಸಲ್ಲಿಸುವುದು. ಜನರಲ್ಲಿ ದೇಶಪ್ರೇಮ ಬಿತ್ತುವುದು ಕಾಯಕವಾಗಿ ಬಿಟ್ಟಿತು. ಅಂಕೋಲಾ ಭಾಗದಲ್ಲಿ ನಡೆಯುವ ಎಲ್ಲ ಹೋರಾಟಗಳಲ್ಲಿ ಸಕ್ರಿಯರಾಗಿರುತ್ತಿದ್ದರು. ಒಮ್ಮೆ ಬುಲೆಟಿನ್ ಹಂಚುತ್ತಿರುವಾಗ ಪೊಲೀಸರ ಕೈಗೆ ಸಿಕ್ಕಿಬಿದ್ದರು. ಅಲ್ಲಿ ಅವರಿಗೆ ನಯ ವಿನಯಗಳಿಂದ ಸುಳ್ಳುಹೇಳಿ ಅವರಿಂದ ಬಿಡಿಸಿಕೊಂಡು ಪಾರಾದರು.

ಹಣಮಂತ ಪಾಟೀಲ ಅವರು ಅಂಕೋಲಾ ಭಾಗದಲ್ಲಿ ಸಿದ್ದಾಪುರದ ರಾಮನಾಯಕ ಭೀಮನಾಯಕ ಶಾನಭೋಗ ಎಂದು ಹೇಳಿಕೊಂಡು ಪೊಲೀಸರ ಕೈಗೆ ಸಿಗದೇ ಬಹಳ ದಿನಗಳ ಕಾಲ ದೇಶಚಳುವಳಿಯಲ್ಲಿ ಭಾಗವಹಿಸಿದರು. ಆಗಾಗ ತಮ್ಮ ತವರು ಆಲಮೇಲಕ್ಕೂ ಬಂದು ಹೋಗಿ ಮಾಡುತ್ತಿದ್ದರು. ಇಲ್ಲಿನ ಹೋರಾಟಗಾರರಿಗೆ ಮಾರ್ಗದರ್ಶನ ಮಾಡುತ್ತಾ ದೇಶದೆಲ್ಲೆಡೆ ನಡೆಯುತ್ತಿರುವ ಭಾರತಾಂಬೆಯ ವಿಮೋಚನೆಗೆ ಸದಾ ಹಂಬಲಿಸುತ್ತ ಸಕ್ರಿಯ ಹೋರಾಟಗಾರರಾಗಿ ಹಣಮಂತ ಪಾಟೀಲ ಬದುಕಿದರು.

## ರಂಗರಾವ್ ಕುಲಕರ್ಣಿ

ರಂಗರಾವ್(ರಂಗೋ) ಹಣಮಂತ ಕುಲಕರ್ಣಿ ಅವರು ಆಲಮೇಲ (ಆಗ ಸಿಂದಗಿ) ತಾಲ್ಲೂಕಿನ ದೇವಣಗಾಂವ ಗ್ರಾಮದಲ್ಲಿ ೧೯೦೯ರಲ್ಲಿ ಜನಿಸಿದರು. ಮುಲ್ಕಿ ಪರೀಕ್ಷೆ ಬರೆಯಲು ವಿಜಾಪುರಕ್ಕೆ ಹೋಗಿದ್ದ ರಂಗರಾವ್ ಅವರು ಅಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಹೋರಾಟಗಳು, ಪ್ರಭಾತಪೇರಿಗಳು, ಹಣಮಂತರಾವ್ ಕೌಜಲಗಿ, ಹಣಮಂತರಾವ್ ಮೊಹರೆ ಅವರ ಭಾಷಣಗಳನ್ನು ಕೇಳಿ ಪ್ರಭಾವಿತರಾಗಿ ಮುಲ್ಕಿ ಪರೀಕ್ಷೆ ಬರೆಯದೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಕಿದರು. ೧೯೩೧ರಲ್ಲಿ ಕಾಕಾ ಖಾರಕಾನೀಸ ಅವರು ನಡೆಸುತ್ತಿದ್ದ ಸೇವಾದಳದ ತರಬೇತಿಯನ್ನು ಪಡೆದುಕೊಂಡರು. ವಿಜಾಪುರ ಮಾರುಕಟ್ಟೆಯಲ್ಲಿ ವಿದೇಶಿ ಬಟ್ಟೆಗಳನ್ನು ಕದ್ದು ಇಲ್ಲವೇ ಬಲವಂತವಾಗಿ ಪಡೆದು ಅವುಗಳನ್ನು ಸಂಗ್ರಹಿಸಿ ಸುಡುವುದು ಮೊದಲಾದ ಕೃತ್ಯಗಳಲ್ಲಿ ಭಾಗವಹಿಸಿದ್ದನ್ನು ಕಂಡು ಚಳುವಳಿಗಾರ ನಾಯಕರು ಇವರನ್ನು ರಾಣೆಬೆನ್ನೂರಿಗೆ ಕಳಿಸಿದರು. ಅಲ್ಲಿ ಗುದ್ಲೆಪ್ಪ ಹಳ್ಳಿಕೇರಿ ಅವರ ನೇತೃತ್ವದಲ್ಲಿ ವಿದೇಶಿ ಬಟ್ಟೆ ಮಾರಾಟವನ್ನು ವಿರೋಧಿಸಿ ಅವುಗಳನ್ನು ದೋಚಿದರು. ಮುಂದೆ ದಾವಣಗೆರೆ. ಹರಿಹರಗಳಲ್ಲೂ ಪಿಕೆಟಿಂಗ್ ಮಾಡಿದರು.



೧೯೩೨ರಲ್ಲಿ ಕರನಿರಾಕರಣೆ ಚಳುವಳಿ ಜೋರಾಯಿತು. ಸಿದ್ದಾಪುರಕ್ಕೆ ಪ್ರಚಾರಕರೆಂದು ಇವರನ್ನು ನೇಮಿಸಲಾಯಿತು. ಅಲ್ಲಿನ ಹಳ್ಳಿಗಳಾದ ಎಕ್ಕುಂಬಿ, ಇಸಲೂರು, ಬಸಕೊಪ್ಪಗಳಲ್ಲಿ ಪ್ರಚಾರ ಮಾಡಿದರು. ಕಂದಾಯ ಕಟ್ಟದವರ ವಿವರಗಳನ್ನು ಬುಲೆಟಿನ್‌ಗಳಲ್ಲಿ ನೀಡುವುದು ಮತ್ತು ಇತರರು ಹೀಗೆ ಮಾಡಿ ಎಂದು ಹೇಳುವುದು, ಸಿದ್ದಾಪುರ ಕಾಡಿನಲ್ಲಿ ಗಂಧದಮರ ಕಡಿಯುವುದು ನಿತ್ಯ ಇವರ ಕೆಲಸವಾಯಿತು. ಪೊಲೀಸರು ಹೊಂಚು ಹಾಕಿ ೧೩.೨.೧೯೩೨ ರಂದು ಬಂಧಿಸಿದರು. ೬ ತಿಂಗಳು ಜೈಲು ಶಿಕ್ಷೆ ಮತ್ತು ನೂರು ರೂಪಾಯಿ ದಂಡ ವಿಧಿಸಿ ಕಾರವಾರ ಜೈಲಿನಲ್ಲಿಟ್ಟರು. ೧೯೩೬ರಿಂದ ೧೯೪೨ರ ವರೆಗೆ ಇಂಡಿ ಮತ್ತು ಸಿಂದಗಿ ತಾಲ್ಲೂಕಿನ ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರಕನಾಗಿ ಕೆಲಸ ಮಾಡಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ರಂಗೋರಾವ್ ಅವರು ಸಿಂದಿ ಗಿಡ ಕಡಿಯುವುದು, ತಾರ ತಂತಿ ಕಡಿಯುವುದು ಮೊದಲಾದ ಕಾರ್ಯಗಳಲ್ಲಿ ಭಾಗವಹಿಸುವುದು ಮತ್ತು ಅಂತವರಿಗೆ ಪ್ರೋತ್ಸಾಹಿಸುವುದು ಮಾಡುವ ಮೂಲಕ ಕುಲಕರ್ಣಿಕಿ ಅನ್ನುವ ಜವಾಬ್ದಾರಿಯನ್ನು ಧಿಕ್ಕರಿಸಿದರು.

## ಸಂಗಪ್ಪ ಸಲಾದಹಳ್ಳಿ

ಸಂಗಪ್ಪ ಸಲಾದಹಳ್ಳಿ ಅವರು ೨೫ ಜೂನ್ ೧೯೩೨ ರಂದು ಸಿಂದಗಿ ತಾಲ್ಲೂಕಿನ ಸಲಾದಹಳ್ಳಿಯಲ್ಲಿ ಜನಿಸಿದರು. ಆಲಮೇಲ ಗ್ರಾಮವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡರು. ಹೈದ್ರಾಬಾದ ವಿಮೋಚನಾ ಚಳುವಳಿಯಲ್ಲಿ ಧುಮ್ಮದ್ರಿ ಶರಣಗೌಡ ಮುಂದಾಳತ್ವದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ ಚಳುವಳಿಯಿಂದ ಸ್ಫೂರ್ತಿಗೊಂಡು ಹೋರಾಟದಲ್ಲಿ ಭಾಗವಹಿಸುತ್ತಾರೆ. ಧುಮ್ಮದ್ರಿ ಶರಣಗೌಡ ಅವರ ಗುಂಪಿನಲ್ಲಿ ಸೇರಿಕೊಂಡು ಸಿಂದಗಿ ತಾಲ್ಲೂಕಿನ ಕಕ್ಕಳಮೇಲಿ, ಜೇವರ್ಗಿ ತಾಲ್ಲೂಕಿನ ಯಡ್ರಾಮಿ, ಮಳ್ಳಿ, ಕುಳಗೇರಿ, ನಾಗರಾಳ ಮೊದಲಾದ ಹಳ್ಳಿಗಳಲ್ಲಿ ಸೊಲ್ಲಾಪುರ ಕ್ಯಾಂಪಿನ ಭೂಗತರೊಂದಿಗೆ ಸೇರಿ ಬ್ರಿಟಿಷರ ವಿರುದ್ಧ ಕಾರ್ಯಾಚರಣೆಗಿಳಿಯುತ್ತಾರೆ. ಈ ಗುಂಪಿನ ಸದಸ್ಯರನ್ನು ಬ್ರಿಟಿಷರು ಕೊಡೆಕಲ್ ಗುಡ್ಡದಲ್ಲಿ ಬಂಧಿಸಿ ಕಲಬುರ್ಗಿ ಕಾರಾಗೃಹಕ್ಕೆ ಶಿಕ್ಷೆಗೆ ಕಳಿಸುತ್ತಾರೆ. ಅಲ್ಲಿ ೬ ತಿಂಗಳು ಶಿಕ್ಷೆ ಅನುಭವಿಸಿ ಸಂಗಪ್ಪನವರು ಬಿಡುಗಡೆಯಾಗುತ್ತಾರೆ.

ನಿಜಾಂ ಸರಕಾರದ ವಿರುದ್ಧ ಹೋರಾಟ ಮಾಡಿ ಜೈಲುವಾಸ ಅನುಭವಿಸುದುದಕ್ಕಾಗಿ ಸರಕಾರವು ಸ್ವಾತಂತ್ರ್ಯ ಯೋಧರಿಗೆ ನೀಡುವ

ಪಿಂಚಣಿಯನ್ನು ನೀಡುತ್ತಿತ್ತು. ಈ ಪಿಂಚಣಿ ಪಡೆಯಲು ಅವರು ಮತ್ತೊಂದು ಹೋರಾಟವನ್ನೇ ಮಾಡಬೇಕಾಗಿ ಬಂದಿದ್ದು ವಿಪರ್ಯಾಸವೆಂದೇ ಹೇಳಬೇಕು. ೩೦ ಆಗಸ್ಟ್೨೦೧೪ ರಂದು ಸಂಗಪ್ಪ ಸಲಾದಹಳ್ಳಿಯವರು ತಮ್ಮ ೭೨ನೆಯ ವಯಸ್ಸಿನಲ್ಲಿ ತೀರಿಕೊಂಡರು.

## ಯಲ್ಲಪ್ಪ ವಡ್ಡರ

ಯಲ್ಲಪ್ಪ ಫಕೀರಪ್ಪ ವಡ್ಡರ ಅವರು ೧೯೧೯ರಲ್ಲಿ ಆಲಮೇಲ ತಾಲ್ಲೂಕಿನ ಮಲಘಾಣ ಗ್ರಾಮದಲ್ಲಿ ಕಡುಬಡ ಕುಟುಂಬದಲ್ಲಿ ಜನಿಸಿದರು. ಕಲ್ಲಿನಗಣಿಯಲ್ಲಿ ಕೆಲಸ ಮಾಡುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಫಕೀರಪ್ಪನಿಗೆ ಮಗ ಮುಲ್ಕೀ ಪರೀಕ್ಷೆ ಪಾಸಾಗಿ ಸರಕಾರಿ ನೌಕರಿ ಪಡೆಯಬೇಕೆಂಬ ಮಹದಾಸೆ ಇತ್ತು. ೧೯೩೮ರಲ್ಲಿ ಮುಲ್ಕೀ ಪರೀಕ್ಷೆ ಬರೆದು ನೌಕರಿಗಾಗಿ ಕಾಯುತ್ತಿದ್ದ ಯಲ್ಲಪ್ಪನಿಗೆ ಅಂಬಲಿ, ದುಬೆ, ಸುಗಂಧಿ ಮೊದಲಾದವರ ಪರಿಚಯವಾಗಿ ಕಾಂಗ್ರೆಸ್ ಸೇರಿದರು. ಬಸರಕೋಡದಲ್ಲಿ ನಾಲ್ಕು ಜನರು ವೈಯಕ್ತಿಕ ಸತ್ಯಾಗ್ರಹ ಮಾಡುವಾಗ ಕ್ರಾಂತಿಕಾರಿ ಭಾಷಣ ಮಾಡಿದ ಸಂದರ್ಭದಲ್ಲಿ ಪೊಲೀಸರು ಬಂಧಿಸಿ ಬಾಗಲಕೋಟ ಜೈಲಿಗೆ ಹಾಕಿದರು.

೨.೧೦.೧೯೪೨ರಂದು ಮಿಂಚಿನಾಳ ಸ್ಟೇಶನ್ ಸುಟ್ಟಿದ್ದಕ್ಕೆ ೬ ವರ್ಷ, ತೊರವಿ ಬಳಿ ತಂತಿ ಕತ್ತರಿಸಿದ್ದಕ್ಕೆ ೨ ವರ್ಷ, ಗೆದ್ದಲಮರಿ ಬಳಿ ತಂತಿ ಕತ್ತರಿಸಿದ್ದಕ್ಕೆ ಹೀಗೆ ಐದಾರು ಪ್ರಕರಣಗಳಲ್ಲಿ ೧೫ ವರ್ಷ ಜೈಲು ಶಿಕ್ಷೆ ಅನುಭವಿಸಿದರು. ೧೯೭೨ ಆಗಸ್ಟ್ ೧೫ ರಂದು ದೆಹಲಿಯಲ್ಲಿ ಪ್ರಧಾನಿಯವರು ತಾಮ್ರಪತ್ರ ನೀಡಿ ಗೌರವಿಸಿದರು.

## ಮರಲಿಂಗಪ್ಪ ಮಾದರ

ಮರಲಿಂಗಪ್ಪ ಮಾದರ ಅವರು ೧೯೨೪ರಲ್ಲಿ ಜಾನಪ್ಪ ಮತ್ತು ಸಿದ್ದಮ್ಮ ದಂಪತಿಗಳ ಮಗನಾಗಿ ವಿಜಯಪುರ ತಾಲ್ಲೂಕಿನ ಶಿವಣಗಿಯಲ್ಲಿ ಜನಿಸುತ್ತಾರೆ. ಇವರು ಸಿಂದಗಿ ತಾಲ್ಲೂಕಿನ ದೇವರ ನಾವದಗಿಯಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಮುಂದುವರೆಸಿದ್ದರು. ೭ನೇ ತರಗತಿಯಲ್ಲಿ ಓದುತ್ತಿರುವಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಟೆಲಿಫೋನ್ ತಂತಿ ಹಾಗೂ ರೈಲು ಹಳಿಗಳನ್ನು ಕಿತ್ತುಹಾಕಿದ ಆರೋಪದ ಮೇಲೆ ೧೮ ತಿಂಗಳ ಕಠಿಣ ಶಿಕ್ಷೆ



ಹಾಗೂ ೫೦ ರೂಪಾಯಿ ದಂಡ ವಿಧಿಸಲಾಯಿತು. ಜೈಲಿನಿಂದ ಬಂದ ಮೇಲೆ ಮತ್ತದೇ ಕಾಯಕ ಮುಂದುವರೆಸಿದರು. ವಿಜಾಪುರ ಸಿಂದಗಿ ರಸ್ತೆಯ ಪೂಲನ್ನು ತನ್ನ ಗೆಳೆಯರ ಸಹಾಯದೊಂದಿಗೆ ಕಿತ್ತುಹಾಕಿದರು. ಈ ಕೃತ್ಯಕ್ಕೆ ವಿಜಯಪುರ ಜೈಲಿಗೆ ಹಾಕಲಾಯಿತು. ಜೈಲಿನಲ್ಲಿದ್ದಾಗ ವಿಚಾರಣೆ ನಡೆದ ಸಮಯದಲ್ಲಿ ಇವರಿಗೆ ತಪ್ಪೊಪ್ಪಿಗೆ ಬರೆದುಕೊಡುವಂತೆ ಮ್ಯಾಜಿಸ್ಟ್ರೇಟ್‌ರು ಕೇಳುತ್ತಾರೆ. ಅದಕ್ಕೊಪ್ಪದ ಮರಲಿಂಗಪ್ಪನಿಗೆ ಒಂದೂವರೆ ವರ್ಷ ಜೈಲು ಶಿಕ್ಷೆ ನೀಡಲಾಗುತ್ತದೆ. ೧೯೪೨ರಂದು ಯರವಾಡ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆ ಹೊಂದುತ್ತಾರೆ. ಸ್ವಾತಂತ್ರ್ಯಾನಂತರ ಇವರಿಗೆ ಸರಕಾರವು ಶಿಕ್ಷಕ ಹುದ್ದೆಯನ್ನು ನೀಡಿ ಗೌರವಿಸಿತು. ೪೨ ವರ್ಷ ಶಿಕ್ಷಕರಾಗಿ ಪ್ರಾಮಾಣಿಕ ಸೇವೆ ಮಾಡಿದರು. ಸನ್ ೨೦೦೨ರಲ್ಲಿ ನಿಧನರಾದರು.

## ಕಡಣಿ ಕಲ್ಲಪ್ಪ

ಕಡಣಿ ಕಲ್ಲಪ್ಪ ಆಲಮೇಲ ತಾಲ್ಲೂಕಿನ ಕಡಣಿ ಗ್ರಾಮದ ಕ್ಷತ್ರಿ ಮನೆತನದ ಗಂಗಣ್ಣ ಮತ್ತು ಲಕ್ಷ್ಮೀಬಾಯಿಯವರ ಮಗನಾಗಿ ೧೯೧೦ ಜೂನ್ ೧ರಂದು ಜನಿಸಿದರು. ಕಂಚಿನ ಕಂಠದ ಕಲ್ಲಪ್ಪ ಹಾಡುಗಾರಿಕೆ ಮತ್ತು ಪದರಚನೆ ಎರಡನ್ನೂ ಜನ್ಮದಲ್ಲೇ ಪಡೆದುಕೊಂಡು ಬಂದಿದ್ದರು. ತಾನು ದೇಶಕ್ಕಾಗಿ ಹೋರಾಡುವ ಜನರಿಗೆ ಸದಾ ಸಹಾಯಹಸ್ತ ನೀಡುತ್ತಲೇ ಪ್ರಚೋದನಕಾರಿ ಪದಗಳನ್ನು ಕಟ್ಟಿ ಎಲ್ಲೆಡೆ ಹಾಡುತ್ತಿದ್ದರು. ಈ ಕಾರಣದಿಂದಲೇ ಮುಖ್ಯಪದಕಾರನಾಗಿ ಗುರುತಿಸಿಕೊಂಡು ಮಹಾರಾಷ್ಟ್ರ, ಆಂಧ್ರ ಮತ್ತು ಕನ್ನಡನಾಡಿನ ತುಂಬೆಲ್ಲ ಸಂಚರಿಸಿ ಕ್ರಾಂತಿಗೀತೆಗಳನ್ನು ಹಾಡುತ್ತಾ ದೇಶ ಚಳುವಳಿಯಲ್ಲಿ ಭಾಗವಸಿದರೆಂದು ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಅವರಿಂದ ಗೌರವಕ್ಕೆ ಪಾತ್ರನಾದನೆಂದು ತಿಳಿದು ಬರುತ್ತದೆ.

ದೇಶದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕರನಿರಾಕರಣೆ, ಗಾಂಧೀಜಿಯ ಮೇಲೆ, ದೇಶದೊಳಗಿನ ಬ್ರಿಟಿಷರ ದೌರ್ಜನ್ಯಗಳ ಬಗ್ಗೆ ಎಲ್ಲವನ್ನೂ ಗೀ ಗೀ ಪದಗಳಲ್ಲಿ ಹಾಡಿ ಜನರನ್ನು ಸ್ವಾತಂತ್ರ್ಯದೆಡೆಗೆ ಪ್ರೇರಣೆ ನೀಡುತ್ತಿದ್ದರು. ಗಾಂಧೀಜಿ ಕುರಿತು ಅತ್ಯಂತ ಅಭಿಮಾನದಿಂದ ಪದ ಕಟ್ಟಿ ಎಲ್ಲೆಡೆ ಹಾಡಿ ಪ್ರಶಂಸೆಗೆ ಪಾತ್ರನಾಗಿದ್ದರು.

**ಶುದ್ಧ ಖಾದಿ ಧರಿಸಿದಂಥ**
**ಯೋಧರಿಂದ ಯುದ್ಧ ಮಾಡಿ**
**ಗೆದ್ದ ಭೂಪ ಗಾಂಧೀಜಿ ಜಗದೊಳಗಽ//**
**ಕಲಿ ಕಾಲದೊಳಗ//**

ಎಂದು ಕೇಳುಗರ ಮನ ಕೆದುಕುವಂತೆ ಹಾಡಿ ಸಾಹಸಿಗಳ ಧೈರ್ಯ ಹೆಚ್ಚಿಸುತ್ತಿದ್ದ ಗಾಂಧಿ ಮೈಮೇಲಿನ ತುಂಡುಗಲ ಖಾದಿ ಬಟ್ಟೆಯೂ ದೇಶಪ್ರೇಮವನ್ನು ಸೂಸುವಂತೆ ಮಾಡುತ್ತಿದ್ದವು. ಈತನ ಪದಗಳಿಗೆ ಸಾಕಷ್ಟು ಬೇಡಿಕೆಯಿತ್ತು. ಕ್ರಾಂತಿ ಹಂಚುವ ಪದಗಳನ್ನು ಹಾಡದಿರಲೆಂದು ಇವರಿಗೆ ಆಮಿಷೆ ಒಡ್ಡಲಾಗುತ್ತಿತ್ತು ಎಂದು ತಿಳಿದರೆ ಎಂತಹ ಪ್ರತಿಭಾಶಾಲಿ ಆಗಿದ್ದರು ಎಂದು ಗೊತ್ತಾಗುತ್ತದೆ. ತನ್ನ ಪ್ರತಿಭೆಯನ್ನು ದೇಶಕ್ಕಾಗಿ ಅರ್ಪಿಸಿದರು.

**ನಮ್ಮ ನಾಡು ಇತ್ತು ಹೆಂಗ**
**ಇಂಗ್ಲಿಷರು ಬರುವ ಮುನ್ನ**
**ಜೋಡ ದಡಿಯ ಧೋತರ ಪಾಡ**
**ಮ್ಯಾಂಚೆಸ್ಟರ ಧೋತರ ಹೊರಗ ದೂಡ//**

ಹೀಗೆಂದು ಸ್ವದೇಶಿ ಚಳುವಳಿಯ ಸಂದರ್ಭದಲ್ಲಿ ತುಂಬಿದ ಸಭೆಗಳಲ್ಲೆಲ್ಲ ವಿದೇಶಿ ವಿರುದ್ಧ ಗುಡುಗುತ್ತಿದ್ದರು. ಬ್ರಿಟಿಷರ ಹೀನ ಕಾರ್ಯಗಳನ್ನು ಪದಕಟ್ಟಿ ಎಲ್ಲಡೆ ಹಾಡುತ್ತಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ಸುಭಾಷ್‌ಚಂದ್ರ 'ಭೋಸ್, ತಿಲಕ್' ಸಾವರ್ಕರ್, ನೆಹರೂ ಮೊದಲಾದವರ ಕುರಿತು ಪದಗಳನ್ನು ಸ್ವತ ರಚಿಸಿ ಹಾಡಿದರು.

1962ರಲ್ಲಿ ನಡೆದ ಭಾರತ–ಚೀನಾ ಯುದ್ಧದ ಸಂದರ್ಭದಲ್ಲಿ ಕಡಣಿ ಕಲ್ಲಪ್ಪನವರು ಕಟ್ಟಿದ ಹಾಡೊಂದು ಹೀಗಿದೆ.

**ಚೀನಾ ದೇಶದ ಕುನ್ನಿಗೋಳು**
**ದಂಡೆತ್ತಿ ಬರತಾರ,**
**ದೊಣ್ಣೀಲೆ ಹೊಡೀಬೇಕಽ**
**ಅವರಿಗೆ ಅಂಜಬಾರದ//**



ಎಂದು ದೇಶಾಭಿಮಾನದಿಂದ ಗೀಗೀ ಹಾಡು ಹಾಡುತ್ತಾ ದೇಶಭಕ್ತಿಯನ್ನು ಪ್ರದರ್ಶಿಸಿದ ಕಲ್ಲಪ್ಪನವರ ರಾಷ್ಟ್ರಾಭಿಮಾನ ಮೆಚ್ಚುವಂತಹದ್ದು. ಅವರಿಗೆ ಬ್ರಿಟಿಷರು ನೀನು ಬೇಡಿದ್ದನ್ನು ಕೊಡುತ್ತೇವೆ, ಸ್ವದೇಶಿ ವಿರುದ್ಧ ಹಾಗೂ ಕಾಂಗ್ರೆಸ್ ವಿರುದ್ಧ ಹಾಡೆಂದಾಗ, ಕಲ್ಲಪ್ಪ ಕೊಟ್ಟ ಉತ್ತರ ಮಾರ್ಮಿಕವಾಗಿತ್ತು.

"ಸಾಹೇಬ್ರಽ ತಾಯಿ ನೆಲ್ಲಕ್ಕ ದ್ರೋಹಾ ಮಾಡಿ ಹಾಡೋದು, ಇದ್ದೂ ಜೀವಂತ ಶವಾ ಆಗಿ ಬದುಕೋದು ಎರಡೂ ಒಂದಽ ನೋಡ್ರಿ :" ಎಂದರಂತೆ. ಅಂತಹ ಸ್ವಾಭಿಮಾನಿ ಬದುಕನ್ನು ನಡೆಸಿ ಸಾವಿರಕ್ಕೂ ಹೆಚ್ಚು ಪದಗಳನ್ನು ಬರೆದು ಈ ಭಾಗದಲ್ಲಿ ಕಡಣಿಯ ಹೆಸರನ್ನು ಎಲ್ಲಡೆ ಪಸರಿಸಿದರು. ದೇಶಾಭಿಮಾನಿಯಾಗಿದ್ದ ಕಲ್ಲಪ್ಪ ಕಡಣಿ ಗ್ರಾಮದ ಸರಪಂಚರೂ ಆಗಿ ಸಾಮಾಜಿಕ ಸೇವೆ ಸಲ್ಲಿಸಿದರು. ಕಲ್ಲಪ್ಪನವರಿಗೆ ಇಂತಹುದೇ ಹಾಡು ಎಂದು ಎಂದರೆ ಅದನ್ನು ತಕ್ಷಣದಲ್ಲಿ ಸಾಹಿತ್ಯ ರಚಿಸಿ. ತನ್ನ ಕಂಚಿನ ಕಂಠದಿಂದ ಹಾಡಿ, ಸಭೆಯನ್ನು ದಂಗುಬಡಿಸುತ್ತಿದ್ದರು. 1975ರಲ್ಲಿ ಕಡಣಿ ಕಲ್ಲಪ್ಪ ಅನಾರೋಗ್ಯದಿಂದ ನಿಧನರಾದರು.

***

## ಸಮಾರೋಪ

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶವ್ಯಾಪಿ ದೊಡ್ಡ ಆಂದೋಲನವೇ ನಡೆಯಿತು. ಮಹಾತ್ಮ ಗಾಂಧೀಜಿ ಅವರ ಕರೆಗೆ ಕೋಟಿ ಕೋಟಿ ಜನರು ಅಂದು ಕೈ ಜೋಡಿಸಿದ್ದರು. ಕರ್ನಾಟಕದಲ್ಲೂ ಬೃಹತ್ ಪ್ರಮಾಣದಲ್ಲಿ ಹೋರಾಟಗಳು ಎಲ್ಲೆಡೆ ನಡೆದವು. ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಕರ ನಿರಾಕರಣೆ, ಉಪವಾಸ ಸತ್ಯಾಗ್ರಹ, ಉಗ್ರಕೃತ್ಯಗಳು ನಿರಂತರವಾಗಿ ನಡೆಯುತ್ತಿದ್ದವು. ವಿಜಯಪುರ ಜಿಲ್ಲೆಯಲ್ಲೂ ಇದು ಹೊರತಾಗಿಲ್ಲ. ಕನ್ನಡ ನಾಡಿನ ಉದ್ದಗಲಕ್ಕೂ ಚಳುವಳಿಗಳು ನಡೆದವು. ೧೮೫೭ರ ಸಿಪಾಯಿ ದಂಗೆಯ ಮೊದಲು ಇಲ್ಲಿನ ಸಂಸ್ಥಾನಗಳ ರಾಜರುಗಳು ಬ್ರಿಟಿಷರ ವಿರುದ್ಧ ಅಸಮಾಧಾನ ಹೊರಹಾಕಿದ್ದಲ್ಲದೇ ಕಿತ್ತೂರು ಚೆನ್ನಮ್ಮನಂತವರು ಯುದ್ಧವನ್ನೇ ಸಾರಿದರು. ನೂರು ಬಗೆಗಳಲ್ಲಿ ಹೋರಾಟದ ಹಾದಿಗಳು ಸುರುವಾದವು. ವಿಜಯಪುರದ ಸಿಂದಗಿಯಲ್ಲಿ ೧೮೨೪ರಲ್ಲಿ ಸಿಂದಗಿ ಬಂಡಾಯವು ತೆರಿಗೆ

ನೀತಿಯ ವಿರುದ್ಧ ನಡೆಯಿತು. ಇದು ಒಂದು ಹಂತವಾದರೆ, ೧೯೪೭ರವರೆಗಿನ ಹೋರಾಟವೂ ಮತ್ತೊಂದು ರೀತಿಯದು. ಸಿಂದಗಿ ಬಂಡಾಯ ಬ್ರಿಟೀಷರ ಮೊದಲ ಸೋಲು ಆಗಿ, ಮುಂದೊಂದು ದಿನ ದೇಶಕ್ಕೆ ಸ್ವಾತಂತ್ರ್ಯ ಸಿಗುವ ದಿಕ್ಸೂಚಿಯೂ ಆಗಿದೆ.

ಗಾಂಧೀಜಿಯ ವ್ಯಕ್ತಿತ್ವಕ್ಕೆ, ಭಾಷಣಕ್ಕೆ ಮಾರುಹೋದವರು ದೇಶದ ಚಳುವಳಿಯಲ್ಲಿ ಧುಮಕಹತ್ತಿದರು. ಸಿಂದಗಿ ತಾಲ್ಲೂಕಿನ ಚಿಕ್ಕರೂಗಿ, ಆಲಮೇಲ, ದೇವಣಗಾಂವ ಮೊದಲಾದ ಕಡೆ ಹೋರಾಟದಲ್ಲಿ ಚಳುವಳಿಗಾರರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪತ್ರಿಕೆಗಳಲ್ಲಿ ಲೇಖನ ಬರೆಯುವುದು, ಹಾಡುಗಳನ್ನು ಕಟ್ಟುವುದು ಮೊದಲಾದ ಬೌದ್ಧಿಕ ಚಟುವಟಿಕೆಗಳು ಸಿಂದಗಿ ನೆಲದಲ್ಲಿ ನಡೆದವು. ಸ್ವಾಮಿ ರಾಮಾನಂದತೀರ್ಥ, ಮೊಹರೆ ಹಣಮಂತ್ರಾಯರು ಈ ನೆಲದಲ್ಲಿ ಹುಟ್ಟಿ ದೇಶದ ಅಪ್ರತಿಮ ಹೋರಾಟಗಾರರೆನಿಸಿಕೊಂಡರು. ಸ್ವಾಭಿಮಾನದಿಂದ ದೇಶಕ್ಕಾಗಿ ಹೋರಾಡಿದ ಕೆಲವರು ಕ್ರಾಂತಿಕಾರಿಗಳಾಗಿ ಬ್ರಿಟಿಷ್ ಆಡಳಿತ ವ್ಯವಸ್ಥೆಗೆ ಧಕ್ಕೆಯಾಗುವಂತೆ ಮಾಡಿದರು. ಟೆಲಿಫೋನು ತಂತಿಗಳನ್ನು ಕತ್ತರಿಸುವುದು, ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸುವುದು, ರೈಲು ಹಳಿಗಳನ್ನು ಕಿತ್ತುವುದು ಮೊದಲಾದ ಕ್ರಾಂತಿಕಾರಿ ಕೆಲಸಗಳನ್ನು ಇಲ್ಲಿನ ಹೋರಾಟಗಾರರು ಮಾಡಿದರು. ಆಲಮೇಲದಲ್ಲಿ, ಮುಳಸಾವಳಗಿ, ತಾಂಬಾ, ಚಿಕ್ಕರೂಗಿಯಲ್ಲಿ ಸತ್ಯಾಗ್ರಹ ಮಾಡವುದರ ಮೂಲಕ ತಮ್ಮ ದೇಶಾಭಿಮಾನವನ್ನು ಇಲ್ಲಿನ ಚಳುವಳಿಗಾರರು ತೋರಿದರು. ಈ ಕಿರು ಹೊತ್ತಿಗೆ ಅಂತಹ ಕಾರ್ಯಗಳ ಬಗ್ಗೆ ಮತ್ತು ದೇಶಕ್ಕಾಗಿ ಹೋರಾಡಿದ ಸಾಹಸಗಾಥೆಯನ್ನು ಹೇಳುತ್ತದೆ. ದೇಶಕ್ಕಾಗಿ ಸ್ವಾಭಿಮಾನದಿಂದ ಹೋರಾಡಿದ ಸ್ವಾಮಿ ರಾಮಾನಂದ ತೀರ್ಥರು ಎರಡು ಸಲ ಲೋಕಸಭೆಗೆ ಆಯ್ಕೆಯಾದರೆ, ಪಡಗಾನೂರಿನ ಶಂಕರಗೌಡರು ಮೂರು ಸಲ ವಿಧಾನಸಭೆ ಪ್ರವೇಶಿಸುತ್ತಾರೆ. ಇಂತಹ ಸಾಧಕರು ಈ ನೆಲದಲ್ಲಿ ಹುಟ್ಟಿ ಸಿಂದಗಿ ಹೆಸರನ್ನು ಚಿರಸ್ಥಾಯಿಯಾಗಿಸಿದ್ದಾರೆ.

❑

## ೫. ಅನುಬಂಧ : ಪೂರಕ ಲೇಖನ–೧

### ಸ್ವಾತಂತ್ರ್ಯ ಸೇನಾನಿಗೆ ಕೈ ಬೀಸಿ ಕರೆದ ದೇವರ ನಾವದಗಿಯ ದೇವಾಲಯ

– ಶಿವರಶಣ ಕೆ.ಗುಗ್ಗರಿ

ಅದೆಷ್ಟೋ ಕ್ರಾಂತಿಕಾರಿಗಳ ಹೆಸರನ್ನು ನಾವು ಕೇಳಿದ್ದೇವೆ. ಆದರೆ ೧೯ನೆಯ ಶತಮಾನದಲ್ಲಿ ಕೆಚ್ಚೆದೆಯ ಕ್ರಾಂತಿಯ ಕಿಡಿಯನ್ನು ಹಚ್ಚಿದ್ದ ಈ ಮಹಾಪುರುಷನ ಕಥೆಯನ್ನು ಬಹಳಷ್ಟು ಜನ ಕೇಳಿರಲಿಕ್ಕಿಲ್ಲ. ಮನೆಯಲ್ಲಿ ಆಸ್ತಿ ಅಂತಸ್ತು ತುಂಬಿ ತುಳುಕುತ್ತಿದ್ದರೂ ಭಾರತಮಾತೆಯ ದಾಸ್ಯಮುಕ್ತಿಗಾಗಿ ಬ್ರಿಟಿಷರ ಪಾಲಿಗೆ ಸಿಂಹ ಸ್ವಪ್ನವಾಗಿ ಕಾಡಿದ್ದ ಇವನೇ ವಾಸುದೇವ ಬಲವಂತ ಫಡಕೆ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ವಿಫಲವಾದ ನಂತರ ಸ್ವಾತಂತ್ರ್ಯ ಹೋರಾಟದ ಕಾವು ತಣ್ಣಗಾಗಿದೆ, ಭಾರತ ತಣ್ಣಗಾಗಿದೆ, ಭಾರತೀಯರು ಗುಲಾಮರಾಗಿದ್ದಾರೆ ಎಂದೇ ಭಾವಿಸಿದ್ದ ಬ್ರಿಟಿಷರಿಗೆ ಭಾರತೀಯರ ಕಿಚ್ಚು ಇನ್ನೂ ಆರಿಲ್ಲ ಎಂದು ತೋರಿಸಿದ ಮಹಾನ್ ಕ್ರಾಂತಿಕಾರಿಗಳಲ್ಲಿ ವಾಸುದೇವ ಬಲವಂತ ಫಡಕೆ ಕೂಡ ಒಬ್ಬರು.

### ಬಾಲ್ಯ

ಆತ ಜನಿಸಿದ್ದು ೪ನೆಯ ನವೆಂಬರ್ ೧೮೪೫ ರಂದು ಮಹಾರಾಷ್ಟ್ರದ ರತ್ನಗಿರಿ (ಈಗಿನ ಸಾಂಗ್ಲಿ) ಜಿಲ್ಲೆಯ ಸಹ್ಯಾದ್ರಿ ಪರ್ವತದ ತಪ್ಪಲಿನ ಒಂದು ಪುಟ್ಟ ಗ್ರಾಮ ಶಿರಢೋಣದಲ್ಲಿ. ಈ ಗ್ರಾಮದ ಒಂದು ಸಂಪ್ರದಾಯಸ್ಥ ಚಿತ್ಪಾವನ ಬ್ರಾಹ್ಮಣ ಕೋಮಿಗೆ ಸೇರಿದ ಶ್ರೀ ಬಲವಂತರಾವ್ ಫಡಕೆ ಮತ್ತು ಶ್ರೀಮತಿ ಸರಸ್ವತಿಬಾಯಿ ಎನ್ನುವ ದಂಪತಿಗಳೇ ಈತನ ಹೆತ್ತವರು. ವಾಸುದೇವ

ಮನೆಮಂದಿಗೆಲ್ಲ ಮುದ್ದಿನ ಮಗುವಾಗಿದ್ದರೂ ಅವನ ತುಂಟತನಕ್ಕೇನೂ ಕಡಿಮೆ ಇರಲಿಲ್ಲ. ತಂದೆ ಬಲವಂತರಾವ್‌ಗೆ ವಾಸುದೇವನ ಕೀಟಲೆ ಸ್ವಭಾವ, ಚೇಷ್ಟೆಗಳು ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಆದ್ದರಿಂದ ಅವನನ್ನು ಕಂಡರೆ ಅವರಿಗೆ ಸಿಡಿಮಿಡಿ. ಅವನು ಶಿರಢೋಣದಲ್ಲಿದ್ದರೆ ಕುಲಗೆಟ್ಟು ಹೋಗುತ್ತಾನೆಂದು ಕಲ್ಯಾಣದ ಮಾವನ ಮನೆಯಲ್ಲಿಟ್ಟು ಶಾಲೆಗೆ ಸೇರಿಸಿದರು. ಆದರೆ ಕಲ್ಯಾಣಕ್ಕೆ ಬಂದ ಮೇಲೆ ೧೨ ವರ್ಷದವನಾಗುತ್ತಲೇ ಶಿರಢೋಣದಲ್ಲಿದ್ದ ಅವನ ಸ್ವಚ್ಛಂಧ ಪ್ರವೃತ್ತಿಗೆ ಪೂರ್ಣವಿರಾಮ ಬಿದ್ದು ತುಂಟತನಕ್ಕೆ ತೆರೆಬಿತ್ತು. ನಿಯಮಿತವಾಗಿ ಶಾಲೆಗೆ ಹೋಗಲು ಪ್ರಾರಂಭಿಸಿದ. ಆತನ ಚುರುಕು ಬುದ್ಧಿಯು ಚಿಗುರಿತು. ಕಲ್ಯಾಣದಲ್ಲಿನ ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಮುಂಬಯಿಯಲ್ಲಿ ಗಣಿತ ಮತ್ತು ಸಂಸ್ಕೃತ ಕಲಿತದ್ದಲ್ಲದೆ ಪೂನಾ ನಗರದ ಶಾಲೆಯಲ್ಲಿ ಪ್ರತ್ಯೇಕವಾಗಿ ಇಂಗ್ಲಿಷ್ ಭಾಷೆಯನ್ನೂ ಅಭ್ಯಾಸ ಮಾಡಿದ.

## ಕ್ರಾಂತಿಯ ಕರೆ

ವಾಸುದೇವ ಇನ್ನೂ ೧೫ ವರ್ಷದವನಿರುವಾಗಲೇ ಮದುವೆಯಾಯಿತು. ಮಡದಿ ಮನೆಗೆ ಬಂದ ಮೇಲೆ ನೌಕರಿ ಹುಡುಕುವುದು ಅನಿವಾರ್ಯವಾಯಿತು. ಅಂತೂ ಮುಂಬಯಿಯಲ್ಲಿ ಜಿ.ಐ.ಪಿ.ರೈಲ್ವೆಯ ಆಯವ್ಯಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡ. ನೌಕರಿಗೆ ಸೇರಿಕೊಂಡರೂ ಇನ್ನೊಬ್ಬರ ದರ್ಪಕ್ಕೆ ಸೊಪ್ಪು ಹಾಕಿ ಅವರ ಕಾಲಾಳಾಗಿ ದುಡಿಯುವ ಪ್ರವೃತ್ತಿ ಅವನದಾಗಿರಲಿಲ್ಲ. ಕೇವಲ ನಾಲ್ಕು ತಿಂಗಳೊಳಗೆ ತನ್ನ ಹಿರಿಯ ಅಧಿಕಾರಿಗಳೊಡನೆ ಜಗಳ ಮಾಡಿಕೊಂಡು ಕೆಲಸ ಬಿಡುವ ಪ್ರಸಂಗ ಬಂದಿತು.

ಒಂದು ದಿನ ಹಿರಿಯ ಗುಮಾಸ್ತನು 'ಐದು ರೂಪಾಯಿ ಸಂಬಳ ಪಡೆಯುವ ಯೋಗ್ಯತೆಯೂ ಇವನಿಗಿಲ್ಲ' ಎಂದು ಹೀಯಾಳಿಸಿದನು. ವಾಸುದೇವನಿಗೆ ಮುಳ್ಳು ಚುಚ್ಚಿದಂತಾಯಿತು. ಅಂದಿನಿಂದ ಬೇರೊಂದು ಕೆಲಸಕ್ಕಾಗಿ ಓಡಾಟ ಪ್ರಾರಂಭವಾಯಿತು. ಅಂತೂ ಕಡೆಗೆ ಹೊಸ ನೌಕರಿ ಸಿಕ್ಕುತ್ತಲೇ ತನ್ನ ಮೇಲಧಿಕಾರಿಗೆ "ಎಲ್ಲರೂ ನಿನ್ನಂತೆ ನಾಚಿಕೆಗೆಟ್ಟವರಲ್ಲ. ಇಪ್ಪತ್ತು ರೂಪಾಯಿಯ ನೌಕರಿಯು ಕಾದಿರುವಾಗ ನಿನ್ನ ಐದು ರೂಪಾಯಿ ಚಾಕರಿ



ಯಾರಿಗೆ ಬೇಕು? ನಮಸ್ಕಾರ" ಎಂದು ಮುಖದ ಮೇಲೆ ಹೊಡೆದವನಂತೆ ನುಡಿದು ಅಲ್ಲಿಂದ ಹೊರಬಿದ್ದನು. ಇಂತಹ ಅನೇಕ ಪ್ರಸಂಗಗಳನ್ನು ಮುಂದಿನ ತನ್ನ ಜೀವನದಲ್ಲಿ ವಾಸುದೇವನು ಎದುರಿಸಬೇಕಾಗಿ ಬಂದಿತು. ಕಡೆಗೆ ಪೂನಾದ ಮಿಲಿಟರಿ ಫೈನಾನ್ಸ್ ಕಚೇರಿಯಲ್ಲಿ ಕೆಲಸಕ್ಕೆ ಸೇರಿಕೊಂಡನು. ಪೂನಾದಲ್ಲಿ ವಾಸುದೇವನ ಸಂಸಾರ ಸುಖವಾಗಿ ಸಾಗಿತ್ತು. ಮನಮೆಚ್ಚಿದ ಮಡದಿ ಇದ್ದಳು. ಕಾಲಕ್ರಮೇಣ ಒಬ್ಬ ಮಗಳು ಹುಟ್ಟಿದಳು. ಅವಳಿಗೆ ಮಧು ಎಂದು ಹೆಸರಿಟ್ಟರು. ಕೈತುಂಬಾ ಸಂಬಳ ಬರುತ್ತಿತ್ತು. ಆದರೆ ವಾಸುದೇವನ ಮನಸ್ಸಿಗೆ ಸಂತೋಷವಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯವಿಲ್ಲ, ಅದು ಇಂಗ್ಲಿಷ್‌ರ ಮುಷ್ಟಿಯಲ್ಲಿ! ದೇಶದ ದುರವಸ್ಥೆಯನ್ನು ನೆನೆದು ಆತನಿಗೆ ಅನ್ನ ನೀರು ರುಚಿಸುತ್ತಿರಲಿಲ್ಲ. ಚಿಕ್ಕಂದಿನಿಂದಲೇ ಅಣ್ಣ ಹಾಗೂ ತಂದೆಯಿಂದ ದೇಶಭಕ್ತಿಯ ಕಥೆಗಳನ್ನು ಕೇಳುತ್ತಾ ಬೆಳೆದ ವಾಸುದೇವನಿಗೆ ಹೇಗಾದರೂ ಮಾಡಿ ದೇಶವನ್ನು ದಾಸ್ಯದ ಸಂಕೋಲೆಯಿಂದ ಮುಕ್ತಗೊಳಿಸಬೇಕೆಂಬ ಹಂಬಲವಾಗಿತ್ತು. ಅದೇ ಸಮಯಕ್ಕೆ ಮಮತೆಯ ಮೂರ್ತಿಯಾದ ಆತನ ತಾಯಿ ಕಾಯಿಲೆ ಬಿದ್ದ ಸುದ್ದಿ ವಾಸುದೇವನಿಗೆ ತಲುಪಿತು. ಕೊನೆ ಗಳಿಗೆಯಲ್ಲಿ ತಾಯಿ ತನ್ನನ್ನು ಕಾಣಲು ಹಂಬಲಿಸುತ್ತಿರುವಳೆಂದು ವಾಸುದೇವನಿಗೆ ಕರೆಬಂದಿತು. ಕರುಳಿನ ಕರೆ ಅಂತಃಕರಣವನ್ನು ಕಲಕಿತ್ತು. ತಾಯಿಯನ್ನು ಕಾಣಲು ವಾಸುದೇವ ಚಡಪಡಿಸಿದ. ಆದರೆ ಇಂಗ್ಲೀಷ್ ಅಧಿಕಾರಿಯು ಅಪ್ಪಣೆಯಿಲ್ಲದೆ ಕೆಲಸ ಬಿಟ್ಟು ಹೋಗುವಂತಿರಲಿಲ್ಲ. ನಾಲ್ಕಾರು ದಿನ ರಜೆ ನೀಡಬೇಕೆಂದು ಅಂಗಲಾಚಿ ಕೋರಿದ. ಇವನ ಸುಖ–ದುಃಖ ಕಟ್ಟಿಕೊಂಡು ಆ ವಿದೇಶೀ ಅಧಿಕಾರಿಗಳಿಗಾಗಬೇಕಾದ್ದೇನು? ನಾಲ್ಕಾರು ದಿನ ಕಾಯಿಸಿದರು. ನಂತರ ರಜೆ ಕೊಡಲು ಸಾಧ್ಯವಿಲ್ಲ ಎಂದುಬಿಟ್ಟರು. ವಾಸುದೇವನ ಕೋಪ ನೆತ್ತಿಗೇರಿತು. ಮತ್ತೊಂದು ಅರ್ಜಿ ಸಲ್ಲಿಸಿದ. ಉತ್ತರಕ್ಕಾಗಿ ಕಾಯದೆ ಊರಿಗೆ ಹೊರಟೇಬಿಟ್ಟ. ತಾಯಿಯನ್ನು ಕಾಣಬೇಕೆಂಬ ತವಕದಿಂದ ಹಳ್ಳಕೊಳ್ಳ ಬೆಟ್ಟಗುಡ್ಡಗಳನ್ನು ಒಂದೇ ಸಮನೆ ದಾಟುತ್ತಾ ಶಿರಢೋಣಕ್ಕೆ ಬಂದು ತಲುಪಿದ. ಆದರೆ ಕಾಲ ಮಿಂಚಿಹೋಗಿತ್ತು. ತಾಯಿ ತೀರಿಹೋಗಿದ್ದಳು. ದಹನಕ್ರಿಯೆ ಸಹ ಮುಗಿದುಹೋಗಿತ್ತು. ಇವನಿಗೆ ಕಂಡದ್ದು ತಾಯಿಯನ್ನು ಸುಟ್ಟುಳಿದ ಬೂದಿ ಮಾತ್ರ. ದುಃಖ ಉಮ್ಮಳಿಸಿ ಬಂತು. ತನ್ನ ತಾಯಿಯ ಅಂತಿಮ ದರ್ಶನಕ್ಕೂ

ಅವಕಾಶ ನೀಡದ ಬ್ರಿಟಿಷರ ವಿರುದ್ಧ ಸಿಡಿದೆದ್ದ ವಾಸುದೇವ "ಇವರು ನನ್ನ ತಾಯಿಯನ್ನು ಮಾತ್ರವಲ್ಲ, ಭಾರತ ಮಾತೆಯಿಂದಲೂ ನಮ್ಮನ್ನು ದೂರ ಮಾಡುತ್ತಿದ್ದಾರೆ" ಎಂಬ ಭಾವದಿಂದ ಬ್ರಿಟಿಷರ ವಿರುದ್ಧ ಸಿಂಹದಂತೆ ತಿರುಗಿಬಿದ್ದಿದ್ದ. ಬ್ರಿಟಿಷರ ಅಡಿಯಾಳಾಗಿ ಕೆಲಸ ಮಾಡಲು ಅವನ ಮನಸ್ಸು ಸುತರಾಂ ಒಪ್ಪಲಿಲ್ಲ. ಭಾರತೀಯರ ಈ ಎಲ್ಲಾ ಸಮಸ್ಯೆಗಳಿಗೆ, ಸಂಕಟಗಳಿಗೆ ಮೂಲ ಕಾರಣ ಗುಲಾಮಗಿರಿಯ ಜೊತೆಗೆ ಶಿಕ್ಷಣದ ಕೊರತೆ ಎಂಬುದನ್ನು ಮನಗಂಡು "ಪೂನಾ ನೇಟಿವ್ ಇನ್‌ಸ್ಟಿಟ್ಯೂಷನ್" ಎಂಬ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ. ಇದೇ ಮುಂದೆ "ಮಹಾರಾಷ್ಟ್ರ ಎಜ್ಯುಕೇಶನ್ ಸೊಸೈಟಿ" ಎಂಬ ಹೆಸರಿನಿಂದ ವೈಭವಪೂರಿತವಾದ ರೂಪವನ್ನು ತಾಳಿತು. ಕಾನೂನಿನ ಮೂಲಕ ಬ್ರಿಟಿಷರನ್ನು ತೊಲಗಿಸುವುದು ಕಷ್ಟಸಾಧ್ಯವೆಂದರಿತ ವಾಸುದೇವನು, ಸಶಸ್ತ್ರ ಕ್ರಾಂತಿಯೇ ಇದಕ್ಕಿರುವ ಏಕೈಕ ಮಾರ್ಗವೆಂದು ಭಾವಿಸಿದ. ಬಡವರೂ ಅನಕ್ಷರಸ್ಥರೂ ಆದ ರಾಮೋಶಿ ಎಂಬ ಗುಡ್ಡಗಾಡು ಜನರನ್ನು ಸಂಘಟಿಸಿ ಹೋರಾಟಕ್ಕೆ ಸನ್ನದ್ಧನಾದ. ಸಿಕ್ಕಸಿಕ್ಕಲ್ಲಿ ಬ್ರಿಟಿಷರಿಗೆ ಹಾಗೂ ಬ್ರಿಟಿಷ್ ಸೈನ್ಯಕ್ಕೆ ಮಾರಣಾಂತಿಕ ಹೊಡೆತ ನೀಡುತ್ತಾ ಬಂದಿದ್ದ. ವಾಸುದೇವನ ಬಂಡಾಯದಿಂದ ಬ್ರಿಟಿಷ್ ಸರ್ಕಾರ ಅಕ್ಷರಶಃ ನಲುಗಿ ಹೋಗಿತ್ತು. ಸರ್ಕಾರವು ಆತನ ಬಂಧನಕ್ಕೆ ಮುಂದಾಯಿತು. ಆದರೆ ಆತ ಬ್ರಿಟಿಷ್‌ರಿಂದ ತಪ್ಪಿಸಿಕೊಂಡು ತನ್ನ ಕ್ರಾಂತಿಕಾರಿ ಚಟುವಟಿಕೆಗಳನ್ನು ವಿಜೃಂಭಣೆಯಿಂದ ಮಾಡುತ್ತಿದ್ದ. ಸರ್ಕಾರ ಆತನನ್ನು ಹಿಡಿದು ಒಪ್ಪಿಸಿದವರಿಗೆ ನಾಲ್ಕು ಸಾವಿರ ರೂಪಾಯಿಗಳ ಬಹುಮಾನವನ್ನು ಘೋಷಿಸಿತ್ತು. ಆದರೆ ಈ ವಾಸುದೇವನು ತುಂಬಾನೇ ಬುದ್ಧಿವಂತನಾಗಿದ್ದ. ನೀನು ಚಾಪೆಯ ಕೆಳಗೆ ತೂರಿದರೆ ನಾನು ರಂಗೋಲಿಯ ಕೆಳಗೆ ತೂರುತ್ತೇನೆಂಬ ಮಾತಿನಂತೆ, ತನ್ನ ಬಂಧನಕ್ಕೆ ಬೆಲೆ ಕಟ್ಟಿದ ಬ್ರಿಟಿಷರಿಗೆನೇ ಬೆಲೆ ಕಟ್ಟಿದ್ದ. ಬ್ರಿಟಿಷರು ತನ್ನ ಬಂಧನಕ್ಕೆ ಘೋಷಿಸಿದ್ದ ಬೆಲೆಗಿಂತ ಹೆಚ್ಚಿನ ಬೆಲೆ ಘೋಷಣೆ ಮಾಡಿ ಗವರ್ನರ್ ಹಾಗೂ ಜಿಲ್ಲಾಧಿಕಾರಿಗಳನ್ನು ಕೊಂದು ಹಾಕುವಂತೆ ಘೋಷಿಸಿದ. ವಾಸುದೇವ ಬಲವಂತ ಫಡಕೆ ಎಂಬ ಯುವಕನ ಹೆಸರು ಸೂರ್ಯ ಮುಳುಗದ ಸಾಮ್ರಾಜ್ಯದ ಮೂಲೆ ಮೂಲೆಗೂ ಹರಡಿತ್ತು. ಹಲವಾರು ವರ್ತಮಾನ ಪತ್ರಿಕೆಗಳಲ್ಲಿ ಯುವ ಕ್ರಾಂತಿಕಾರಿಯ ಕಥೆ ಪ್ರಕಟವಾಗಿತ್ತು. ಆಗಿನ ಅಮೃತ್ ಬಜಾರ್ ಪತ್ರಿಕೆಯು ವಾಸುದೇವನನ್ನು "ಹಿಮಾಲಯದ ಉತ್ತುಂಗ ಪುರುಳ" ಎಂದು



ಹಾಡಿ ಹೊಗಳಿ ಬರೆದಿತ್ತು. ಇಂಗ್ಲೆಂಡಿನಲ್ಲಿ ಬಹು ಪ್ರಸಿದ್ಧವಾದ ವೃತ್ತಪತ್ರಿಕೆ ಲಂಡನ್ ಟೈಮ್ಸ್ ನಲ್ಲೂ ಫಡಕೆಯ ಪ್ರತಾಪದ ವರ್ಣನೆ ಯಾಯಿತು. ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಕೂಡ ಈತನ ಚಟುವಟಿಕೆಗಳ ಬಗ್ಗೆ ತೀವ್ರ ಚರ್ಚೆಗಳಾಗಿ, ಹೇಗಾದರೂ ಮಾಡಿ ಈತನನ್ನು ಸೆರೆ ಹಿಡಿದು ಶಿಕ್ಷಿಸಲೇಬೇಕೆಂದು ಬ್ರಿಟಿಷ್ ಸರ್ಕಾರದ ರಾಜಾಜ್ಞೆಯಾಯಿತು. ಅತ್ಯಂತ ಶ್ರೇಷ್ಠ ಹಾಗೂ ಶಕ್ತಿಶಾಲಿಯಾದ ೧೮೦೦ ಸೈನಿಕರ ತಂಡವನ್ನು ಕಟ್ಟಿಕೊಂಡು ಬ್ರಿಟಿಷ್ ಅಧಿಕಾರಿ ಮೇಜರ್ ಡೇನಯಲ್ ಎಂಬಾತನ ನೇತೃತ್ವದಲ್ಲಿ ವಾಸುದೇವನ ಬೇಟೆಗೆ ಸಂಚು ರೂಪಿಸಲಾಯಿತು. ದೊಡ್ಡದಾದ ಸೈನ್ಯವನ್ನು ತೆಗೆದುಕೊಂಡು ಇಂಗ್ಲಿಷ್ ಸೇನಾಪತಿ ಮೇಜರ್ ಡೇನಿಯಲ್ ವಾಸುದೇವನ ಬೆನ್ನುಹತ್ತಿದ. ಇದರ ಸುಳಿವನ್ನರಿತ ವಾಸುದೇವನು ಬ್ರಿಟಿಷರ ಕಣ್ಣುತಪ್ಪಿಸಿ ಹೈದರಾಬಾದ್ ನಿಜಾಮನ ರಾಜ್ಯ ಸೇರಿಕೊಂಡು ಶ್ರೀಶೈಲಕ್ಕೆ ಬರುತ್ತಾನೆ. ವಾಸುದೇವನಿಗೆ ತಾನು ಮಾಡುತ್ತಿರುವ ಹೋರಾಟದಿಂದ ಮನಸ್ಸಿಗೆ ತೃಪ್ತಿ ಇದ್ದರೂ, ಸಿಕ್ಕಿದ ಯಶಸ್ಸಿನ ಬಗ್ಗೆ ಸಮಾಧಾನ ಇರಲಿಲ್ಲ. ಒಂದು ಕಡೆ ಬ್ರಿಟಿಷ್ ಪಡೆಗಳು ಬಹುದೊಡ್ಡ ಪ್ರಮಾಣದಲ್ಲಿ ಕಾರ್ಯರಂಗಕ್ಕೆ ಇಳಿದಿದ್ದರೆ, ಇನ್ನೊಂದು ಕಡೆ ಫಡಕೆಯನ್ನು ಪೂರ್ತಿ ನಂಬಿದ್ದ ರಾಮೋಶಿಗಳಲ್ಲಿ ಕೆಲವರು ದ್ರೋಹ ಮಾಡಲಾರಂಭಿಸಿದರು. ಇದರಿಂದ ಮನನೊಂದ ವಾಸುದೇವನು ಶ್ರೀಶೈಲ ಮಲ್ಲಿಕಾರ್ಜುನನ ಸಾನಿಧ್ಯದಲ್ಲಿ ಆತ್ಮಸಮರ್ಪಣೆಯ ಯೋಚನೆ ಮಾಡಿದನು. ಈ ದುಃಖವನ್ನೆಲ್ಲ ತನ್ನ ಆಪ್ತ ಸಹಾಯಕನಾದ ದೌಲತ್‌ರಾವ್ ನಾಯಕನ ಬಳಿ ಹೇಳಿಕೊಳ್ಳುತ್ತಾನೆ. ದೌಲತ್ ರಾವ್ ನಾಯಕ ಮತ್ತು ವಾಸುದೇವರದು ರಾಮ– ಆಂಜನೇಯರ ಸಂಬಂಧವಾಗಿತ್ತು. ತಾವು ಹೀಗೆ ಮಾಡುವುದು ಸರಿಯಲ್ಲ ಎಂದು ದೌವಲತ್ ರಾವ್ ತುಂಬಿದ ಧೈರ್ಯದಿಂದ, ವಾಸುದೇವನು ಆತ್ಮಾರ್ಪಣೆಯ ಆ ಗುಂಗಿನಿಂದ ಹೊರಬಂದ. ಮತ್ತೆ ತನ್ನ ಹೋರಾಟವನ್ನು ಮುಂದುವರೆಸಿದ.

### ಕರ್ನಾಟಕ ಪ್ರದೇಶಕ್ಕೆ ಪ್ರವೇಶ

ಮೇ ತಿಂಗಳ ಎರಡನೇ ವಾರದಲ್ಲಿ ಶ್ರೀಶೈಲವನ್ನು ತೊರೆದು ಪ್ರಯಾಣ ಮುಂದುವರಿಸಲು ನಿಶ್ಚಯಿಸಿ ವೇಳೆ ಬದಲಾಯಿಸಿ ಸಂನ್ಯಾಸಿಯಂತೆ ಕಾವಿ ಬಟ್ಟೆ ಧರಿಸಿದ. ಉದ್ದನೆಯ ಗಡ್ಡ, ಕುತ್ತಿಗೆ ತೋಳುಗಳಿಗೆ ರುದ್ರಾಕ್ಷಿಮಾಲೆ,

ಮೈತುಂಬಾ ವಿಭೂತಿ, ಕಿವಿಯಲ್ಲಿ ಕರ್ಣ ಕುಂಡಲಗಳ ವೇಷ ಧರಿಸಿ ತನ್ನ ಪ್ರಯಾಣ ಪ್ರಾರಂಭಿಸಿದ. ವಾಸುದೇವನು ದೈವಭಕ್ತನೂ ಆಗಿದ್ದರಿಂದ, ಈಗ ಅವನಿಗೆ ನೆನಪಾಗಿದ್ದು ಗಾಣಗಾಪುರ ಕ್ಷೇತ್ರದ ದೈವೀಪುರುಷ ಶ್ರೀ ದತ್ತಾತ್ರೇಯ. ಹೀಗೆ, ಆಂಧ್ರಪ್ರದೇಶದ ಕರ್ನೂಲ್ ಮೂಲಕ ಕರ್ನಾಟಕ ಪ್ರವೇಶಿಸಿದನು. ಅಂದುಕೊಂಡಂತೆ ೧೮೭೯ರ ಜೂನ್ ಮೊದಲ ವಾರದಲ್ಲಿ ಕಲಬುರ್ಗಿ ಜಿಲ್ಲೆಯ ಗಾಣಗಾಪುರಕ್ಕೆ ಬಂದು ತಲುಪಿದ. ಭೀಮಾ ನದಿಯ ದಡದಲ್ಲಿರುವ ಗಾಣಗಾಪುರ ದತ್ತಾತ್ರೇಯನ ಸುಪ್ರಸಿದ್ಧ ಪುಣ್ಯಕ್ಷೇತ್ರ. ದೇವಸ್ಥಾನದ ಒಂದು ಮೂಲೆಯಲ್ಲಿದ್ದ ಕಟ್ಟೆಯ ಮೇಲೆ ತನ್ನ ಚಿಕ್ಕ ಹಾಸಿಗೆಯ ಗಂಟನ್ನು ಇಟ್ಟು ಕುಳಿತುಕೊಂಡ. ಗಾಣಗಾಪುರದಲ್ಲಿ ರಂಗೋಪಂತ್ ಮೋರೇಶ್ವರ್ ಮಹಾಜನ್ ಮತ್ತು ಕೃಷ್ಣಾಜಿ ಪಂತ್ ಎನ್ನುವವರ ಪರಿಚಯವಾಗಿ, ಆ ಪರಿಚಯ ಸ್ನೇಹವಾಗಿ ಬೆಳೆದು ಅವರಿಬ್ಬರೂ ಶ್ರದ್ಧೆಯಿಂದ ಫಡಕೆಯ ಸೇವೆ ಮಾಡಲು ಪ್ರಾರಂಭಿಸಿದರು. ಅಷ್ಟೇ ಅಲ್ಲದೆ, ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆಲ್ಲ ವಾಸುದೇವ ಒಬ್ಬ ಪೂಜನೀಯ ವ್ಯಕ್ತಿಯಾದ. ಜನರು ಅವನ ಕಾಲಿಗೆರಗಿ ಆಶೀರ್ವಾದ ಪಡೆದು ಅವನಿಗೆ ಹಣ್ಣುಹಂಪಲ ಕೊಟ್ಟು ಹೋಗುತ್ತಿದ್ದರು. ಅಷ್ಟರಲ್ಲಿ ಅನಿರೀಕ್ಷಿತವಾದ ಕಡೆಯಿಂದ ಡೇನಿಯಲ್‌ಗೆ ಒಂದು ಸುಳಿವು ಸಿಕ್ಕಿತು. ಪುಣೆ ಶಹರಿನಲ್ಲಿ ಒಂದು ಹರಿಕಥೆ ನಡೆದಿತ್ತು. ಒಂದು ಕಡೆ ದಾಸರಿಂದ ಕಥನ ಸಾಗಿತ್ತು. ಇನ್ನೊಂದು ಕಡೆ ಸ್ತ್ರೀಯರ ಒಂದು ಗುಂಪು ಕಾಡು ಹರಟೆಯಲ್ಲಿ ಮಗ್ನವಾಗಿತ್ತು. ಅವರಲ್ಲಿ ಒಬ್ಬಾಕೆ ತನ್ನ ಗೆಳತಿಯರಿಗೆ ಒಂದು ಸುದ್ದಿ ಬಿತ್ತರಿಸಿದಳು. ತಾನು ಗಾಣಗಾಪುರಕ್ಕೆ ಯಾತ್ರಾರ್ಥಿಯಾಗಿ ಹೋಗಿದ್ದಾಗ, ಅಲ್ಲಿ ಫಡಕೆ ತನಗೆ ಕಂಡಿರುವುದಾಗಿ ಹೇಳಿದಳು. ಆ ಗುಂಪಿನಲ್ಲಿ ಕುಳಿತು ಮೈಯೆಲ್ಲ ಕಿವಿ ಮಾಡಿಕೊಂಡು ಮಾತುಗಳನ್ನು ಕೇಳುತ್ತಿದ್ದ ಒಬ್ಬ ಗೃಹಿಣಿ ಪಟ್ಟನೆ ಅಲ್ಲಿಂದೆದ್ದು ಸರಸರನೆ ನಡೆಯುತ್ತಾ ದೇವಸ್ಥಾನದಿಂದ ಹೊರಬಂದಳು. ಆಕೆ ಯಾರೂ ಆಗಿರದೇ ಪೊಲೀಸ್ ಜಮಾದಾರನೊಬ್ಬನ ಹೆಂಡತಿಯಾಗಿದ್ದಳು. ಫಡಕೆಯ ಸುಳಿವು ನೀಡಿದವರಿಗೆ ನಾಲ್ಕಾರು ಸಾವಿರ ರೂಪಾಯಿ ಬಹುಮಾನ ಇಡುವ ವಿಷಯ ಅವಳಿಗೆ ತಿಳಿದಿತ್ತು. ಈ ಹಣದ ಆಸೆಗೆ ಬಿದ್ದ ಮಹಿಳೆ ತನ್ನ ಗಂಡನ ಕಿವಿಗೆ ಉಸುರಿಯೇಬಿಟ್ಟಳು. ಮರು ನಿಮಿಷದಲ್ಲೇ ಆ ಪೊಲೀಸ್ ಜಮಾದಾರ ಮೇಜರ್ ಡೇನಿಯಲ್‌ಗೆ ಸುದ್ದಿ ಮುಟ್ಟಿಸಿಯೇ ಬಿಟ್ಟನು. ನೂರಾರು ಮೈಲಿ ದೂರದಲ್ಲಿ



ನಿಜಾಮನ ರಾಜ್ಯದಲ್ಲಿ ಒಬ್ಬಂಟಿಗನಾಗಿ ವಾಸುದೇವನಿರುವ ಸಂಗತಿ ತಿಳಿಯುತ್ತಲೇ ಆ ಮೇಜರನು ಸೈನ್ಯ ಕಲೆಹಾಕಿಕೊಂಡು ಗುಟ್ಟಾಗಿ ಹೊರಟನು. ಡೇನಯಲ್‌ಗೆ ಒಂದೇ ತವಕ. ಕೂಡಲೇ ಮುಂದಿನ ಹೆಜ್ಜೆಗಳ ಬಗ್ಗೆ ತನ್ನ ಸೈನಿಕರಿಗೆ ಸೂಚನೆ. ಅದರಂತೆ, ಅವರು ಗಾಣಗಾಪುರಕ್ಕೆ ಬಂದು ಫಡಕೆಯ ಚಲನವಲನಗಳ ಮೇಲೆ ಕಣ್ಣಿಟ್ಟರು. ಒಬ್ಬ ಮಹಿಳೆ ಮೂಲಕ ಬ್ರಿಟಿಷರು ತನ್ನನ್ನು ಹಿಂಬಾಲಿಸಲಾರಂಭಿಸಿದ ಸಂಗತಿ ವಾಸುದೇವನ ಗಮನಕ್ಕೂ ಬಂತು. ಇನ್ನು ಗಾಣಗಾಪುರದಲ್ಲಿ ಹೆಚ್ಚುಕಾಲ ಇರುವುದು ಅಪಾಯಕಾರಿ ಎಂಬುದು ಫಡಕೆಗೆ ಮನದಟ್ಟಾಯಿತು. ಮನಸ್ಸಿನಲ್ಲಿ ಮುಂದಿನ ಹೆಜ್ಜೆಯ ಬಗ್ಗೆ ಯೋಚನೆ ಆರಂಭವಾಯಿತು. ತಾನು ಅಲ್ಲಿಂದ ಪಂಢರಾಪುರದ ಕಡೆಗೆ ಹೋಗಬೇಕೆಂದು ನಿಶ್ಚಯಿಸಿದ. ಗೋಪಾಲ್ ಮೋರೇಶ್ವರ್ ಎಂಬ ಸ್ನೇಹಿತನನ್ನು ಜೊತೆ ಮಾಡಿಕೊಂಡು ಗಾಣಗಾಪುರದ ಸಂಗಮದ ಬಳಿ ಬಂದನು. ಧಾರಾಕಾರವಾಗಿ ಮಳೆ ಸುರಿಯುತ್ತಿರುವ ಕಾರಣ ಭೀಮಾ ನದಿ ತುಂಬಿ ಹರಿಯುತ್ತಿತ್ತು. ಹೇಗಾದರೂ ಮಾಡಿ ನದಿ ದಾಟಬೇಕಾಗಿತ್ತು. ಮೈಯಲ್ಲಿ ತೀವ್ರ ಜ್ವರದ ತಾಪ. ಭಯಂಕರ ಬಿರುಗಾಳಿಯ ಮಧ್ಯ ಒಂದು ಕಡೆ ಮೇಲೆ ಧೋ ಎಂದು ಮಳೆ ಸುರಿಯುತ್ತಿದ್ದರೆ, ಕೆಳಗೆ ಭೀಮೆ ಉಕ್ಕಿ ಹರಿಯುತ್ತಿದ್ದಳು. ಆ ಭಯಂಕರ ಪ್ರವಾಹದಲ್ಲಿ ಅಪ್ಪಳಿಸುತ್ತಿದ್ದ ಮಳೆಯ ಹೊಡೆತವನ್ನು ಎದುರಿಸಿ ದೋಣಿಗೆ ಹುಟ್ಟು ಹಾಕಬಲ್ಲ ಒಬ್ಬ ಗಂಡೆದೆಯ ಅಂಬಿಗ ಬೇಕಾಗಿತ್ತು. ಸುತ್ತಮುತ್ತ ನೋಡಲಾಗಿ ಮೀರಸಾಬ್ ಎಂಬ ಒಬ್ಬ ವಯಸ್ಸಾದ ಅಂಬಿಗ ಕಣ್ಣಿಗೆ ಬಿದ್ದ. ನಮ್ಮಿಬ್ಬರನ್ನೂ ನದಿ ದಾಟಿಸಬೇಕೆಂದು ಕೇಳಿದಾಗ, "ಈ ಮಳೆಯಲ್ಲಿ, ಈ ಪ್ರವಾಹದಲ್ಲಿ ಅದು ಸಾಧ್ಯವಾಗದು, ಮಾಫ್ ಕರ್ನಾ"ಎಂದು ಮೀರ್ ಸಾಬ್ ಅಂದ. ನಾವು ಹೋಗಲೇಬೇಕಾಗಿದೆ ದಯವಿಟ್ಟು ಇಲ್ಲ ಅನ್ನಬೇಡ ಎಂದು ಅವನ ಮನವೊಲಿಸಿ ಹೇಗೋ ದಡ ಸೇರಿದರು. ಇತ್ತ ಇವರಿಬ್ಬರೂ ಆ ಮಳೆಯಲ್ಲಿಯೇ ನದಿಯಿಂದ ದೂರ ದೂರ ಹೋಗಲಾರಂಭಿಸಿದರು. ಅಂದು ಜುಲೈ ೧೭, ಭೀಮಾ ನದಿಯನ್ನು ದಾಟಿದ ಫಡಕೆ, ತನ್ನ ಸಂಗಾತಿ ಗೋಪಾಲ್ ಮೋರೇಶ್ವರನೊಡನೆ ಇಡೀ ೧೮ನೆಯ ತಾರೀಖಿನ ದಿನವನ್ನು ಭೀಮಾನದಿಯ ದಂಡೆಯ ಮೇಲೆ ಇದ್ದ ಇಟಗಿ ಎಂಬ ಗ್ರಾಮದ ಪಾಳು ಮನೆಯಲ್ಲಿ ಕಳೆದ. ಹಿಂದಿನ ದಿನ ಮಳೆಯಲ್ಲಿ ನೆನೆದು ಬಹುದೂರ ನಡೆದುಕೊಂಡು ಬಂದಿದ್ದರಿಂದ ಅವನಿಗೆ

ತುಂಬಾ ಬಳಲಿಕೆ ಉಂಟುಮಾಡಿತ್ತು. ಮೈಯಲ್ಲಿ ಜ್ವರದ ತಾಪ ಹೆಚ್ಚಿತ್ತು. ಜೊತೆಗೆ ಮೈ ನಡುಗಿಸುತ್ತಿದ್ದ ಚಳಿ. ಆದರೆ ಎಲ್ಲೂ ಹೆಚ್ಚು ಕಾಲ ತಂಗುವಂತಿರಲಿಲ್ಲ.ಯಾವ ಕ್ಷಣದಲ್ಲಾದರೂ ಶತ್ರುಗಳು ಬರಬಹುದೆಂಬ ಆತಂಕದಿಂದ ಅಲ್ಲಿಂದ ಹೊರಟು ಅಂಕಲಗಿ, ಹುಲ್ಲೂರು ಎಂಬ ಗ್ರಾಮಗಳ ಮೂಲಕ ಬಗಲೂರು ಎಂಬ ಸ್ಥಳಕ್ಕೆ ಬಂದ. ಅಲ್ಲಿ ಆ ಊರಿನ ಕುಲಕರ್ಣಿ ಇವರಿಬ್ಬರಿಗೂ ಊಟದ ವ್ಯವಸ್ಥೆ ಮಾಡಿದ. ಅಂದು ರಾತ್ರಿ ಬಗಲೂರಿನ ಒಂದು ದೇವಾಲಯದಲ್ಲಿ ಕಳೆದರು. ೧೯ನೆಯ ತಾರೀಖು ಬೆಳಗ್ಗೆ ಮತ್ತೆ ಪ್ರಯಾಣ ಪ್ರಾರಂಭ. ನಾರಾಯಣಪುರ ಎಂಬ ಊರಲ್ಲಿ ಮಧ್ಯಾಹ್ನದ ಭೋಜನ ಮುಗಿಸಿ ಸಂಜೆಯ ವೇಳೆಗೆ ಶಿರಸಗಿ ಎಂಬ ಹಳ್ಳಿಗೆ ಬಂದರು. ಅಂದಿನ ರಾತ್ರಿ ಅಲ್ಲಿಯೇ ತಂಗಿ ಮರುದಿನ ಮಧ್ಯಾಹ್ನ ಅಲ್ಲಿಂದ ತೆರಳಿದರು. ಮುಂದೆ ಜುಲೈ ೨೦ರ ಸೂರ್ಯಾಸ್ತದ ವೇಳೆಗೆ ದೇವರ ನಾವದಗಿ ಎಂಬ ಚಿಕ್ಕ ಹಳ್ಳಿಯನ್ನು ತಲುಪಿದನು. ದೇವರ ನಾವದಗಿ ಇರುವುದು ನೈಜಾಮ್ ಪ್ರದೇಶದಿಂದ ಆರು ಮೈಲು ದೂರದಲ್ಲಿ ಬಿಜಾಪುರ ಜಿಲ್ಲೆಯಲ್ಲಿ. ಫಡಕೆ ದೇವರ ನಾವದಗಿಯನ್ನು ಪ್ರವೇಶಿಸುವ ವೇಳೆಗೆ ಕತ್ತಲಾಗಿತ್ತು. ಜ್ವರದ ತಾಪದಿಂದ ದೇಹ ಬಳಲಿ ಬೆಂಡಾಗಿತ್ತು. ಮೂವತ್ತು ಮೈಲುಗಳಷ್ಟು ನಡೆದು ಬಂದಿದ್ದ ಆ ಆಜಾನುಬಾಹು ಶರೀರ ವಿಶ್ರಾಂತಿ ಬಯಸಿತ್ತು. ಆ ಊರಿನಲ್ಲಿ ಪ್ರಯಾಣಿಕರು ತಂಗಲು ಇದ್ದ ಸ್ಥಳಗಳು ಎರಡು; ಅವುಗಳ ಪೈಕಿ ಹೊರವಲಯದಲ್ಲಿ ಸ್ವಲ್ಪ ವಿಶಾಲವಾಗಿದ್ದ, ಬೃಹದಾಕಾರದ ಬಂಡೆಗಳಲ್ಲಿ ಕೊರೆಯಲಾಗಿದ್ದ ಪ್ರಾಚೀನ ಸ್ವಯಂಭು ಶ್ರೀ ಮಲ್ಲಿಕಾರ್ಜುನ ದೇವಾಲಯ. ದೇವರ ನಾವದಗಿಯ ಮಲ್ಲಿಕಾರ್ಜುನ ದೇವಾಲಯದ ಒಳಗೆ ಹೋಗಿ ಒಂದು ಜಗುಲಿಯ ಮೇಲೆ ಇಬ್ಬರೂ ಕುಳಿತರು. ಮೈಮೇಲಿನ ಬಟ್ಟೆಗಳೆಲ್ಲಾ ನೆಂದು ಹೋಗಿದ್ದವು. ಆ ಬಟ್ಟೆಗಳನ್ನು ಕಳಚಿ ಮೈ ಒರೆಸಿಕೊಂಡರು.

ಫಡಕೆಗೆ ಒಂದೇ ಚಿಂತೆ. ಮುಂದೇನು? ಅದನ್ನೇ ತನ್ನ ಸಂಗಾತಿ ಗೋಪಾಲ ಮೋರೇಶ್ವರನಿಗೆ ಹೇಳಿದ. ತಾನು ಪಂಢರಾಪುರದಿಂದ ಹಣವನ್ನು ತಂದು ರೋಹಿಲರ ಪಡೆಯೊಂದಿಗೆ ಹೋರಾಟ ಆರಂಭಿಸಿ ಬ್ರಿಟಿಷ್ ಕಚೇರಿಗಳ ಮೇಲೆ ಆಕ್ರಮಣ ಮಾಡುವ ತನ್ನ ಯೋಚನೆಯನ್ನು ವಿವರಿಸುತ್ತಾ ಬೇರೆ



ಬಟ್ಟೆಗಳನ್ನು ಧರಿಸಿದ. ಒಂದು ಸುರವಾರ್ ಹಾಕಿಕೊಂಡಿದ್ದ. ತಲೆಗೆ ಒಂದು ಬಿಳಿ ಬಟ್ಟೆಯನ್ನು ಮುಚ್ಚುವಂತೆ ಬಿಗಿಯಾಗಿ ಸುತ್ತಿಕೊಂಡ. ತನ್ನ ಹತ್ತಿರ ಇದ್ದ ಹಣವನ್ನೆಲ್ಲ ಎಣಿಸಿ, ತನ್ನ ಆತ್ಮಕಥೆ, ದಿನಚರಿ ಮತ್ತು ಇತರ ಕಾಗದಪತ್ರಗಳನ್ನು ಒಂದು ಬಟ್ಟೆಯಲ್ಲಿ ಸುತ್ತಿದ. ಇವನ್ನೆಲ್ಲ ತನ್ನ ಕೈಚೀಲದಲ್ಲಿ ಇನ್ನುಳಿದ ಬಟ್ಟೆಗಳೊಂದಿಗೆ ಭದ್ರಪಡಿಸಿ ತಲೆದಿಂಬಾಗಿ ಇಟ್ಟುಕೊಂಡ. ತನ್ನ ಉದ್ದವಾದ ಖಡ್ಗವನ್ನು ಬಲಬದಿಯಲ್ಲಿ ಮತ್ತು ಚೂರಿ, ರಿವಾಲ್ವರ್‌ಗಳನ್ನು ತಲೆದಿಂಬಿನ ಪಕ್ಕದಲ್ಲಿ ಇರಿಸಿದ. ಅಂದು ವಿಶ್ರಾಂತಿ ಇಲ್ಲದೆ ಒಂದೇ ಸಮನೆ ನಡೆದೂ ನಡೆದೂ ತುಂಬಾ ಬಳಲಿ ಹೋಗಿದ್ದುದರಿಂದ ದೇಹ ನೆಲಕ್ಕೆ ಒರಗುತ್ತಿದ್ದಂತೆ ಕ್ಷಣಾರ್ಧದಲ್ಲಿ ನಿದ್ರೆ ಹತ್ತಿತು. ಮೈಮರೆಯುವಂತೆ ಅವನನ್ನು ನಿದ್ರೆ ಆವರಿಸಿತು. ಇವನನ್ನು ಹಿಡಿಯದ ಹೊರತು ಇಂಗ್ಲಿಷರಿಗೆ ನಿದ್ರೆ ಬರುವಂತಿರಲಿಲ್ಲ. ಸಾವಿರದ ಎಂಟುನೂರು ಪಳಗಿದ ಸೈನಿಕರನ್ನು ಕಟ್ಟಿಕೊಂಡು ಡೇನಿಯಲ್ ಈತನ ಬೆನ್ನು ಹತ್ತಿದನು. ಅದಕ್ಕಿಂತ ಹೆಚ್ಚಾಗಿ ದುರ್ದೈವ ಆತನ ಬೆನ್ನು ಹತ್ತಿದ್ದಿತ್ತು. ನೂರಾರು ಮೈಲಿ ದೂರದಲ್ಲಿ ನೈಜಾಮನ ರಾಜ್ಯದಲ್ಲಿ ಒಬ್ಬಂಟಿಗನಾಗಿ ವಾಸುದೇವನಿರುವ ಸಂಗತಿ ತಿಳಿಯುತ್ತಲೇ ಆ ಮೇಜರನು ಸೈನ್ಯ ಕಲೆಹಾಕಿಕೊಂಡು ಗುಟ್ಟಾಗಿ ಹೊರಟನು. ಒಂದೇ ಸಮನೆ ಪ್ರಯಾಣ ಮಾಡುತ್ತಾ ೧೮೭೯ರ ಜುಲೈ ೧೬ರಂದು ಭಾಗಾನಗರವನ್ನು ಸೇರಿದನು. ನೈಜಾಮನ ರಾಜ್ಯದಲ್ಲಿದ್ದ ಇಂಗ್ಲಿಷ್ ರಾಜಪ್ರತಿನಿಧಿ ಹೆಸರು ರಿಚರ್ಡ್ ಮೀಡ್. ಹಿಂದೆ ತಾತ್ಯಾಟೋಪಿಯನ್ನು ಹಿಡಿದು ಗಲ್ಲಿಗೇರಿಸಿದ ಅಧಿಕಾರಿ ಆತ. ಇಬ್ಬರೂ ವಾಸುದೇವನನ್ನು ಹೇಗೆ ಹಿಡಿಯುವುದೆಂದು ಮಸಲತ್ತು ಮಾಡಿದರು. ಅದರಂತೆ, ನೈಜಾಮನ ಪೊಲೀಸರ ತಂಡದೊಡನೆ ಗಾಣಗಾಪುರದ ಸಂಗಮದ ಬಳಿ ನದಿಯನ್ನು ದಾಟಿದ ಮೇಲೆ ಹೊಸ ಹುಮ್ಮಸ್ಸಿನಿಂದ ಮುಂದುವರೆಯಿತು. ಅದು ಇಟಗಿ ಎಂಬ ಗ್ರಾಮವನ್ನು ತಲುಪಿ ಫಡಕೆ ವಿಶ್ರಮಿಸಿದ ಪಾಳುಮನೆಯ ಬಳಿ ಬಂದು ಅಲ್ಲಿದ್ದವರೊಂದಿಗೆ ವಿಚಾರಣೆ ಮಾಡಿ ಮುಂದುವರೆಯಿತು. ಅಲ್ಲಿಂದ ಫಡಕೆ ಹಾದುಹೋದ ಪ್ರತಿಯೊಂದು ಗ್ರಾಮವನ್ನು ದಾಟುತ್ತಾ ಸಿರಸಗಿ ಎಂಬ ಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಹೊಲ ಒಂದರಲ್ಲಿ ಆಟವಾಡುತ್ತಿದ್ದ ಇಬ್ಬರು ಹುಡುಗರು ಫಡಕೆ ಮತ್ತು ಅವನ ಸಂಗಾತಿ ಅತ್ತ ಹಾದು ಹೋದದ್ದನ್ನು ಡೇನಿಯಲ್‌ಗೆ ತಿಳಿಸಿದರು. ಅಲ್ಲಲ್ಲಿ ಕೇವಲ ವಿಚಾರಣೆಗಾಗಿ ಮಾತ್ರ ಕುದುರೆಗಳನ್ನು ನಿಲ್ಲಿಸುತ್ತಾ ಕೊನೆಗೆ

ದೇವರ ನಾವದಗಿ ಗ್ರಾಮವನ್ನು ಪ್ರವೇಶಿಸುತ್ತಾರೆ. ದೇವರ ನಾವದಗಿ ಇರುವುದು ನೈಜಾಮ್ ಪ್ರದೇಶದಿಂದ ಆರು ಮೈಲು ದೂರದಲ್ಲಿ ಬಿಜಾಪುರ ಜಿಲ್ಲೆಯಲ್ಲಿ. ದೇವರ ನಾವದಗಿಯ ಹೊರವಲಯದಲ್ಲಿದ್ದ ಊರಿನ ಚಾವಡಿಯಲ್ಲಿ ಮಲಗಿದ್ದ ಸಿಪಾಯಿಯನ್ನು ಎಬ್ಬಿಸಿದರು. ಅವನು ಗಾಬರಿಯಿಂದ ಎದ್ದು ಕುಳಿತ. ಅವನಿಂದ ಡೇನಿಯಲ್ಗೆ ಫಡಕೆ ಶ್ರೀ ಮಲ್ಲಿಕಾರ್ಜುನ ದೇವಾಲಯದ ಕಡೆ ಹೋಗಿರುವುದು ತಿಳಿಯಿತು. ತನ್ನ ಸೈನಿಕರಿಗೆ ಕುದುರೆಗಳನ್ನು ಅಲ್ಲಿಯೇ ಮರಗಳಿಗೆ ಕಟ್ಟಿ ಹಾಕುವಂತೆ ಡೇನಯಲ್ ಸೂಚಿಸಿದ. ತಾನು, ಅಬ್ದುಲ್ ಹಕ್ ಮತ್ತು ಸ್ಟೀಫನ್ಸನ್ ಮೊದಲು ಹೋಗುವುದಾಗಿಯೂ ಮಿಕ್ಕವರೆಲ್ಲ ನಿಶಬ್ದವಾಗಿ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸುತ್ತಲೂ ಆಯಕಟ್ಟಿನ ಪ್ರದೇಶದಲ್ಲಿ ಕಾಯುತ್ತಿರಬೇಕೆಂದೂ, ಅಕಸ್ಮಾತ್ ಫಡಕೆ ತಪ್ಪಿಸಿಕೊಂಡು ಹೋಗಲು ಹೊರಬಂದರೆ ಬೆನ್ನಟ್ಟಿ ಹಿಡಿಯಬೇಕು ಅಥವಾ ಗುಂಡಿಟ್ಟು ಕೊಲ್ಲಬೇಕು ಎಂದು ಅವರಿಗೆ ಕಟ್ಟಪ್ಪಣೆ ಮಾಡಿದ. ಡೇನಿಯಲ್ ಕೈಯಲ್ಲಿ ಒಂದು ಲಾಂದ್ರ ಹಿಡಿದುಕೊಂಡು ಮಲ್ಲಿಕಾರ್ಜುನ ದೇವಾಲಯದ ಬಳಿಗೆ ಬಂದಾಗ ಸಮಯ ಬೆಳಗಿನ ಜಾವ ಮೂರು ಗಂಟೆಯಾಗಿತ್ತು. ಇನ್ನೂ ಜಿಟಿಜಿಟಿ ಮಳೆ ಹನಿಯುತ್ತಿತ್ತು. ದೇವಾಲಯದ ಸುತ್ತ ನಿಂತ ಮಳೆ ನೀರು. ಒಂದೊಂದು ಹೆಜ್ಜೆ ಇಟ್ಟಾಗಲೂ ಕಾಲು ಕೆಸರಿನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿತ್ತು. ಜೊತೆಗೆ ಸುತ್ತಲೂ ದಟ್ಟವಾಗಿ ಕವಿದ ಕತ್ತಲು. ಪಕ್ಕದ ಕಾಡಿನಿಂದ ವಿಕಾರವಾಗಿ ಹುಯಿಲಿಡುತ್ತಿದ್ದ ನರಿಗಳ ಕೂಗು. ಡೇನಿಯಲ್ ಎಡಗೈಯಲ್ಲಿ ಲಾಂದ್ರ ಹಿಡಿದು ಬಲಗೈಯನ್ನು ಸೊಂಟಕ್ಕೆ ಹಾಕಿ ಪಿಸ್ತೂಲನ್ನು ಹೊರತೆಗೆದ. ಮೆಲ್ಲನೆ ದೇವಾಲಯದ ಒಳಕ್ಕೆ ಹೆಜ್ಜೆ ಇಟ್ಟ. ಅವನ ಹಿಂದೆಯೇ ಅಬ್ದುಲ್ ಹಕ್ ಮತ್ತು ಸ್ಟೀಫನ್ ಸನ್ ಹಿಂಬಾಲಿಸಿದರು. ಒಳಗೆ ದೇವಾಲಯದ ಮೂಲೆಗಳಲ್ಲಿ ಬೆಳಗುತ್ತಿದ್ದ ಚಿಕ್ಕ ಕೈದೀವಿಗೆಗಳು. ಅದರಿಂದ ಬರುತ್ತಿದ್ದ ನಸು ಬೆಳಕಿನಲ್ಲಿ ಅಲ್ಲಲ್ಲಿ ಜನ ಮಲಗಿ ನಿದ್ರಿಸುತ್ತಿದ್ದುದು ಮಸುಕು ಮಸುಕಾಗಿ ಕಾಣುತ್ತಿತ್ತು. ಬೆಕ್ಕಿನಂತೆ ನಿಶ್ಶಬ್ದವಾಗಿ ಹೆಜ್ಜೆ ಇಡುತ್ತಾ ಕೈಲಾಂದ್ರವನ್ನು ಮಲಗಿದವರ ಮುಖಗಳ ಹತ್ತಿರ ತರುತ್ತಾ ಒಬ್ಬೊಬ್ಬರನ್ನಾಗಿ ಪರೀಕ್ಷಿಸುತ್ತಾ ಮುಂದುವರಿದ. ಅಷ್ಟರಲ್ಲಿ ಅವನ ಗಮನ ಸ್ವಲ್ಪ ದೂರದಲ್ಲಿ ಮಲಗಿದ್ದ ಒಂದು ಕಡೆ ಹರಿಯಿತು. ಬಗ್ಗಿ ನೋಡಿದ. ಹೌದು, ಅನುಮಾನವೇ ಇಲ್ಲ. ಅಲ್ಲಿ ಮಲಗಿದ್ದವನು ಅವನೇ ಹಲವಾರು ತಿಂಗಳಿಂದ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಮುಟ್ಟಿ



ನೋಡಿಕೊಳ್ಳುವಂತೆ ಪೆಟ್ಟು ಕೊಡುತ್ತಿದ್ದ ವಾಸುದೇವ ಬಲವಂತ ಫಡಕೆ! ತನ್ನನ್ನು ಹಗಲಿರುಳೆನ್ನದೆ ಅಂಡಲೆಯುವಂತೆ ಮಾಡಿದ ಬಂಡುಕೋರ ಫಡಕೆ. ಡೇನಿಯಲ್ ಮುತ್ತಿಗೆ ಹಾಕಿದಾಗ ವಾಸುದೇವನು ಅತಿಯಾಗಿ ದಣಿದು ಮಲಗಿದ್ದನು. ಮೈಯಲ್ಲಿ ಜ್ವರ ಕಾಯುತ್ತಿತ್ತು. ದೇವಾಲಯವೊಂದರಲ್ಲಿ ಮಲಗಿ ನಿದ್ರಿಸುತ್ತಿದ್ದ ಆ ಕ್ರಾಂತಿಸಿಂಹವನ್ನು ಕೈ ಸೆರೆಹಿಡಿದರು. ಕಣ್ಣು ಬಿಡುತ್ತಿದ್ದಂತೆ ತಾನು ಸೆರೆಯಾಳಾಗಿರುವುದನ್ನು ಫಡಕೆ ಕಂಡನು. ಸೆರೆಸಿಕ್ಕರೂ ಶರಣಾಗತನಾಗಲಿಲ್ಲ ವಾಸುದೇವ. ಮಲಗಿದ್ದವನನ್ನು ಬಂಧಿಸುವುದು ಹೇಡಿತನವೆಂದು ಹೇಳಿ ತನ್ನೊಡನೆ ದ್ವಂದ್ವ ಯುದ್ಧ ಮಾಡಿ ಗೆಲ್ಲಲು ಸವಾಲು ಹಾಕಿದ. ಆದರೆ ಡೇನಿಯಲ್ ಅವನ ಆಹ್ವಾನವನ್ನೊಪ್ಪದೆ ಸೈನಿಕರ ಸಹಾಯದಿಂದ ಅವನನ್ನು ಬಂಧಿಸಿದ. ಅವನಿಗೆ ಸಹಾಯ ಮಾಡಿದ್ದ ಆತನ ಸಂಗಡಿಗರನ್ನೂ ಸೆರೆಹಿಡಿದು ಅವರೆಲ್ಲರನ್ನೂ ಸಶಸ್ತ್ರ ಕಾವಲಿನಲ್ಲಿ ಪುಣೆಗೆ ಕರೆತಂದ. ಈ ಕ್ರಾಂತಿಕಾರಿ ವೀರನ ಮೇಲೆ ಹಲವಾರು ಮೊಕದ್ದಮೆ ಹೂಡಿ ಜೀವಾವಧಿ ಶಿಕ್ಷೆ ವಿಧಿಸಿ ದೂರದ ಅರೇಬಿಯಾದ ದಕ್ಷಿಣ ತುದಿಯಲ್ಲಿರುವ ಏಡನ್ ಜೈಲಿಗೆ ಕರೆತರುತ್ತಾರೆ.

ಏಡನ್! ವಾಸುದೇವನ ಪಾಲಿಗೆ ಅದೊಂದು ನರಕವಾಗಿತ್ತು. ಈ ನರಕದಲ್ಲಿ ಕೊಳೆತು ಸಾಯುವುದಕ್ಕಿಂತ ಹೇಗಾದರೂ ಮಾಡಿ ಓಡಿಹೋಗಬಾರದೇಕೆ ಎನ್ನುವ ವಿಚಾರ ತಲೆಯಲ್ಲಿ ಸುಳಿಯಿತು. ಒಂದು ವೇಳೆ ಸಿಕ್ಕಿಬಿದ್ದರೂ, ಈ ನರಕವಾಸಕ್ಕಿಂತ ಅದೇ ಉತ್ತಮ ಎಂದೆನಿಸಿತು. ಜೈಲಿನಿಂದ ಪರಾರಿಯಾಗುವ ಹಂಚಿಕೆ ಹಾಕತೊಡಗಿದ. ಅದು ೧೮೮೪ರ ಅಕ್ಟೋಬರ್ ೧೨ನೆಯ ದಿನ, ಮಂಗಳವಾರದ ಸಾಯಂಕಾಲದ ಹೊತ್ತು. ಎಂದಿನಂತೆ ಬೆನ್ನು ಮುರಿಯುವಂತೆ ದುಡಿದಿದ್ದ ಈ ಕೈದಿಯನ್ನು ಜೈಲಿನಲ್ಲಿ ಸೆರೆ ಹಾಕಿ ಕಾವಲುಗಾರರು ತೆರಳಿದ್ದರು. ಕತ್ತಲು ಆಗುವುದನ್ನೇ ಕಾದುಕೊಂಡು ಕುಳಿತಿದ್ದ ವಾಸುದೇವನ ಮೈಯೆಲ್ಲಾ ದಣಿದು ದಂಟಾಗಿತ್ತು. ಆದರೆ ಮನಸ್ಸಿನಲ್ಲಿ ಸಂಕಲ್ಪ ಮಾತ್ರ ಅಚಲವಾಗಿತ್ತು. ಭಾರತಮಾತೆಯ ನೆನಪಾಯಿತು. ದೇವರ ಸ್ಮರಣೆ ಮಾಡಿದ. ಮೈಯಲ್ಲಿ ಆನೆಯ ಬಲ ಸಂಚರಿಸಿದಂತಾಯಿತು. ಸರ್ವಶಕ್ತಿಯನ್ನು ಒಗ್ಗೂಡಿಸಿ ಕೈಕಾಲುಗಳಿಗೆ ಹಾಕಿದ ಬೇಡಿಗಳನ್ನು ಕೊಡವಿ ಕಡಿದು ಹಾಕಿದನು. ಕೊಠಡಿಯ ಬಾಗಿಲುಗಳನ್ನು ಬುಡಸಹಿತ ಎತ್ತಿ ಕಿತ್ತಿ ಹಾಕಿದ. ಆ ಬಾಗಿಲುಗಳನ್ನೇ ಗೋಡೆ ಏರುವ

ಏಣಿಯಾಗಿಸಿದನು. ಕಾವಲುಗಾರರು ಮಲಗಿದ ಸಂಧಿ ಸಾಧಿಸಿ ಸೆರೆಮನೆಯ ಗೋಡೆಯನ್ನು ಜಿಗಿದು ಓಟಕಿತ್ತನು. ಪಂಜರದಲ್ಲಿನ ಸಿಂಹ ಪರಾರಿಯಾಯಿತು. ಇತ್ತ ಸೆರೆಮನೆಯಲ್ಲಿ ಈ ಪ್ರಚಂಡ ಕೈದಿ ಪರಾರಿಯಾಗಿರುವುದು ಗೊತ್ತಾಗುತ್ತಲೇ ದೊಡ್ಡ ಕೋಲಾಹಲವೆದ್ದಿತ್ತು. ಜೈಲು ಅಧಿಕಾರಿಗಳು ಗಡಗಡ ನಡುಗಿದರು. ಏಡನ್ನಿನ ಪ್ರತಿ ಮನೆಯನ್ನು ಜಾಲಾಡಿದರು. ಹಿಡಿದುಕೊಟ್ಟವರಿಗೆ ೪೦೦೦ ರೂಪಾಯಿ ಬಹುಮಾನ ಕೊಡುವುದಾಗಿ ಘೋಷಿಸಿದರು. ಬಹುಮಾನದ ಆಸೆಯಿಂದ ಅರಬ್ ಜನರು ಕುದುರೆ ಹತ್ತಿ ನಾಲ್ಕೂ ಕಡೆ ವಾಸುದೇವನ ಬೇಟೆಗೆ ಹೊರಟರು. ದುರ್ದೈವ ವಾಸುದೇವನ ಬೆನ್ನು ಬಿಟ್ಟಿರಲಿಲ್ಲ. ಹಸಿದ ಹೊಟ್ಟೆಯಿಂದ ಹನಿ ನೀರು ಕುಡಿಯದೇ ಓಡಿ ಓಡಿ ಬಳಲಿ ಬೆಂಡಾಗಿದ್ದ ವಾಸುದೇವನನ್ನು ಈ ಅರಬ್ ಸವಾರರು ಏಡನ್ನಿನಿಂದ ಹನ್ನೆರಡು ಮೈಲಿ ದೂರದಲ್ಲಿರುವ ಬೀರ ಓಬೇದ್ ಎನ್ನುವ ಹಳ್ಳಿಯ ಬಳಿ ಹಿಡಿದು ಮತ್ತೆ ಏಡನ್ನಿಗೆ ತಂದು ಕೈಕಾಲುಗಳಿಗೆ ದಪ್ಪವಾದ ಬೇಡಿ ಹಾಕಿ ಕೂಡಿ ಹಾಕಿದರು. ಕಾಲಕ್ರಮೇಣ ವಾಸುದೇವನ ಶರೀರ ಜರ್ಜರಿತವಾಯಿತು. ಬ್ರಿಟಿಷರ ಕರಾಳ ಹಿಂಸೆಯಿಂದ ಕಾಯಿಲೆಗೆ ತುತ್ತಾದ ಆತನ ದೇಹ ಅಸ್ಥಿಪಂಜರವಾಗಿ ಹೋಗಿತ್ತು. ಪ್ರತಿದಿನವೂ ಭಾರತಾಂಬೆ ಭಾರತಾಂಬೆ ಎಂದು ಸ್ವಾತಂತ್ರ್ಯದ ಧ್ಯಾನವನ್ನು ಮಾಡುತ್ತಾ ಕೊರಗಿ ಕೊರಗಿ ಕೊನೆಗೆ ೧೮೮೩ರ ಫೆಬ್ರವರಿ ೧೭ರಂದು ವಾಸುದೇವ ಬಲವಂತ ಫಡಕೆ ಎಂಬ ಅತಿದೊಡ್ಡ ಸಿಂಹ ಭಾರತಮಾತೆಯನ್ನು ನೆನೆಯುತ್ತ ತನ್ನ ಪ್ರಾಣವನ್ನೇ ಬಿಟ್ಟಿತು. ಕೇವಲ ೩೮ ವರ್ಷಕ್ಕೆ ದೇಶದ ಸ್ವಾತಂತ್ರ್ಯದ ಕನಸಿನಲ್ಲಿ ಬಲಿದಾನ ಮಾಡಿದ ಈ ಕ್ರಾಂತಿ ಪುರುಷನ ಸ್ಮರಣೆ ದೇಶಭಕ್ತರಿಗೆ ಸ್ಫೂರ್ತಿದಾಯಕವಾಗಿದೆ. ಹೀಗೆ ಇನ್ನೂ ಅನೇಕ ಕ್ರಾಂತಿಕಾರಿಗಳು ನಮ್ಮ ದೇಶಕ್ಕೆ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಆದರೆ ಇಂದಿನ ಯುವಜನತೆ ಆಧುನಿಕ ಮೋಹಕ್ಕೆ ಒಳಗಾಗಿ ಅಂತಹ ವೀರಪುರುಷರ ಕಥೆಯನ್ನೇ ಮರೆತು ಬಿಟ್ಟಿದೆ. ಮತ್ತೆ ನೆನಪಿಸೋಣ ಕ್ರಾಂತಿಕಾರಿಗಳನ್ನು. ಜೈ ಅನ್ನೋಣ ವಾಸುದೇವನ ಮಹಾ ಸಾಹಸಗಳನ್ನು. ಆಗಬೇಕಾಗಿದೆ ಇತಿಹಾಸದ ಪುಟಗಳಲ್ಲಿ ದಾಖಲಿಸುವ ಕಾರ್ಯ ಅವನ ಧೀರೋದಾತ್ತತೆಯನ್ನು. ಮುಂದಿನ ಪೀಳಿಗೆಗೆ ಅವನ ಯಶೋಗಾಥೆಯನ್ನು ಪ್ರಚುರಿಸುವ ಕಾರ್ಯ ನಡೆಯಲಿ.

❑

# ಅನುಬಂಧ : ಪೂರಕ ಲೇಖನ–೨

## ಕೆಚ್ಚೆದೆಯ ಕ್ರಾಂತಿಯ ಹಾಡುಗಳ ಕಟ್ಟಿದ ಕಡಣಿ ಕಲ್ಲಪ್ಪ

**ಡಾ. ಸಂಗಮನಾಥ ಎಂ. ಲೋಕಾಪೂರ**

ಉತ್ತರ ಕರ್ನಾಟಕದ ಜನಪ್ರಿಯ ಹಾಡುಗಾರಿಕೆಯ ಪ್ರಮುಖ ಪ್ರಕಾರಗಳಲ್ಲಿ ಗೀಗೀ ಪದ ಸಾಹಿತ್ಯವೂ ಒಂದು. ಕನ್ನಡ ಲಾವಣಿ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಪಾರ. ಇಂದಿಗೂ ಈ ನೆಲ ಈ ಸಾಹಿತ್ಯದ ತವರುಮನೆಯೆಂದೇ ಪ್ರಸಿದ್ಧಿ. ಅದರಲ್ಲಿಯೂ ವಿಜಾಪುರ ಜಿಲ್ಲೆಯಂತೂ ಗೀಗೀ ಪದ ಸಾಹಿತ್ಯದ ಗಂಡುಮೆಟ್ಟಿನ ನೆಲವೆಂದೇ ಖ್ಯಾತಿ.

ಸಾರವಾಡದ ಹಸನಸಾಬ ಸನದಿ, ಕೋರಳ್ಳಿಯ ಮೌಲಾಲಿ, ಹಲಸಂಗಿಯ ಖಾಜಾಭಾಯಿ, ಆಲಮೇಲದ ರಾಮಸಿಂಗ ರಜಪೂತ ಇವರೆಲ್ಲ ವಿಜಾಪುರ ಜಿಲ್ಲೆಯ ಸುಪ್ರಸಿದ್ಧ ಗೀಗೀ ಪದಕಾರರು. ಇವರ ಸಾಲಿನಲ್ಲಿಯೇ ಬರುವ ಈ ಭಾಗದ ಇನ್ನೊರ್ವ ಅಪರೂಪದ ಗೀಗೀ ಪದಕಾರನೇ ಕಡಣಿ ಕಲ್ಲಪ್ಪ.

ಕಡಣಿ ಕಲ್ಲಪ್ಪನೊಬ್ಬ ಆಶು ಕವಿ, ಗವಾಯಿ. ಕುಂತಲ್ಲಿ ನಿಂತಲ್ಲಿ ಪ್ರಾಸದ ಮೇಲೆ ಗೀ ಗೀ ಪದ ಕಟ್ಟುತ್ತಿದ್ದ ಹರದೇಶಿ ಹಾಡುಗಾರ. ರಾಮಾಯಣ ಮಹಾಭಾರತ ಕಥೆಯ ಅನೇಕ ಮಹತ್ವದ ಪ್ರಸಂಗಗಳನ್ನು ಹಾಡುಗಳನ್ನಾಗಿ ಪರಿವರ್ತಿಸಿಕೊಂಡು ಜನರ ಮಸ್ಸಿನಲ್ಲಿ ಅಚ್ಚು ಒತ್ತುವ ಹಾಗೆ ಹಾಡುತ್ತಿದ್ದ ಅಪ್ರತಿಮ ಕಲಾವಿದ. ಹಾಗೆಯೇ ಸುಪ್ರಸಿದ್ಧ ಕಲಬುರ್ಗಿ ಶರಣಬಸಪ್ಪ ಖಾಜಾ ಬಂದೇನವಾಜ, ಕಲ್ಯಾಣದ ಬಸವಣ್ಣ ಹಾಗೂ ಇನ್ನುಳಿದ ಶರಣರ ಮೇಲೆ ದಣಿವರಿಯದೆ ಹಾಡುತ್ತಿದ್ದ ಕವಿ ಕಲಾಕಾರ.

ಸಿಂದಗಿ ತಾಲ್ಲೂಕಿನ ಭೀಮಾ ತೀರದ ಸಣ್ಣ ಹಳ್ಳಿ ಕಡಣಿ. ಇಂದಿಗೂ ಇದಕ್ಕೆ ಕಲ್ಲಪ್ಪನ ಕಣ್ಣಿ (ಕಡಣಿ)ಎಂದೇ ಹೆಸರು. ಈ ಊರಿನ ಕ್ಷತ್ರಿ ಮನೆತನದ ಗಂಗಣ್ಣ ಮತ್ತು ಲಕ್ಷ್ಮೀಬಾಯಿಯವರ ಮಗನಾಗಿ ೧೯೧೦ ಜೂನ ೧ರಂದು ಜನಿಸಿದ ಕಲ್ಲಪ್ಪ ಕಲಿತದ್ದು ಕೇವಲ ಅಂದಿನ ಮೂರನೆಯ ಇಯತ್ತೆಯ ವರೆಗೆ ಮಾತ್ರ. ಆ ಊರಿನ ಗೌಂಟಿ ಶಾಲೆಯ ಹುಸೇನ ಪಟೇಲ ಮಾಸ್ತರ ಇವನ ಶಾಲಾ ಗುರು. ಕಲ್ಲಪ್ಪ ಚಿಕ್ಕವನಿರುವಾಗಲೇ ಸರಸ್ವತಿ ಕೃಪಾಪೋಷಿತ. ಇದರ ಪರಿಣಾಮ ಎಂಟನೆಯ ವಯಸ್ಸಿನಲ್ಲಿಯೇ ಕೂತಕೂತಲ್ಲಿ ಹಾಡು ಗೀಚುವ ಗೀಳು ಎಲ್ಲಿಂದಲೋ ಬಂದು ಅವನಿಗಂಟಿಕೊಂಡಿತ್ತು.ಇದರೊಂದಿಗೆ ಹಾಡುವ ಹವ್ಯಾಸವಿಷ್ಟು ಅವನನ್ನು ಬೆಸೆದುಕೊಂಡಾಗ ಕೇಳಲಾದೀತೆ? ಸುರುವಾಗಿ ಬಿಟ್ಟಿತ್ತು, ಸ್ವತಃ ಪದಕಟ್ಟಿ ಹಾಡುವ ಗತ್ತು.

ಅದೇ ಊರಿನ ನಾವಿದರ ರುಕ್ಮಣ್ಣ ಇವನಿಗೆ ಗೀಗೀ ಪದ ಹಾಡುವ ಗುಂಗು ಹಿಡಿಸಿದ. ಆರಂಭದಲ್ಲಿ ಊರಿನ ಆರಾಧ್ಯ ದೇವತೆ ಭೋಗೇಶ್ವರನ ಹೆಸರಿನ ಮೇಲೆ ಹಾಡು ಹೇಳುತ್ತಿದ್ದ ಕಲ್ಲಪ್ಪ, ಬರುಬರುತ್ತಾ ಕಡಣಿ ಕಲ್ಲಪ್ಪನೆಂಬ ಕಾವ್ಯನಾಮದೊಂದಿಗೆ ಹಾಡಹತ್ತಿದ. ಕಲ್ಲಪ್ಪ ಅಪ್ರತಿಮ ಹಾಡುಗಾರ, ಸರಸ್ವತಿ ಅವನ ನಾಲಿಗೆಯ ಮೇಲೆಯೇ ಇರುತ್ತಾಳೋ ಏನೋ ಎಂಬಂತೆ ವೇದಿಕೆಯ ಮೇಲೆ ನಿಂತಿರಲಿ, ಕುಂತಿರಲಿ ಸಂದರ್ಭವನ್ನು ಗಮನಿಸಿ ತನಗೆ ಕಂಡದ್ದನ್ನು ಪದ ಮಾಡಿ ಹಾಡುವ ಕಲೆ ಅವನಿಗೆ ಕರಗತವಾಗಿತ್ತು.

ಕಲ್ಲಪ್ಪನೊಬ್ಬ ಅನುಭಾವಿ ಕವಿ. ಅವನ ಹಾಡಿನಲ್ಲಿರುತ್ತಿದ್ದ ಅನುಭಾವದ ರಸಪಾಕ ಎಂಥವರನ್ನೂ ಬೆರಗುಗೊಳಿಸುತ್ತಿತ್ತು. ಅದು ಸಮಾಜದ ನೈಜ ಚಿತ್ರಣವನ್ನೇ ಕುರಿತದ್ದಾಗಿರುತ್ತಿದ್ದುದರಿಂದ ಜನ ಅವನ ಹಾಡನ್ನು ಮೈಮರೆತು ಕೇಳುತ್ತಿದ್ದರು. ೧೯೫೧ರಲ್ಲಿ ಕಡಣಿಗೆ ಕಲೆಕ್ಟರ್ ಸಾಹೇಬ ಬಂದಿದ್ದ, ಒಡ್ಡಿನ ಸಾಲದ ದುರುಪಯೋಗ ಕುರಿತು ಅವನು ರೈತರಿಗೆ ಮಾಹಿತಿ ಕೊಡಬೇಕಾಗಿತ್ತು. ಇದನ್ನು ಅವನಿಗಿಂತ ಪೂರ್ವದಲ್ಲಿಯೇ ಹಾಡಿನ ಮೂಲಕ ಜನಕ್ಕೆ ತಿಳಿಸಿಕೊಟ್ಟಾಗ ಆ ಕಲೆಕ್ಟರ್ ಸಾಹೇಬ ಕಲ್ಲಪ್ಪನ ಬೆನ್ನು ಚಪ್ಪರಿಸಿ, ಸಭಿಕರಿಗೆ ನಾನು ಹೇಳುವದೇನಿದೆ? ಎಲ್ಲವನ್ನು ಕಲ್ಲಪ್ಪ ಸವಿಸ್ತಾರವಾಗಿ ಹಾಡಿಬಿಟ್ಟಿದ್ದಾನೆಂದು ಕಲ್ಲಪ್ಪನನ್ನು ಹೃದಯಾರೆ ಪ್ರಶಂಸಿಸಿ ಕೈ ಮುಗಿದು ಹೋದನಂತೆ. ಇದನ್ನು ಆ ಊರಿನ ಜನ ಇಂದಿಗೂ ಅಭಿಮಾನದಿಂದ ಮೆಲಕು ಹಾಕುತ್ತಾರೆ.



**ನಾ ಗರತಿ/ ನೀ ಗರತಿ**
**ಹಾಕ್ಯಾರೋ ಮಂದಿ ಬಾಳಾ ಇತಿ**
**ಮೂರು ಲೋಕದಲ್ಲಿ ಯಾರೂ ಇಲ್ಲ ಗುಣವಂತಿ**
**ಪತಿವ್ರತಾ ನಮ್ಮ ಲೀಲಾವತಿ//**

ಇದು ಓರ್ವ ಗಂಡ ತನ್ನ ಹೆಂಡತಿಯ ಶೀಲವನ್ನೇ ಶಂಕಿಸಿ, ಆಕೆಯಿಂದ ದೂರವಾಗಿ, ಆಮೇಲೆ ಸತ್ಯಾಂಶ ಹೊರಬಿದ್ದ ಮೇಲೆ ಆಕೆಯೊಂದಿಗೆ ಮತ್ತೆ ಒಂದಾಗುತ್ತಾನೆ. ನಮ್ಮ ಸಾಮಾಜಿಕ ಜೀವನದ ಸತ್ಯಸಂಗತಿಯನ್ನು ಆಧರಿಸಿ ಹಾಡಿದ ಅವನದೇ ಹಾಡಿದು.

ದೇಶದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯ ಮೇಲೆ ಅತ್ಯಂತ ಅಭಿಮಾನದಿಂದ ಹಾಡು ಹೇಳುತ್ತಿದ್ದ ಕಲ್ಲಪ್ಪ–

**ಶುದ್ಧ ಖಾದಿ ಧರಿಸಿದಂಥ**
**ಯೋಧರಿಂದ ಯುದ್ಧ ಮಾಡಿ**
**ಗೆದ್ದ ಭೂಪ ಗಾಂಧೀಜಿ ಜಗದೊಳಗ$//**
**ಕಲಿ ಕಾಲದೊಳಗ//**

ಎಂದು ಕೇಳಿದವರ ಮೈಮೇಲಿನ ರೋಮಗಳೆಲ್ಲ ಸೆಟೆದು ನಿಲ್ಲುವ ಹಾಗೆ ಹೃದಯ ತುಂಬಿ ಹಾಡುತ್ತಿದ್ದ.

**ನಮ್ಮ ನಾಡು ಇತ್ತು ಹೆಂಗ**
**ಇಂಗ್ಲೀಷರು ಬರುವ ಮುನ್ನ**
**ಜೋಡ ದಡಿಯ ಧೋತರ ಪಾಡ**
**ಮ್ಯಾಂಚೆಸ್ಟರ ಧೋತರ ಹೊರಗ ದೂಡ//**

ಹೀಗೆಂದು ಸ್ವದೇಶಿ ಚಳುವಳಿಯ ಸಂದರ್ಭದಲ್ಲಿ ತುಂಬಿದ ಸಭೆಗಳಲ್ಲೆಲ್ಲ ವಿದೇಶಿ ವಿರುದ್ಧ ಗುಡುಗುತ್ತಿದ್ದ. ಇಷ್ಟೊಂದು ದೇಶಪ್ರೇಮಿಯಾಗಿದ್ದ ಕಲ್ಲಪ್ಪ ತನ್ನ ಗೀಗೀ ಪದ ಹಾಡುವಿಕೆಯ ಮೂಲಕ ನಾಡಿನ ಎಲ್ಲ ಭಾಗವನ್ನು ಸುತ್ತಿ ಬಂದಿದ್ದ. ರಾಜ್ಯದ ಕಲಬುರ್ಗಿ, ಬೀದರ, ಜಮಖಂಡಿ ಭಾಗವನ್ನೆಲ್ಲ ತಿರುವಿ

ಹಾಕಿದ್ದ. ಹೊರ ರಾಜ್ಯದ ಸೊಲ್ಲಾಪುರ, ಸಾತಾರ, ಜಹೀರಾಬಾದ (ಆಂಧ್ರಪ್ರದೇಶ) ಗಳಲ್ಲಿಯೂ ಹಾಡಿ ಹೆಸರುವಾಸಿಯಾಗಿದ್ದ.

ಸುಮಾರು ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಗೀಗೀ ಪದಕಾರರನಾಗಿಯೇ ಜೀವನ ಕಳೆದ ಕಲ್ಲಪ್ಪ ೧೯೭೩ರಲ್ಲಿ ತನ್ನ ಸ್ವಗ್ರಾಮ ಕಡಣಿಯಲ್ಲಿ ನಿಧನ ಹೊಂದಿದನು. ಸಾವಿನ ಕೊನೆಯ ದಿನಗಳಲ್ಲಿ ಅವನ ಬದುಕು ಅತ್ಯಂತ ಕಷ್ಟಕರವಾಗಿತ್ತು. ಹಾಡುವಾಗಿದ್ದ ಸುಖ ಗೌರವಗಳು ಅವನು ಸಾಯುವಾಗ ಇರಲಿಲ್ಲ. ಕೊನೆಯ ದಿನಗಳಲ್ಲಿ ಅವನಿಗೆ ದಮ್ಮು ಸೇರಿಕೊಂಡಿತ್ತು. ಮನೆತನದ ಆರ್ಥಿಕ ಸ್ಥಿತಿಯೂ ಸರಿಯಾಗಿರಲಿಲ್ಲ. ಆರಂಭದಿಂದ ಪ್ರಚಾರ, ಪ್ರಸಿದ್ಧಿ ಎರಡರಿಂದಲೂ ದೂರವಿದ್ದ ಕಲ್ಲಪ್ಪ ಬದುಕಿರುವವರೆಗೂ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಅಜ್ಞಾತ ಕಲಾವಿದ. ಈಗಲೂ ಕಲ್ಲಪ್ಪನ ಸಂಬಂಧಿಕರು ಕಡಣಿಯಲ್ಲಿದ್ದಾರೆ. ಅವರ ಪರಿಸ್ಥಿತಿಯೂ ಚಿಂತಾಜನಕವಾಗಿದೆ. ಸ್ವಂತ ಮನೆಯಿರದೆ, ಗೇಣು ಹೊಲವೂ ಇರದೆ ಅವರೆಲ್ಲ ಈಗ ಪುಣಾ, ಗೋವಾ ಕಡೆಗೆ ಹೊಟ್ಟೆ ಹೊರೆಯಲು ಗುಳೇ ಹೋಗಿದ್ದಾರೆ.

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಐದು ದಶಕಗಳ ಕಾಲ ಜನಪ್ರಿಯ ಗೀಗೀ ಪದಕಾರನೆನಿಸಿಕೊಂಡ ಕಲಾವಿದನೊಬ್ಬನ ಜೀವನದ ಈ ಯಶೋಗಾಥೆ ಎಂಥವರ ಕರುಳನ್ನೂ ಹಿಚುಕದಿರದು. ಈಗಲಾದರೂ ಸರ್ಕಾರ ಮನಸ್ಸು ಮಾಡಿ ಕಲ್ಲಪ್ಪನ ಬಿದ್ದ ಮನೆಗೆ ದೀಪ ಹಚ್ಚಿ ಆ ಮನೆಯನ್ನು ಒಂದು ಸಾಂಸ್ಕೃತಿಕ ಸ್ಮಾರಕವನ್ನಾಗಿ ಮಾಡಬೇಕು. ಕಡಣಿ ಕಲ್ಲಪ್ಪನ ಗೀಗೀ ಸಾಹಿತ್ಯದ ಕುರಿತು ಅಧ್ಯಯನ ನಡೆಸಬೇಕು. ಇಷ್ಟಾದರೂ ಮಾಡಿದರೆ ಸರ್ಕಾರ ಮತ್ತು ಜನತೆ ಕಲ್ಲಪ್ಪನ ನಿಸ್ವಾರ್ಥ ಕಲಾಜೀವನದ ಋಣ ತೀರಿಸಿದಂತೆ.

## ಗ್ರಂಥ ಋಣ

೧ ಆಲಮೇಲ ತಾಲ್ಲೂಕು ದರ್ಶನ – ಲೇ: ಎಸ್.ಕೆ.ಗುಗ್ಗರಿ ಪ್ರ: ಬೆರಗು ಪ್ರಕಾಶನ, ಕಡಣಿ

೨ ಚಿಕ್ಕರೂಗಿ ಚಳುವಳಿಗಾರರು– ಲೇ: ಡಾ. ಸಂಗಮನಾಥ ಲೋಕಾಪೂರ, ಪ್ರ: ಪುರುಷೋತ್ತಮ ಪ್ರಕಾಶನ, ಸಿಂದಗಿ

೩ ಗೀ ಗೀ ಗಾರುಡಿಗ ಕಡಣಿ ಕಲ್ಲಪ್ಪ– ಲೇ: ಡಾ.ರಮೇಶ ಎಸ್.ಕತ್ತಿ ಪ್ರ: ಬೆರಗು ಪ್ರಕಾಶನ, ಕಡಣಿ

೪ ಭಾರತ ಸ್ವಾತಂತ್ರ್ಯ ಸಂಗ್ರಾಮ– ಡಾ.ಮಹಾಂತೇಶ ಗುಬ್ಬೇವಾಡ ಪ್ರ: ಮಾನಸ ಪ್ರಕಾಶನ, ವಿಜಯಪುರ

೫ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು– ಡಾ. ಸೂರ್ಯನಾಥ ಕಾಮತ್ ಪ್ರ: ಗೀತಾ ಬುಕ್ ಹೌಸ್, ಮೈಸೂರು

೬ ಮರೆಯಲಾಗದ ಮಹಾನುಭಾವರು– ಲೇ: ದೇವರಾಜ ಬಾಗೇವಾಡಿ ಪ್ರ: ಶ್ರೀ ಬೀರಲಿಂಗೇಶ್ವರ ಪ್ರತಿಷ್ಠಾನ, ತಾಳಿಕೋಟೆ

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖